ಸೋಮವಾರ, ನವೆಂಬರ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 328 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ
ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವೀ ಶಿಕ್ಷಕರಿಂದ ಸಿದ್ಧಪಡಿಸಿರುವ 'ಮಾದರಿ ಪ್ರಶ್ನೋತ್ತರ' ಗಳ ಪರೀಕ್ಷಾ ದಿಕ್ಸೂಚಿ ಇಂದಿನಿಂದ... 4

'ಗಡಿ ವಿವಾದ: ಕಾನೂನು ಸಮರಕ್ಕೆ ರಾಜ್ಯ ಸಿದ್ಧ'

ಬೆಂಗಳೂರು: 'ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕಾನೂನು ಸಮರಕ್ಕೆ ನಮ್ಮ ರಾಜ್ಯ ಎಲ್ಲ ರೀತಿಯಲ್ಲಿ ಸಿದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. 5

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಶೇ 12ಕ್ಕೆ ಬೇಡಿಕೆ: ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಪಟ್ಟು

ಮೀಸಲು ಹೆಚ್ಚಳ: ಜ.23ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಕ್ಕಲಿಗ ಉಪ ಪಂಗಡಗಳನ್ನು ಒಳಗೊಂಡ ರಾಜ್ಯದ ಇತರ ಹಿಂದುಳಿದ ವರ್ಗಗಳ 'ಪ್ರವರ್ಗ -3ಎ'ಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಮುಂಬರುವ ಜನವರಿ 23ರ ಒಳಗೆ ಶೇ 4 ರಿಂದ ಶೇ 12ಕ್ಕೆ ಹೆಚ್ಚಿಸಬೇಕು' ಎಂದು ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಪಟ್ಟು ಹಿಡಿದಿದೆ. ಗಡುವಿನೊಳಗೆ ಬೇಡಿಕೆ ಈಡೇರಿಸದಿದ್ದರೆ ರಾಜ್ಯವ್ಯಾಪಿ ಹೋರಾಟ ತೀವ್ರಗೊಳಿಸುವ ಬೆದರಿಕೆಯನ್ನೂ ಒಡ್ಡಿದೆ.

ಒಕ್ಕಲಿಗರ ಸಂಘದ ಆವರಣದಲ್ಲಿರುವ ಕುವೆಂಪು ಕಲಾಕ್ಷೇತ್ರದಲ್ಲಿ ಆದಿಚುಂಚನಗಿರಿ ಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಉಪಸ್ಥಿತಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಒಕ್ಕಲಿಗ ನಾಯಕರು ಒಕ್ಕೊರಲಿನಿಂದ ಈ ಬೇಡಿಕೆ ಇಟ್ಟಿದ್ದಾರೆ.

ಸಭೆಯಲ್ಲಿದ್ದ ಕಂದಾಯ ಸಚಿವ ಆರ್. ಅಶೋಕ ಅವರಿಗೆ ನಿರ್ಮಲಾನಂದನಾಥ ಸ್ವಾಮೀಜಿ ಹಕ್ಕೊತ್ತಾಯದ ಮನವಿಯನ್ನು ನೀಡಿದರು. 'ಮೀಸಲಾತಿ ಪ್ರಮಾಣ ಹೆಚ್ಚಿಸುವುದೂ ಸೇರಿದಂತೆ ಒಕ್ಕಲಿಗ ಸಮುದಾಯದ ಬೇಡಿಕೆಗಳ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸುತ್ತೇನೆ. ಸಮುದಾಯದ ಪರವಾಗಿ ನಿಲ್ಲುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ಅಶೋಕ ಭರವಸೆ ನೀಡಿದರು.

'ರಾಜ್ಯದಲ್ಲಿ ಒಕ್ಕಲಿಗರ ಜನಸಂಖ್ಯೆ ಶೇ 16 ರಷ್ಟಿದೆ. ಆದರೆ, ಮೀಸಲಾತಿ ಶೇ 4 ರಷ್ಟು ಮಾತ್ರ. ನಾಡಿಗೇ ಆಹಾರ ಭದ್ರತೆ ಕೊಟ್ಟಿರುವ ಸಮಾಜ ನಮ್ಮದು. ನಮ್ಮ ಸಮುದಾಯದ ಜನ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜನಾಂಗದ ಹಿತದೃಷ್ಟಿಯಿಂದ ಸರ್ಕಾರ ನಮಗೆ ಮೀಸಲಾತಿ ಹೆಚ್ಚಿಸಬೇಕು. ಶೇ 15ರ ವರೆಗೂ ಮೀಸಲಾತಿ ಹೆಚ್ಚಿಸುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಬೇಕು' ಎಂದು ಸರ್ಕಾರವನ್ನು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ ಆಗ್ರಹಿಸಿದರು.

9ನೇ ಪುಟ ನೋಡಿ



ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಹಕ್ಕೊತ್ತಾಯದ ಮನವಿಯನ್ನು ಕಂದಾಯ ಸಚಿವ ಆರ್. ಅಶೋಕ ಅವರಿಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನೀಡಿದರು. ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಕೃಷ್ಣಪ್ಪ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ನನ್ನ ಕೈಗೆ ಪೆನ್ನು, ಪೇಪರ್ ಕೊಡಿ– ಡಿಕೆಶಿ

'ಎಸ್.ಎಂ. ಕೃಷ್ಣ ಅವರ ನಂತರ ನನ್ನನ್ನು ಕಾಂಗ್ರೆಸ್ ಪಕ್ಷ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಕೂರಿಸಿದೆ. ನನ್ನ ಸಂಘಟನೆಯ ಇತಿಹಾಸ ಒಂದು ಕಡೆಯಾದರೆ, ನಾನು ಒಕ್ಕಲಿಗ ಎಂಬ ಕಾರಣಕ್ಕೆ ಆಯ್ಕೆ ಮಾಡಿರುವುದೂ ಮತ್ತೊಂದು ಸತ್ಯ. ಆರ್. ಅಶೋಕ ಸೇರಿದಂತೆ ಇಲ್ಲಿರುವ ಸಚಿವರು ಒಕ್ಕಲಿಗ ಸಮಾಜದ ಪ್ರತಿನಿಧಿ ಆಗಿರುವುದಕ್ಕೆ ಈ ಸ್ಥಾನಕ್ಕೆ ಬಂದಿದ್ದಾರೆ. ಇದನ್ನು ನಾವೆಲ್ಲ ಗಮನದಲ್ಲಿಟ್ಟುಕೊಳ್ಳಬೇಕು. ನಾವು ಬೇರೆಯವರ ಹಕ್ಕನ್ನು ಕೇಳುತ್ತಿಲ್ಲ. ಈ ಸಮಾಜದ ಜನಸಂಖ್ಯೆ ಎಷ್ಟಿದೆಯೋ ಅದರ ಆಧಾರದಲ್ಲಿ ಮೀಸಲಾತಿ ನೀಡಿ ಎಂದು ಕೇಳುತ್ತಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ನಿಮ್ಮ ಕೈಯಲ್ಲಿ ಅಧಿಕಾರ ಇಲ್ಲದಿದ್ದರೆ ನಿಮ್ಮಿಂದ ಏನನ್ನೂ ಮಾಡಲು ಸಾಧ್ಯವಿಲ್ಲ. ಅಧಿಕಾರವನ್ನು ಕೊಡುವುದು, ಬಿಡುವುದು ಈ ಜನಾಂಗದ ಕೈಯಲ್ಲಿ ಮಾತ್ರ ಇದೆ. ನನ್ನ ಕೈಗೆ ಪೆನ್ನು, ಪೇಪರ್ ಕೊಡಿ. ಯಾವ ರೀತಿ ಅನುಕೂಲ ಮಾಡಿಕೊಡಬೇಕು ಎಂದು ನನಗೆ ಗೊತ್ತಿದೆ' ಎಂದರು.



ಮಸ್ತಕಾಭಿಷೇಕ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಬೆಟ್ಟದೂರು ಗ್ರಾಮದ ಗೊಮ್ಮಟಗಿರಿಯಲ್ಲಿರುವ 16 ಅಡಿ ಎತ್ತರದ ಏಕಶಿಲಾ ಬಾಹುಬಲಿ ಮೂರ್ತಿಯು ಭಾನುವಾರ ನಡೆದ 73ನೇ ಮಸ್ತಕಾಭಿಷೇಕದ ವೇಳೆ ಅರಿಸಿನದ ಅಭಿಷೇಕದಿಂದ ಕಂಗೊಳಿಸಿದ್ದು ಹೀಗೆ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

ಅಧಿಕಾರಿಗಳು ಕಸ್ಟಡಿಗೆ ಹಿರಿಯರಿಗೆ ನೋಟಿಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಮಾಹಿತಿ ಕಳವು ಹಾಗೂ ದುರ್ಬಳಕೆ ಪ್ರಕರಣದಲ್ಲಿ ಬಂಧಿಸಲಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ನಾಲ್ವರು ಅಧಿಕಾರಿಗಳನ್ನು ಹೆಚ್ಚಿನ ವಿಚಾರಣೆಗಾಗಿ ಇದೇ 29 ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಚಿಲುಮೆ ಸಂಸ್ಥೆ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಶಿವಾಜಿನಗರದ ಕಂದಾಯ ಅಧಿಕಾರಿ ಸುಹೇಲ್ ಅಹಮದ್, ಮಹದೇವಪುರದ ಕಂದಾಯ ಅಧಿಕಾರಿ ಕೆ.ಚಂದ್ರಶೇಖರ್, ರಾಜರಾಜೇಶ್ವರಿ ನಗರದ ಕಂದಾಯ ಅಧಿಕಾರಿ ಮಹೇಶ್ ಹಾಗೂ ಚಿಕ್ಕಪೇಟೆಯ ಉಪ ಕಂದಾಯ ಅಧಿಕಾರಿ ವಿ.ಬಿ. ಭೀಮಾಶಂಕರ್ ಅವರನ್ನು ಶನಿವಾರ ಸಂಜೆ ಬಂಧಿಸಲಾಗಿತ್ತು. ಅವರನ್ನೆಲ್ಲ ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮನೆಗೆ ಭಾನುವಾರ ಸಂಜೆ ಹಾಜರುಪಡಿಸಲಾಯಿತು.

'ಮತದಾರರ ಸಮೀಕ್ಷೆ ಮಾಡಲು ಸಹಕರಿಸಿದ್ದ ಅಧಿಕಾರಿಗಳು, ಚಿಲುಮೆ ಸಂಸ್ಥೆಯ ಸಿಬ್ಬಂದಿಗೆ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಗುರುತಿನ ಚೀಟಿ ಮಾಡಿಕೊಟ್ಟಿದ್ದರು. ಇದೀಗ ಅಧಿಕಾರಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗಿದೆ. ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಿರಿಯ ಅಧಿಕಾರಿಗಳಿಗೆ ನೋಟಿಸ್: 'ಬಿಬಿಎಂಪಿ ವ್ಯಾಪ್ತಿಯ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಆಧಾರ್ ಸಂಖ್ಯೆ ಜೋಡಣೆ ಮಾಡುವ ಕೆಲಸವನ್ನು ಚಿಲುಮೆ ಸಂಸ್ಥೆಗೆ ನೀಡಲಾಗಿತ್ತು. ಹಿರಿಯ ಅಧಿಕಾರಿಗಳ ಸೂಚನೆಯಂತೆ ಗುರುತಿನ ಚೀಟಿ ನೀಡಿದ್ದಾಗಿ ಬಂಧಿತ ಅಧಿಕಾರಿಗಳು ಹೇಳುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಚಿಲುಮೆ ಸಂಸ್ಥೆಗೆ ಸಹಾಯ ಮಾಡಿದ್ದರು ಎನ್ನಲಾದ ಹಿರಿಯ ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದ್ದು, ಸೂಕ್ತ ಪುರಾವೆಗಳನ್ನು ಮುಂದಿಟ್ಟುಕೊಂಡು ಅವರಿಗೆಲ್ಲ ನೋಟಿಸ್ ನೀಡಲಾಗುವುದು. ವಿಚಾರಣೆ ನಡೆಸಿದ ನಂತರವೇ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಮಧ್ಯವರ್ತಿಯನ್ನು ಬಿಟ್ಟು ಕಳುಹಿಸಿದ ಪೊಲೀಸರು: ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪದಡಿ ಶಿವಕುಮಾರ್ ಎಂಬುವರನ್ನು ಶನಿವಾರ ವಶಕ್ಕೆ ಪಡೆದಿದ್ದ ಪೊಲೀಸರು, ವಿಚಾರಣೆ ನಡೆಸಿ ಬಿಟ್ಟು ಕಳುಹಿಸಿದ್ದಾರೆ.

'ಶಿವಕುಮಾರ್ ಭಾಗಿ ಬಗ್ಗೆ ಅನುಮಾನ ಮಾತ್ರ ಇತ್ತು. ಹೀಗಾಗಿ, ವಿಚಾರಣೆ ನಡೆಸಿ ಹೇಳಿಕೆ ಪಡೆದು ಕಳುಹಿಸಲಾಗಿದೆ. ಅಗತ್ಯವಿದ್ದರೆ ಪುನಃ ವಿಚಾರಣೆಗೆ ಬರುವಂತೆಯೂ ಅವರಿಗೆ ಸೂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅನಾಥವಾಗಿದ್ದ ಗಂಡು ಹುಲಿ ಮರಿ ಸಾವು



ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಅಂತರಸಂತೆ ವನ್ಯಜೀವಿ ವಲಯ ವ್ಯಾಪ್ತಿಯ ಕಾಡಂಚಿನಲ್ಲಿ ಉರುಳಿಗೆ ಸಿಲುಕಿ ಈಚೆಗೆ ಹತ್ಯೆಯಾದ ಹೆಣ್ಣು ಹುಲಿಯಮೂರು ಹುಲಿಮರಿಗಳ ಪೈಕಿ ಒಂದು ಗಂಡು ಹುಲಿಮರಿ ಮೃತಪಟ್ಟಿದೆ.

10ರಿಂದ 11 ತಿಂಗಳು ವಯಸ್ಸಿನ ಗಂಡು ಮರಿಹುಲಿಯ ಕಳೇಬರವು ಅಂತರಸಂತೆ ವನ್ಯಜೀವಿ ವಲಯದ ತಾರಕ ಶಾಖೆಯ ದಮ್ಮನಕಟ್ಟೆ ಗಸ್ತಿನ ತಾರಕ ಅರಣ್ಯ ಪ್ರದೇಶದಲ್ಲಿ ಭಾನುವಾರ ಬೆಳಿಗ್ಗೆ ಪತ್ತೆಯಾಗಿದೆ.

'ಮರಿಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದಾಗ ಕುತ್ತಿಗೆ, ಭುಜದ ಬಳಿ ತೀವ್ರವಾದ ಗಾಯಗಳಾಗಿದ್ದು ಮತ್ತು ಮುಂಗಾಲಿನ ಮೂಳೆ ಮುರಿದಿರುವುದು, ಬೇರೆ ಹುಲಿಯೊಂದಿಗೆ ಕಾದಾಟ ನಡೆಸಿ ಮೃತಪಟ್ಟಿರುವುದು ಗೊತ್ತಾಗಿದೆ' ಎಂದು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹಾಗೂ ಡಿಸಿಎಫ್ ಹರ್ಷ ಕುಮಾರ್ ಚಿಕ್ಕನರಗುಂದ ತಿಳಿಸಿದ್ದಾರೆ.

'ಒಪಿಎಸ್: ಭವಿಷ್ಯದ ತೆರಿಗೆದಾರರಿಗೆ ಹೊರೆ'

ನವದೆಹಲಿ (ಪಿಟಿಐ): ನಿವೃತ್ತ ಸರ್ಕಾರಿ ನೌಕರರಿಗೆ ಕೆಲವು ರಾಜ್ಯಗಳಲ್ಲಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತಂದಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೇರಿ, 'ವೆಚ್ಚಗಳಲ್ಲಿ ವಿವೇಕ ಹಾಗೂ ಸುಸ್ಥಿರ ಬೆಳವಣಿಗೆಗೆ ಉತ್ತೇಜನ ನೀಡಬೇಕಿರುವ ಹೊತ್ತಿನಲ್ಲಿ ಈ ಕ್ರಮವು ಭವಿಷ್ಯದ ತೆರಿಗೆದಾರರ ಮೇಲೆ ಹೊರೆ ಹೆಚ್ಚಿಸಲಿದೆ' ಎಂದು ಹೇಳಿದ್ದಾರೆ.



ಸುಮನ್ ಬೇರಿ

'ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಮತ್ತೆ ಜಾರಿಗೆ ಬರುತ್ತಿರುವ ಬಗ್ಗೆ ನಾನು ತುಸು ಚಿಂತೆಗೆ ಒಳಗಾಗಿದ್ದೇನೆ. ಏಕೆಂದರೆ, ಈ ಯೋಜನೆಗೆ ಬೇಕಿರುವ ಹಣವನ್ನು ಮುಂದಿನ ತೆರಿಗೆದಾರರು ಪಾವತಿಸಬೇಕಾಗುತ್ತದೆ' ಎಂದು ಬೇರಿ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಒಪಿಎಸ್ ವ್ಯವಸ್ಥೆಯಲ್ಲಿ ಪಿಂಚಣಿ ಹಣವನ್ನು ಸರ್ಕಾರವೇ ಪಾವತಿಸುತ್ತದೆ. ಇದನ್ನು 2004ರಿಂದ ರದ್ದುಗೊಳಿಸಲಾಗಿದೆ. ರಾಜಸ್ಥಾನ ಮತ್ತು ಛತ್ತೀಸಗಡ ರಾಜ್ಯಗಳು ಒಪಿಎಸ್ ಜಾರಿಗೆ ತೀರ್ಮಾನಿಸಿವೆ. ಹಿಮಾಚಲ ಪ್ರದೇಶದಲ್ಲಿ ಬಿಜೆಪಿ, ಮತ್ತೆ ಅಧಿಕಾರಕ್ಕೆ ಬಂದರೆ ಒಪಿಎಸ್ ಜಾರಿಗೆ ತರುವುದಾಗಿ ಭರವಸೆ ನೀಡಿದೆ. ಎಎಪಿ ನೇತೃತ್ವದ ಸರ್ಕಾರ ಇರುವ ಪಂಜಾಬ್, ಒಪಿಎಸ್ ಮರುಜಾರಿಗೆ ಈಚೆಗೆ ಅನುಮೋದನೆ ನೀಡಿದೆ. ಜಾರ್ಖಂಡ್ ರಾಜ್ಯ ಕೂಡ ಒಪಿಎಸ್ ಜಾರಿಗೆ ಒಪ್ಪಿದೆ.

ಸರ್ಕಾರಿ ಪಿಂಚಣಿಯನ್ನು ತುಸು ಭಿನ್ನವಾಗಿ ಕಾಣಬೇಕು. ಒಪಿಎಸ್‌ಗೆ ಮರಳುವ ಘೋಷಣೆಯು ಈಗ ಅಧಿಕಾರದಲ್ಲಿ ಇರುವ ಪಕ್ಷಕ್ಕೆ ಅನುಕೂಲ ಮಾಡಿಕೊಡಬಹುದು. ಆದರೆ ಅದರ ಆರ್ಥಿಕ ಹೊರೆಯನ್ನು ಹೊರಬೇಕಿರುವುದು ಮುಂದೆ ಅಧಿಕಾರಕ್ಕೆ ಬರುವವರು ಎಂದು ಅವರು ಹೇಳಿದ್ದಾರೆ.

ಐಒಎಗೆ ಮೊದಲ ಅಧ್ಯಕ್ಷೆಯಾಗಿ ಉಷಾ



ನವದೆಹಲಿ(ಪಿಟಿಐ): ಕ್ರೀಡಾಲೋಕದ ದಂತಕಥೆ ಪಿ.ಟಿ. ಉಷಾ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೊದಲ ಅಧ್ಯಕ್ಷೆಯಾಗುವುದು ಬಹುತೇಕ ಖಚಿತವಾಗಿದೆ.

ಒಂಬತ್ತು ದಶಕಗಳಿಗಿಂತಲೂ ಹಳೆಯದಾದ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೇರುತ್ತಿರುವ ಮೊದಲ ಒಲಿಂಪಿಯನ್ ಹಾಗೂ ಅಂತರರಾಷ್ಟ್ರೀಯ ಪದಕ ವಿಜೇತರೂ ಆಗಿದ್ದಾರೆ. ಡಿಸೆಂಬರ್ 10ರಂದು ನಿಗದಿಯಾಗಿರುವ ಚುನಾವಣೆಯ ಅಧ್ಯಕ್ಷ ಹುದ್ದೆಗೆ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದಾರೆ. ಭಾನುವಾರ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿತ್ತು. 10

ಅವಧಿ ಮುಗಿದ 16 ಟೋಲ್ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ದಾವಣಗೆರೆ: ರಾಜ್ಯದಾದ್ಯಂತ ವಿವಿಧ ಹೆದ್ದಾರಿಗಳಲ್ಲಿ ಇರುವ 42 ಟೋಲ್‌ಗೇಟ್‌ಗಳ ಪೈಕಿ 16 ಟೋಲ್‌ಗೇಟ್‌ಗಳ ಅವಧಿ ಪೂರ್ಣಗೊಂಡಿದ್ದು, ಅವುಗಳನ್ನು ರದ್ದು ಮಾಡಬೇಕು ಎಂದು ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ಆಗ್ರಹಿಸಿದರು.

ಭಾನುವಾರ ಇಲ್ಲಿ ನಡೆದ ಲಾರಿ ಮಾಲೀಕರ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

ಹುಬ್ಬಳ್ಳಿಯ ಗಬ್ಬೂರು ಕ್ರಾಸ್ ಬಳಿಯ ಟೋಲ್‌ಗೇಟ್ ಸಹಿತ 16 ಟೋಲ್‌ಗೇಟ್ ಅವಧಿ ಮುಗಿದಿದೆ. ಹೆದ್ದಾರಿ ನಿರ್ಮಾಣಕ್ಕೆ ಖರ್ಚು ಮಾಡಿದ ಹತ್ತುಪಟ್ಟು ಹಣ ವಸೂಲಾಗಿದೆ ಎಂದು ಹೇಳಿದರು.

ಚಿತ್ರದುರ್ಗ–ಹೊಸಪೇಟೆ ನಡುವಿನ ಹೆದ್ದಾರಿಯಲ್ಲಿ 30 ಕಿಲೋಮೀಟರ್ ವ್ಯಾಪ್ತಿಯಲ್ಲಿ ಮೂರು ಟೋಲ್‌ಗೇಟ್‌ಗಳಿವೆ. ಒಂದು ಟೋಲ್‌ಗೇಟ್ ಇಟ್ಟುಕೊಂಡು ಎರಡನ್ನು ರದ್ದು ಮಾಡಬೇಕು. ಎಲ್ಲ ಟೋಲ್‌ಗೇಟ್‌ಗಳಲ್ಲಿ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ಸರಕು ಸಾಗಣೆ ಮಾಡುವಾಗ ಸುಂಕ ವಸೂಲಿ ಮಾಡಬಾರದು. ಸರಕು ಅನ್‌ಲೋಡ್ ಮಾಡಿ ವಾಪಸ್ ಖಾಲಿ ಬರುವ ಲಾರಿಗಳಿಗೆ ಟೋಲ್ ವಿಧಿಸಬಾರದು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆ ಹತ್ತಿಕ್ಕಲು ಹಲವರ ಬಂಧನ; ಲಾಕ್‌ಡೌನ್ ವಿರೋಧಿಸಿ ಷಿ ಜಿನ್‌ಪಿಂಗ್, ಸಿಪಿಸಿ ವಿರುದ್ಧ ಜನರ ಕಿಡಿ

ಚೀನಾದಲ್ಲಿ ಕೋವಿಡ್ ದಾಖಲೆ ಏರಿಕೆ; ಸಿಡಿದೆದ್ದ ಜನ

ಬೀಜಿಂಗ್/ತೈಪೆ (ಪಿಟಿಐ/ಎಪಿ): ಚೀನಾದಲ್ಲಿ ಕೋವಿಡ್ ಸೋಂಕಿನ ಪ್ರಕರಣಗಳು ಸತತ ನಾಲ್ಕನೇ ದಿನವೂ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿವೆ. ಭಾನುವಾರ ಒಂದೇ ದಿನ ಸೋಂಕಿನ 40,000 ಹೊಸ ಪ್ರಕರಣಗಳು ದಾಖಲಾಗಿವೆ. ಸೋಂಕು ಶೂನ್ಯಕ್ಕಿಳಿಸಲು ಅಧ್ಯಕ್ಷ ಷಿ ಜಿನ್‌ಪಿಂಗ್ ನೇತೃತ್ವದ ಸರ್ಕಾರ ಹೇರಿರುವ ಕಠಿಣ ಲಾಕ್‌ಡೌನ್ ವಿರೋಧಿಸಿ ದೇಶದಾದ್ಯಂತ ವ್ಯಾಪಕ ಜನಾಕ್ರೋಶವೂ ಭುಗಿಲೆದ್ದಿದೆ.

ದೇಶದಾದ್ಯಂತ ಸಾಮೂಹಿಕವಾಗಿ ಕೋವಿಡ್ ಪರೀಕ್ಷೆ ನಡೆಸುತ್ತಿದ್ದು, ಇದರಿಂದ ಶನಿವಾರ 35,858 ಲಕ್ಷಣರಹಿತ ಪ್ರಕರಣಗಳೂ ಸೇರಿ 39,501 ಹೊಸ ಪ್ರಕರಣಗಳು ದೃಢಪಟ್ಟಿವೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ಹೇಳಿದೆ.

ಈ ನಡುವೆ, ಆಡಳಿತಾರೂಢ ಚೀನಾ ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ಮತ್ತು ಷಿ ಜಿನ್‌ಪಿಂಗ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಭಾರಿ ಸಂಖ್ಯೆಯಲ್ಲಿ ಜನರು ಕಾಂಪೌಂಡ್ ಒಳಗೆ ಮತ್ತು ರಸ್ತೆಗಳಲ್ಲಿ ಪ್ರತಿಭಟಿಸಿದರು. ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೂ ಪ್ರತಿಭಟನೆಗೆ ಕೈಜೋಡಿಸಿದರು. ಹಲವು ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರತಿಭಟನೆಯ ದೃಶ್ಯಗಳ ವಿಡಿಯೊಗಳು ಟ್ವಿಟರ್ ಮತ್ತು ಚೀನಿ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿದವು.

10 ಜನರ ಸಾವು: ರಾಜಧಾನಿ ಬೀಜಿಂಗ್, ಶಾಂಘೈ ಸೇರಿ ಹಲವು ನಗರಗಳಲ್ಲಿ ಕೋವಿಡ್ ಸೋಂಕು ತಡೆಗಟ್ಟಲು ಹಲವು ಅಪಾರ್ಟ್‌ಮೆಂಟ್ ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ. ಕಠಿಣ ಲಾಕ್‌ಡೌನ್ ವೇಳೆ, ಷಿನ್‌ಜಿಯಾಂಗ್ ಪ್ರಾಂತೀಯ ರಾಜಧಾನಿ ಉರುಮ್ಕಿ ನಗರದಲ್ಲಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ಗುರುವಾರ ಬೆಂಕಿ ಕಾಣಿಸಿ, 10 ಜನರು ಮೃತಪಟ್ಟರು. ಇದರಿಂದ ಹಾನ್ ಚೀನಿ ಪ್ರಜೆಗಳು ಮತ್ತು ಉಯಿಗರ್ ಮುಸ್ಲಿಮರು ವಾರಾಂತ್ಯ ನಡೆಸಿದ ಬೃಹತ್ ಪ್ರತಿಭಟನೆಗೂ ಉರುಮ್ಕಿ ಸಾಕ್ಷಿಯಾಯಿತು. ಪರಿಣಾಮ ಸರ್ಕಾರ, ಅಲ್ಲಿ ಲಾಕ್‌ಡೌನ್ ಜಾರಿಯಿಂದ ಹಿಂದೆ ಸರಿಯಿತು.

ಪ್ರತಿಭಟನೆಗಳ ವಿಡಿಯೊಗಳು ಆನ್‌ಲೈನ್ ಮಾಧ್ಯಮಗಳಲ್ಲಿ ಪ್ರಸಾರವಾದ ನಂತರ, 'ನಗರದಲ್ಲಿ ಕೋವಿಡ್ ನಿರ್ಬಂಧ ಹಂತಹಂತವಾಗಿ ತೆಗೆಯಲಾಗುವುದು' ಎಂದು ಉರುಮ್ಕಿ ಅಧಿಕಾರಿಗಳು ತಿಳಿಸಿದ್ದಾರೆ. ಇದನ್ನು ಹಾಂಗ್ ಕಾಂಗ್‌ನ 'ಸೌತ್ ಚೀನಾ ಮಾರ್ನಿಂಗ್ ಪೋಸ್ಟ್' ಭಾನುವಾರ ವರದಿ ಮಾಡಿದೆ. ಬೀಜಿಂಗ್‌ನಲ್ಲಿ ಪ್ರತಿಭಟನೆ ತೀವ್ರಗೊಂಡ ಕಾರಣಕ್ಕೆ, ಅಧಿಕಾರಿಗಳು ಲೌಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿದರು.

'ಕೆಲವು ಸ್ಥಳೀಯ ಸರ್ಕಾರಗಳು ವ್ಯಾಪಕವಾಗಿ ಲಾಕ್‌ಡೌನ್ ಹೇರುವುದು ಅಥವಾ ಸೋಂಕು ಪ್ರಸರಣದ ವಿರುದ್ಧ ಸಡಿಲ ಧೋರಣೆ ಅನುಸರಿಸುತ್ತಿರುವುದು ಕಂಡುಬಂದಿದೆ. ಸೋಂಕು ತಡೆಗೆ ಈ ಎರಡೂ ಪ್ರವೃತ್ತಿಗಳು ಸರಿಯಲ್ಲ' ಎಂದು ಚೀನಿ ಸರ್ಕಾರಿ ಮಾಧ್ಯಮ 'ಚೀನಾ ಡೈಲಿ' ವರದಿ ಮಾಡಿದೆ.



ಚೀನಾದ ವುಲುಮುಖಿ ರಸ್ತೆಯಲ್ಲಿ ಭಾನುವಾರ ಕಠಿಣ ಲಾಕ್‌ಡೌನ್ ವಿರೋಧಿಸಿ ಪ್ರತಿಭಟನೆ ನಡೆಸಿದ ನಾಗರಿಕರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು
– ಎಎಫ್‌ಪಿ ಚಿತ್ರ

ಪ್ರತಿಭಟನೆ ಹತ್ತಿಕ್ಕಲು ಪೆಪ್ಪರ್ ಸ್ಪ್ರೇ

ಚೀನಾದಲ್ಲಿ ನಡೆಯುತ್ತಿರುವ ಕೋವಿಡ್ ಲಾಕ್‌ಡೌನ್ ವಿರೋಧಿ ಪ್ರತಿಭಟನೆಗಳು ಭಾನುವಾರ ರಾಜಕೀಯ ಸ್ವರೂಪ ಪಡೆದವು. ಶಾಂಘೈನ ವುಲುಮುಖಿ ರಸ್ತೆಯಲ್ಲಿ ಶನಿವಾರ ರಾತ್ರಿಯಿಂದಲೇ ಭಾರಿ ಭದ್ರತೆ ಇದ್ದರೂ ಭಾನುವಾರ ಬೆಳಿಗ್ಗೆ ಸಾವಿರಾರು ಜನರು ಪ್ರತಿಭಟನೆಗೆ ಇಳಿದರು. ಉರುಮ್ಕಿ ರಸ್ತೆಯಲ್ಲಿ ಮಧ್ಯರಾತ್ರಿ ಸೇರಿದ್ದ ಸುಮಾರು 300 ಪ್ರತಿಭಟನಕಾರರ ಮೇಲೆ ಪೊಲೀಸರು ಪೆಪ್ಪರ್ ಸ್ಪ್ರೇ ಬಳಸಿದರು.

'ಷಿ ಜಿನ್‌ಪಿಂಗ್ ಕೆಳಗಿಳಿಯಲಿ, ಸಿಪಿಸಿ ಅಧಿಕಾರದಿಂದ ತೊಲಗಲಿ', 'ನಮಗೆ ಪಿಸಿಆರ್ ಪರೀಕ್ಷೆ ಬೇಡ, ನಮಗೆ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ ಬೇಕು' ಎಂಬ ಘೋಷಣೆಗಳು ಮೊಳಗಿದವು.

ಸತತ ಮೂರನೇ ಬಾರಿಗೆ ಅಧ್ಯಕ್ಷರಾಗಿರುವ ಷಿ ಜಿನ್‌ಪಿಂಗ್ ಅವರಿಗೆ ದೇಶದಲ್ಲಿ ಉಲ್ಬಣಿಸುತ್ತಿರುವ ಕೋವಿಡ್, ಲಾಕ್‌ಡೌನ್ ವಿರೋಧಿ ಪ್ರತಿಭಟನೆ ಹಾಗೂ ಆರ್ಥಿಕ ಹಿಂಜರಿತ ನಿಭಾಯಿಸುವುದು ದೊಡ್ಡ ಸವಾಲಾಗಿ ಪರಿಣಮಿಸಿದೆ.

4146 ವಿದ್ಯಾರ್ಥಿನಿಯರಿಗೆ ₹1.59 ಕೋಟಿ ವಿದ್ಯಾರ್ಥಿ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ್ಖ್ಮು ನಿಸ್ವಾ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಭಾನುವಾರ 4146 ಬಡ ಮತ್ತು ಅಗತ್ಯವುಳ್ಳ ವಿದ್ಯಾರ್ಥಿನಿಯರಿಗೆ ₹1.59 ಕೋಟಿ ಮೊತ್ತದ ವಿದ್ಯಾರ್ಥಿ ವೇತನ ವಿತರಿಸಲಾಯಿತು.

1971ರಲ್ಲಿ ಕೆಲವೇ ಮಹಿಳೆಯರು ಸೇರಿಕೊಂಡು ಟ್ರಸ್ಟ್ ಆರಂಭಿಸಿದ್ದರು. ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದೆ. ಅಗತ್ಯವಿರುವವರಿಗೆ ವೈದ್ಯಕೀಯ ಸಹಾಯ, ವಿವಾಹ ನಿಧಿ, ಪಿಂಚಣಿ ಇತ್ಯಾದಿ ಸೇವಾ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

ಹುಸ್ನಾ ಶರೀಫ್ ಅವರ ನೇತೃತ್ವದಲ್ಲಿ ಟ್ರಸ್ಟ್ ನಡೆಯುತ್ತಿದೆ. 1971ರಿಂದ 67 ಸಾವಿರ ವಿದ್ಯಾರ್ಥಿನಿಯರಿಗೆ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನ ನೀಡಲಾಗಿದೆ ಎಂದು ಟ್ರಸ್ಟ್ ತಿಳಿಸಿದೆ.

ಈ ಬಾರಿ ಪಿಯುಸಿ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿಯ ಮುಸ್ಲಿಂ ವಿದ್ಯಾರ್ಥಿನಿಯರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಯಿತು. 5200 ಅರ್ಜಿಗಳು ಬಂದಿದ್ದವು. ಇವರಲ್ಲಿ 4146 ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದೆ.

ಜಿ20 ಶೃಂಗ ಸಭೆ ಸ್ಥಳ ಪರಿಶೀಲನೆ

ದೇವನಹಳ್ಳಿ: ಇಲ್ಲಿನ ಕೊಡಗುರ್ಕಿ ಬಳಿ ಇರುವ ಪ್ರೆಸ್ಟೀಜ್ ಗಾಲ್ಫ್ ಶೈರ್‌ನ ಜೆಡಬ್ಲ್ಯು ಮ್ಯಾರಿಯೆಟ್ ಹೋಟೆಲ್‌ನಲ್ಲಿ ಡಿ.11ರಿಂದ 18ರ ವರೆಗೆ ಜಿ20 ಶೃಂಗಸಭೆ ನಡೆಯಲಿದೆ. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ನೇತೃತ್ವದ ಅಧಿಕಾರಿಗಳ ತಂಡ ಭಾನುವಾರ ಸ್ಥಳ ಪರಿಶೀಲಿಸಿತು.

ವಿವಿಧ ದೇಶಗಳ ರಾಯಭಾರಿ, ರಾಜ್ಯ, ಕೇಂದ್ರದ ಸಚಿವರು, ಕಾರ್ಯದರ್ಶಿಗಳು ವಾಸ್ತವ್ಯ ಹೂಡಲಿರುವ ಹಿನ್ನೆಲೆಯಲ್ಲಿ ಸುರಕ್ಷತೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವ ಕುರಿತು ಇನ್ನೂ ನಿರ್ಧರಿಸಿಲ್ಲ –ಸಿದ್ದರಾಮಯ್ಯ

‘ಹೈಕಮಾಂಡ್ ಸೂಚಿಸಿದ ಕ್ಷೇತ್ರದಲ್ಲೇ ಸ್ಪರ್ಧೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಲಾರ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸುವ ಕುರಿತು ಇನ್ನೂ ನಿರ್ಧರಿಸಿಲ್ಲ. ಪಕ್ಷದ ಹೈಕಮಾಂಡ್ ಸೂಚಿಸಿದ ಕ್ಷೇತ್ರದಲ್ಲಿಯೇ ಸ್ಪರ್ಧಿಸುತ್ತೇನೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಡಿ.ದೇವರಾಜ ಅರಸು ಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಕಾಳಿದಾಸ ಮತ್ತು ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಎಂದು ನನ್ನನ್ನು ಬೆಂಬಲಿಸಬೇಡಿ. ಸಾಮರ್ಥ್ಯ ಇದೆಯೊ? ಇಲ್ಲವೊ? ಎಂಬುದನ್ನು ನೋಡಿ ಬೆಂಬಲಿಸಿ’ ಎಂದರು.

‘ಕೋಲಾರ ಕ್ಷೇತ್ರದಲ್ಲಿ ವರ್ತೂರು ಪ್ರಕಾಶ್ ಎಲ್ಲಿದ್ದ ಹೇಳಿ? ಆತನನ್ನು ಕರೆದುಕೊಂಡು ಶಾಸಕನಾಗಿ ಮಾಡಿದೆ. ನಮ್ಮ ಸಮುದಾಯದವರು ಯಾವುದೇ ಪಕ್ಷದಲ್ಲಿದ್ದರೂ ಸರಿ ಎನ್ನುವುದನ್ನು ಬಿಡಿ. ಯೋಚಿಸಿ ಬೆಂಬಲಿಸಿ. ಕಾಂಗ್ರೆಸ್ ಟಿಕೆಟ್ ಸಿಕ್ಕಿಲ್ಲ ಎಂದು ಬೇರೆ ಪಕ್ಷಕ್ಕೆ ಹೋಗ್ತಾರೆ. ಆಗಲೂ ನಮ್ಮವರು ಎಂದು ಮತ ಹಾಕ್ತೀರಾ?’ ಎಂದು ಪ್ರಶ್ನಿಸಿದರು.

ಜಾತಿವಾದಿಯಲ್ಲ: ‘ನಾನು ಮೇಲ್ಜಾತಿಗಳ ವಿರೋಧಿ ಎಂದು ಕಳೆದ ಚುನಾವಣೆ ವೇಳೆ ಕೆಲವರು ಅಪಪ್ರಚಾರ ನಡೆಸಿದರು. ನಾನು ಯಾವ ವರ್ಗಗಳ ಪರ ಕೆಲಸ ಮಾಡಿದ್ದೆನೋ ಅವರ ಬೆಂಬಲವೂ ಸಿಗಲಿಲ್ಲ. ನಾನು ಯಾವ ಜಾತಿಗಳ ವಿರೋಧಿಯೂ ಅಲ್ಲ. ಮನುಷ್ಯರ ಪರವಾಗಿ ಇರುವವನು’ ಎಂದರು.

‘ನಾನು ಕೂಡ ಅಸ್ಪೃಶ್ಯತೆ ಅನುಭವಿಸಿದ್ದೇನೆ. ಡಾ.ಬಿ.ಆರ್.ಅಂಬೇಡ್ಕರ್‌ರವರು ನೀಡಿದ ಸಂವಿಧಾನ ಬಲದಿಂದ ಸಿ.ಎಂ ಆದೆ. ಯಾವತ್ತೂ ಸಂವಿಧಾನಕ್ಕೆ ವಿರುದ್ಧವಾಗಿ ಕೆಲಸ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ. ಈಗ ಸಂವಿಧಾನ ಕೆಟ್ಟವರ ಕೈಗೆ ಸಿಲುಕಿದೆ. ಸಂವಿಧಾನವನ್ನೇ ಬುಡಮೇಲು ಮಾಡುವುದಾಗಿ ಹೇಳುತ್ತಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಅವರು, ‘ಸಿದ್ದರಾಮಯ್ಯ ಅವರು ಸಮುದಾಯಕ್ಕೆ ಸ್ವಾಭಿಮಾನ, ಧೈರ್ಯ ತಂದುಕೊಟ್ಟಿದ್ದಾರೆ. ಅವರು ಮತ್ತೊಮ್ಮೆ ಮುಖ್ಯಮಂತ್ರಿ ಹುದ್ದೆಗೇರುವ ಸಾಧ್ಯತೆ ಇದೆ’ ಎಂದು ಹೇಳಿದರು.

ಕಾಗಿನೆಲೆ ಕನಕ ಗುರುಪೀಠದ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ವಕೀಲ ಕಾಂತರಾಜು, ಕುರುಬರ ಸಂಘದ ಮಾಜಿ ಅಧ್ಯಕ್ಷ ಲಿಂಗಪ್ಪ ಎನ್., ಕಾಳಿದಾಸ ಮತ್ತು ಸಂಗೊಳ್ಳಿ ರಾಯಣ್ಣ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಂ.ರಾಮಯ್ಯ ಇದ್ದರು.



ಸಮಾರಂಭದಲ್ಲಿ ಸಿದ್ದರಾಮಯ್ಯ ಅವರು ಸಂಗೊಳ್ಳಿ ರಾಯಣ್ಣ, ಕನಕದಾಸ ಮತ್ತು ಕಾಳಿದಾಸರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು. ವಕೀಲ ಕಾಂತರಾಜು, ಕಾಗಿನೆಲೆ ಕನಕ ಗುರುಪೀಠದ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಚ್.ಎಂ.ರೇವಣ್ಣ ಇದ್ದರು –ಪ್ರಜಾವಾಣಿ ಚಿತ್ರ

‘ಕುರುಬರ ಸಂಘ ಉಳಿಸಿದ್ದು ನಾನು’

‘ನಾನು ಇಲ್ಲದಿದ್ದರೆ ಕುರುಬರ ಸಂಘ ಉಳಿಯುತ್ತಿರಲಿಲ್ಲ. ಯಾರೋ ಮಾರಿಕೊಂಡು ತಿಂದುಬಿಡುತ್ತಿದ್ದರು. ಈ ವಿಚಾರದಲ್ಲಿ ನನಗೆ ಕೊಲೆ ಬೆದರಿಕೆಯನ್ನೂ ಹಾಕಿದ್ದರು’ ಎಂದು ಸಿದ್ದರಾಮಯ್ಯ ಹೇಳಿದರು.

‘ಕನಕ ಗುರುಪೀಠ ಮಾಡಿದ್ದು ನಾನು. ಗುರುಪೀಠ ರಚನೆ ಕುರಿತ ಮೊದಲ ಸಭೆಗೆ ಈಶ್ವರಪ್ಪ ಬಂದಿದ್ದ. ಪೀಠ ಸ್ಥಾಪನೆಗೆ ಹಣ ಕೇಳಿದರು. ಎರಡನೇ ಸಭೆಗೆ ಆ ಗಿರಾಕಿ ಬರಲೇ ಇಲ್ಲ. ಆದರೂ, ಅವ ನಮ್ಮವ ಅಂತ ಜೈಕಾರ ಹಾಕುತ್ತೀರಿ’ ಎಂದು ಹೇಳಿದರು.

₹3.50 ಕೋಟಿ ಮೌಲ್ಯದ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಜಿ.ಹೊಸಹಳ್ಳಿ (ದೊಡ್ಡಬಳ್ಳಾಪುರ): ತಾಲ್ಲೂಕಿನ ಜಿ.ಹೊಸಹಳ್ಳಿಯಲ್ಲಿ ಶುಕ್ರವಾರ ರಾತ್ರಿ ಗ್ಯಾಸ್ ಕಟರ್ ಬಳಸಿ ಕರ್ನಾಟಕ ಗ್ರಾಮೀಣ ಬ್ಯಾಂಕ್ (ಕೆಜಿಬಿ) ಬಾಗಿಲು ಕತ್ತರಿಸಿದ ಕಳ್ಳರು ನಗದು ಸೇರಿ ₹3.50 ಕೋಟಿ ಮೌಲ್ಯದ ಚಿನ್ನಾಭರಣ ದೋಚಿದ್ದಾರೆ.

ನಾಲ್ಕನೇ ಶನಿವಾರ ರಜೆ ಇದ್ದದ್ದರಿಂದ ತಡವಾಗಿ ಗೊತ್ತಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಇತರೆ ಅಧಿಕಾರಿಗಳು ಭೇಟಿ ನೀಡಿದ್ದರು. ಶ್ವಾನದಳ, ಬೆರಳಚ್ಚು ತಜ್ಞರನ್ನು ಸ್ಥಳಕ್ಕೆ ಕರೆತರಲಾಗಿತ್ತು.

ಬ್ಯಾಂಕ್ ಸಿಬ್ಬಂದಿ ಹೊರತು ಪಡಿಸಿ ಬೇರೆಯವರು ಲಾಕರ್ ತೆರೆ ದರೆ ಎಚ್ಚರಿಕೆ ಗಂಟೆ ಮೊಳಗುವ (ಸೈರನ್) ವ್ಯವಸ್ಥೆ ಇದೆ. ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಆದರೆ, ಸೈರನ್ ಕೆಲಸ ಮಾಡದೆ ಇರುವುದು ಅನುಮಾನಗಳಿಗೆ ಕಾರಣವಾಗಿದೆ.

ಹೊಸಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಎಟಿಎಂ ಕಾರ್ಡ್ ಬದಲಿಸಿ ₹ 36 ಸಾವಿರ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಟಿಎಂ ಘಟಕದಲ್ಲಿ ಸಹಾಯದ ಸೋಗಿನಲ್ಲಿ ಗ್ರಾಹಕರೊಬ್ಬರ ಎಟಿಎಂ ಕಾರ್ಡ್ ಬದಲಿಸಿ ₹ 36 ಸಾವಿರ ಡ್ರಾ ಮಾಡಿ ವಂಚಿಸಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಾಜಿನಗರದ ಪುಸ್ತಕ ಮಾರಾಟ ಮಳಿಗೆಯೊಂದರ ಮಾಲೀಕ ಸುರೇಂದ್ರ ದೂರು ನೀಡಿದ್ದಾರೆ.

‘ದೂರುದಾರರು ಕುಟುಂಬ ಸಮೇತ ನ.13ರಂದು ಗಾಂಧಿನಗರಕ್ಕೆ ಬಂದಿದ್ದು, ಹಣ ತೆಗೆಯಲು ಕೆನರಾ ಬ್ಯಾಂಕ್ ಎಟಿಎಂ ಘಟಕಕ್ಕೆ ಹೋಗಿದ್ದರು. ₹13,000 ಡ್ರಾ ಮಾಡಿಕೊಳ್ಳಲು ಮುಂದಾಗಿದ್ದರು. ಆದರೆ, ಹಣ ಬಂದಿರಲಿಲ್ಲ. ಆಗ ಎಟಿಎಂ ಘಟಕದೊಳಗೆ ಹೋಗಿದ್ದ ಆರೋಪಿ, ಪರಿಚಯಿಸಿಕೊಂಡು ನಂತರ, ಹಣ ಡ್ರಾ ಮಾಡಿಕೊಳ್ಳಲು ಸಹಾಯ ಮಾಡುವುದಾಗಿ ತಿಳಿಸಿ ಪಾಸ್‌ವರ್ಡ್ ತಿಳಿದು ₹ 4,000 ಡ್ರಾ ಮಾಡಿಕೊಟ್ಟಿದ್ದ. ನಂತರ ಸುರೇಂದ್ರ ಗಮನಕ್ಕೆ ಬಾರದಂತೆ ಎಟಿಎಂ ಕಾರ್ಡ್ ಜೇಬಿನಲ್ಲಿಟ್ಟುಕೊಂಡು ನಕಲಿ ಕಾರ್ಡ್ ನೀಡಿದ್ದ. ದೂರುದಾರರು ನಿರ್ಗಮಿಸಿದ ಸ್ವಲ್ಪ ಹೊತ್ತಿನಲ್ಲಿ ಹಣ ಡ್ರಾ ಆದ ಬಗ್ಗೆ ದೂರುದಾರರ ಮೊಬೈಲ್‌ಗೆ ಸಂದೇಶಗಳು ಬಂದಿದ್ದವು. ಬ್ಯಾಂಕ್ ಸಹಾಯವಾಣಿಗೆ ಕರೆ ಮಾಡಿ ವಿಚಾರಿಸಿದಾಗ, ಕಾರ್ಡ್ ಬದಲಾಗಿದ್ದ ಸಂಗತಿ ಗೊತ್ತಾಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮದುವೆಗೆ ಒಪ್ಪದ ಮಹಿಳೆಗೆ ಚಾಕು ಇರಿತ

ಬೆಂಗಳೂರು: ಮದುವೆಯಾಗಲು ಒಪ್ಪದ ಮಹಿಳೆಗೆ ಚಾಕುವಿನಿಂದ ಶುಕ್ರವಾರ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಇಂದಿರಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಚಾಕು ಇರಿತದಿಂದ ಗಾಯಗೊಂಡಿರುವ 23 ವರ್ಷದ ಮಹಿಳೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಪಿ ಆಟೊ ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಬ್ಬರೂ ವಿವಾಹಿತರಾಗಿದ್ದು, ಪರಿಚಿತರಾಗಿದ್ದರಿಂದ ಸಲುಗೆ ಬೆಳೆದಿತ್ತು. ಮದುವೆ ಆಗಲು ಒತ್ತಾಯಿಸಿದ್ದ. ಇದೇ ಕಾರಣಕ್ಕೆ ಜಗಳವಾಗಿತ್ತು. ಮಾತನಾಡಬೇಕೆಂದು ಕದಿರೇನಹಳ್ಳಿ ಬಳಿಗೆ ಕರೆಸಿಕೊಂಡು ಚಾಕುವಿನಿಂದ ಇರಿದಿದ್ದ. ಸ್ಥಳೀಯರು ಬರುತ್ತಿದ್ದಂತೆ ಪರಾರಿಯಾಗಿದ್ದಾನೆ’ ಎಂದಿದ್ದಾರೆ.

ಪ್ರಯಾಣಿಕ ಬಂಧನ, ಪಿಸ್ತೂಲ್ ವಶ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಕುವೈತ್‌ಗೆ ಹೊರಟಿದ್ದ ಪ್ರಯಾಣಿಕ ಎನ್. ಶ್ರೀನಿವಾಸ್ ಅವರನ್ನು ಪೊಲೀಸರು ಬಂಧಿಸಿದ್ದು, ಪಿಸ್ತೂಲ್ ಹಾಗೂ 5 ಜೀವಂತ ಗುಂಡು ಜಪ್ತಿ ಮಾಡಿದ್ದಾರೆ.

‘ನಗರದ ನಿವಾಸಿ ಎನ್ನಲಾದ ಶ್ರೀನಿವಾಸ್ ಕುವೈತ್‌ಗೆ ಹೋಗಲೆಂದು ನ. 18ರಂದು ರಾತ್ರಿ ವಿಮಾನ ನಿಲ್ದಾಣಕ್ಕೆ ಬಂದಿದ್ದ. ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿ, ಪ್ರವೇಶ ದ್ವಾರದಲ್ಲಿ ಪರಿಶೀಲಿಸಿದಾಗ 6.35 ಪಿಸ್ತೂಲು ಮತ್ತು ಗುಂಡುಗಳು ಪತ್ತೆಯಾಗಿದ್ದವು’ ಎಂದು ಪೊಲೀಸ್ ಮೂಲಗಳು ಹೇಳಿವೆ. ವಿಚಾರಿಸಿದಾಗ ಪಿಸ್ತೂಲ್ ಬಗ್ಗೆ ಪ್ರತಿಕ್ರಿಯೆ ನೀಡಲಿಲ್ಲ. ತನಿಖೆ ನಡೆದಿದೆ’ ಎಂದು ತಿಳಿಸಿವೆ.

ಡ್ರಗ್ಸ್ ಜಾಲ: ಇಬ್ಬರ ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹ 10 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್, 2 ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ

ಕೇರಳದ ಇಜಾಸ್ ಹಾಗೂ ವಿ.ಎಂ. ಅರ್ಫತ್ ಬಂಧಿತರು. ‘ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದರು. ಮಾಹಿತಿ ಆಧರಿಸಿ ದಾಳಿ ಮಾಡಿ ಬಂಧಿಸಲಾಯಿತು’ ಎಂದು ಸಿಸಿಬಿ ಮೂಲಗಳು ಹೇಳಿವೆ. ಇವರ ಜೊತೆ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಜೆಸಿಬಿಯಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ನಿರ್ಮಾಣ ಹಂತದ ಕಟ್ಟಡದ ಜಾಗದಲ್ಲಿ ಮಿನಿ ಜೆಸಿಬಿ ಯಂತ್ರದಿಂದ ಬಿದ್ದು ಕಾರ್ಮಿಕ ರಾಮನಾಥ್ ಮರಾಂಡಿ (19) ಅವರು ಮೃತಪಟ್ಟಿದ್ದು, ಈ ಸಂಬಂಧ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಾಗಿದೆ.

‘ಜಾರ್ಖಂಡ್‌ನ ರಾಮನಾಥ್ ಮೃತಪಟ್ಟವರು. ಎಂಪಿಎಆರ್ ಕನ್‌ಸ್ಟ್ರಕ್ಷನ್‌ನ ಜಿ. ಸಂಪತ್ ರಾಜ್ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.13ರಿಂದ ‘ಏರೊ ಇಂಡಿಯಾ’

ಬೆಂಗಳೂರು: ಯಲಹಂಕದ ವಾಯುನೆಲೆಯಲ್ಲಿ 2023ರ ಫೆ. 13ರಿಂದ 17ರವರೆಗೆ ‘ಏರೊ ಇಂಡಿಯಾ ವೈಮಾನಿಕ ಪ್ರದರ್ಶನ–2023’ ನಡೆಯಲಿದೆ. 1996ರಿಂದ ಎರಡು ವರ್ಷಕ್ಕೊಮ್ಮೆ ಯಲಹಂಕದ ವಾಯುನೆಲೆಯಲ್ಲಿ ಈ ಪ್ರದರ್ಶನ ನಡೆಸಲಾಗುತ್ತಿದೆ.

‘ಏಷ್ಯಾದ ಅತೀ ದೊಡ್ಡ ವೈಮಾನಿಕ ಪ್ರದರ್ಶನ ಇದಾಗಿದೆ. ದೇಶ–ವಿದೇಶದ ಕಂಪನಿಗಳ ವಿಮಾನಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳಲಿವೆ’ ಎಂದು ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪನ್ನಗಳ ತಯಾರಿಕಾ ಇಲಾಖೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದೆ.

ಏಷ್ಯಾ ಪೆಸಿಫಿಕ್ ಸಾಹಿತ್ಯ ಉತ್ಸವ ಇಂದಿನಿಂದ

ಬೆಂಗಳೂರು: ಅಲಯನ್ಸ್ ಕಲಾ ವಿಷಯಗಳ ನಿಕಾಯವು ನ.28–30ರ ವರೆಗೆ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಏಷ್ಯಾ ಪೆಸಿಫಿಕ್ ಬರಹಗಾರರು ಹಾಗೂ ಅನುವಾದಕರ ಸಮ್ಮೇಳನ ‘ಚೌಕಟ್ಟು ಮೀರಿದ ಬರವಣಿಗೆ’ ಪರಿಕಲ್ಪನೆಯಡಿ ನಡೆಯಲಿದೆ. ಸಾಹಿತ್ಯಾಸಕ್ತರ ಸಾಮಾನ್ಯ ಆಲೋಚನಾ ಚೌಕಟ್ಟಿನ ಹೊರಗೆ ಇರುವ ಧ್ವನಿಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶವನ್ನು ಸಮ್ಮೇಳನ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ರಕ್ತದಾನ ಶಿಬಿರ: ಆಯೋಜನೆ ಮತ್ತು ಸ್ಥಳ: ಭಾಗೀರತಿ ಬಾಯಿ ನಾರಾಯಣರಾವ್ ಮಾನ್ಯಾ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 9.15

ಸಂಸ್ಥಾಪನಾ ದಿನ ಮತ್ತು ಕರ್ನಾಟಕ ರಾಜ್ಯೋತ್ಸವ ಆಚರಣೆ: ಅತಿಥಿಗಳು: ಡಾ.ಸಿ.ಎನ್.ಅಶ್ವತ್ಥನಾರಾಯಣ, ಅನಿಲ್ ವಿನಾಯಕ್ ಗೋಕಾಕ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ: ಬಹುಶಿಸ್ತೀಯ ಮಹಿಳಾ ಘಟಕ ಕಾಲೇಜು, ಸ್ಥಳ: ರೋಟರಿ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 11.30

ಕನ್ನಡ ಹಬ್ಬ: ಅತಿಥಿಗಳು: ಇಂದ್ರಜಿತ್ ಲಂಕೇಶ್, ಬೇಲೂರು ರಘುನಂದನ್, ಅಧ್ಯಕ್ಷತೆ: ರಾಜೇಂದ್ರ ಪ್ರಸಾದ್ ಎಂ.ಎನ್., ಆಯೋಜನೆ: ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಸ್ಥಳ: ವಿಶ್ವೇಶ್ವರ ಮುಖ್ಯ ಗೋಪುರದ ಆವರಣ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಮಧ್ಯಾಹ್ನ 3

4ನೇ ಅಂತರ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್: ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿಗಳು: ಶ್ರೀಧರ ಸಿ.ಎನ್., ರಘು ಜಿ.ಪಿ., ವಿ.ಲೋಕೇಶ, ಅಧ್ಯಕ್ಷತೆ: ಅಪರ್ಣಾ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಮೌಂಟ್ ಕಾರ್ಮೆಲ್ ಕಾಲೇಜ್, ಸ್ಥಳ: ಕಂಠೀರವ ಕ್ರೀಡಾಂಗಣ, ಮಧ್ಯಾಹ್ನ 3

ಕರ್ನಾಟಕ ರಾಜ್ಯೋತ್ಸವ ಆಚರಣೆ: ಎನ್. ಮಂಜುಳಾ, ಸನ್ಮಾನಿತರು: ವಿಜಯಲಕ್ಷ್ಮಿ ಬಾಳೆಕುಂದ್ರಿ, ಅಧ್ಯಕ್ಷತೆ: ಜಿ.ಆರ್. ಚಂದ್ರಶೇಖರಯ್ಯ, ಅತಿಥಿಗಳು: ಮಹೇಶ್ ಕರ್ಜಗಿ, ಸಿದ್ದಲಿಂಗಪ್ಪ ತೇಲಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕನ್ನಡ ಸಂಘ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 3.30

ಪ್ರೊ.ಎಚ್.ಟಿ.ಪೋತೆ ಅವರ ನಾಲ್ಕು ಕೃತಿಗಳ ಅವಲೋಕನ: ಉದ್ಘಾಟನೆ: ಹಂ.ಪ.ನಾಗರಾಜಯ್ಯ, ಅಧ್ಯಕ್ಷತೆ: ಹಿ.ಚಿ.ಬೋರಲಿಂಗಯ್ಯ, ಅತಿಥಿಗಳು: ಸಿ.ಕೆ.ರಾಮೇಗೌಡ, ಉಪಸ್ಥಿತಿ: ಎಚ್.ಟಿ.ಪೋತೆ, ವಿಷಯ ಮಂಡನೆ: ನಿಂಗಪ್ಪ ಮುದೇನೂರು, ಸತ್ಯಮಂಗಲ ಮಹಾದೇವ, ಶಿವರಾಜ ಬ್ಯಾಡರಹಳ್ಳಿ, ಶ್ರೀಶೈಲ ನಾಗರಾಳ, ಆಯೋಜನೆ: ಸಪ್ನಾ ಬುಕ್ ಹೌಸ್, ಕನ್ನಡ ಜನಶಕ್ತಿ ಕೇಂದ್ರ, ಮಲ್ಲೇಪುರಂ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.15

‘ಚಕ್ರ ಚಂಡಿಕೆ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಕ್ಷೇತ್ರ ಕಮಲಶಿಲೆ ಮೇಳ, ಸ್ಥಳ: ಮುಲ್ಕಿ ಸುಂದರ್‌ರಾಮ್ ಶೆಟ್ಟಿ ಮೆಮೊರಿಯಲ್ ಹಾಲ್, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಸಂಜೆ 5

ಕಬ್ಬನ್ ಉದ್ಯಾನ: ವಿವಿಧ ಪ್ರಭೇದಗಳ ಹೆಸರು, ವೈಶಿಷ್ಟ್ಯಗಳ ದಾಖಲೀಕರಣ • 2021ರಲ್ಲೇ ಆರಂಭವಾಗಿದ್ದ ಕಾರ್ಯ

ಮರಗಳ ವಿವರ ಗುರುತಿಸುವ ಕಾರ್ಯಕ್ಕೆ ಹಿನ್ನಡೆ

• ಖಲೀಲಅಹ್ಮದ ಶೇಖ



ಕಬ್ಬನ್ ಉದ್ಯಾನದ ನೋಟ —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿರುವ ಪ್ರತಿ ಮರದ ಹೆಸರು, ಮೂಲ, ವೈಶಿಷ್ಟ್ಯ ಒಳಗೊಂಡಂತೆ ಸಂಪೂರ್ಣ ವಿವರಗಳನ್ನು ದಾಖಲಿಸಿ, ಈ ಮೂಲಕ ಜನರಲ್ಲಿ ಅರಿವು ಮೂಡಿಸುವ ಉದ್ದೇಶದ ಯೋಜನೆಗೆ ಹಿನ್ನಡೆಯಾಗಿದೆ.

'ಸ್ಮಾರ್ಟ್‌ಸಿಟಿ' ಯೋಜನೆಯಡಿ ₹23 ಲಕ್ಷ ವೆಚ್ಚದಲ್ಲಿ 'ಐಡೆಂಟಿಫಿಕೇಷನ್ ಆ್ಯಂಡ್ ಟ್ರೇಲಿಂಗ್' ಹೆಸರಿನಲ್ಲಿ ಕಾಮಗಾರಿ ಕೈಗೊಳ್ಳಲಾಗಿತ್ತು. ಜುಲೈ 2021ರಲ್ಲಿ ಚಾಲನೆ ನೀಡಿದ್ದು, 2022ರ ಜೂನ್‌ನಲ್ಲೇ ಮುಗಿಯಬೇಕಾಗಿತ್ತು. ಆದರೆ, ಯೋಜನೆಯ ಜಾರಿ ಆಮೆಗತಿಯಲ್ಲಿ ಸಾಗಿದ್ದು, ಸಾರ್ವಜನಿಕರ ಅಸಮಾಧಾನಕ್ಕೆ ಗುರಿಯಾಗಿದೆ.

ಕಬ್ಬನ್ ಉದ್ಯಾನದಲ್ಲಿ ವಿವಿಧ ಜಾತಿಯ 8,837 ಮರಗಳಿವೆ. ಇವುಗಳಲ್ಲಿ 197ಕ್ಕೂ ಹೆಚ್ಚು ಪಾರಂಪರಿಕ ಪ್ರಭೇದಗಳು ಎಂದು ಗುರುತಿಸಲಾಗಿದೆ. ಆದರೆ, ಅವುಗಳ ಬಗ್ಗೆ ಸಾರ್ವಜನಿಕರಿಗೆ ಸಮರ್ಪಕ ಮಾಹಿತಿ ಇಲ್ಲ.

'ಕಬ್ಬನ್ ಉದ್ಯಾನದ ಪ್ರತಿ ಮರವೂ ವಿಭಿನ್ನ ಗುಣಲಕ್ಷಣಗಳನ್ನು ಒಳಗೊಂಡಿದೆ. ಅವುಗಳ ಸಂಪೂರ್ಣ ವಿವರ ದಾಖಲಿಸುವ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕು. ಇದರಿಂದ ವಿದ್ಯಾರ್ಥಿಗಳು, ಪ್ರವಾಸಿಗರಿಗೆ ಮತ್ತು ವಾಯುವಿಹಾರಿಗಳಿಗೆ ಅನುಕೂಲವಾಗಲಿದೆ' ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ ಒತ್ತಾಯಿಸಿದರು.

ಮರಕ್ಕೆ ಹಾನಿಯಾಗದಂತೆ ಫಲಕ: 'ಯೋಜನೆಯಡಿ ಅಳವಡಿಸುವ ಫಲಕಗಳು ಮರಗಳಿಗೆ ಹಾನಿ ಉಂಟುಮಾಡುವುದಿಲ್ಲ. ಮೊಳೆ ಹೊಡೆಯುವುದು, ರಾಸಾಯನಿಕ ಲೇಪನ ಸೇರಿ ಅಪಾಯಕಾರಿ ವಿಧಾನಗಳನ್ನು ಬಳಸುವುದಿಲ್ಲ. ಫಲಕ ಅಳವಡಿಕೆಗೆ ಆಧುನಿಕ ವಿಧಾನ ಅನುಸರಿಸಲಾಗುವುದು' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್.ಪಿ.ಬಾಲಕೃಷ್ಣ ವಿವರಿಸಿದರು.

'ಕಾಮಗಾರಿ ಕೈಗೊಂಡ ಸಂಸ್ಥೆ ಮರಗಳಿಗೆ ಜಿಪಿಎಸ್, ಕ್ಯೂಆರ್ ಕೋಡ್ ಅಳವಡಿಸುವ ಪ್ರಸ್ತಾವವನ್ನು ಸ್ಮಾರ್ಟ್‌ಸಿಟಿಯವರಿಗೆ ಸಲ್ಲಿಸಲಾಗಿದೆ. ಅದು ಮಾತುಕತೆಯ ಹಂತದಲ್ಲಿದ್ದು, ಇನ್ನೂ ಅಂತಿಮಗೊಂಡಿಲ್ಲ' ಎಂದು ಅವರು ಮಾಹಿತಿ ನೀಡಿದರು.

ಕಬ್ಬನ್ ಉದ್ಯಾನ: ಮರಗಳ ಮಾಹಿತಿ ಸಿದ್ಧ

'ಯೋಜನೆಯ ಮೊದಲ ಹಂತದಲ್ಲಿ ಕಬ್ಬನ್ ಉದ್ಯಾನದ ಮರಗಳ ಗಣತಿ ಮತ್ತು ಹೆಸರು, ಅವುಗಳ ಮೂಲ, ವೈಶಿಷ್ಟ್ಯ, ಹಾಗೂ ಪ್ರಭೇದದ ಮಾಹಿತಿ ಕಲೆಹಾಕಲಾಗಿದೆ' ಎಂದು ಯೋಜನೆಯ ಗುತ್ತಿಗೆ ಪಡೆದಿರುವ ಫ್ರಿಪ್ಸ್ ಸಂಸ್ಥೆಯ ನಿರ್ದೇಶಕ ವಿವೇಕ್ ಮಹಾಲೆ ಮಾಹಿತಿ ನೀಡಿದರು.

'20 ಸಸ್ಯವಿಜ್ಞಾನ ವಿದ್ಯಾರ್ಥಿಗಳ ನೆರವಿನಿಂದ ಪ್ರತಿ ಮರದ ಹೆಸರು, ವಯಸ್ಸು, ಗುಣ, ಮೂಲ ಒಳಗೊಂಡ ವಿಶೇಷಗಳ ಬಗ್ಗೆ 300 ಪುಟಗಳ ವರದಿ ಸಿದ್ಧವಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಇಬ್ಬರು ಸಸ್ಯವಿಜ್ಞಾನ ತಜ್ಞರು ಇದನ್ನು ಅಂತಿಮಗೊಳಿಸಿದ್ದಾರೆ' ಎಂದು ತಿಳಿಸಿದರು.

ಉದ್ಯಾನವನ್ನು 18 ವಲಯಗಳನ್ನಾಗಿ ವಿಂಗಡಿಸಿದ್ದು, ವಲಯವಾರು ಮರಗಳಿಗೆ ಕ್ಯೂಆರ್ ಕೋಡ್ ಮತ್ತು ಫಲಕ ಅಳವಡಿಸುವ ಕಾರ್ಯ ಎರಡನೇ ಹಂತದಲ್ಲಿ ನಡೆಯಲಿದೆ' ಎಂದು ತಿಳಿಸಿದರು.

ಕಬ್ಬನ್ ಉದ್ಯಾನದಲ್ಲಿ ಐಡೆಂಟಿಫಿಕೇಷನ್ ಆ್ಯಂಡ್ ಟ್ರೇಲಿಂಗ್ ಕಾಮಗಾರಿ ಪ್ರಗತಿಯಲ್ಲಿದ್ದು, ಡಿಸೆಂಬರ್ ಅಂತ್ಯದೊಳಗೆ ಮುಗಿಯಲಿದೆ.

ಎಚ್.ಪಿ.ಬಾಲಕೃಷ್ಣ, ಉಪನಿರ್ದೇಶಕ ತೋಟಗಾರಿಕೆ ಇಲಾಖೆ (ಕಬ್ಬನ್ ಉದ್ಯಾನ)

ಪಿಆರ್‌ಆರ್: ಕೇಂದ್ರ ಪರಿಸರ ಸಚಿವಾಲಯಕ್ಕೆ ಮನವಿ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಿಸಲು ಅನುಮತಿ ಕೋರಿ ಕೇಂದ್ರ ಪರಿಸರ ಸಚಿವಾಲಯಕ್ಕೆ ಬಿಡಿಎ ಮನವಿ ಸಲ್ಲಿಸಿದೆ. ರಾಜ್ಯಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರಕ್ಕೆ (ಎಸ್‌ಇಐಎಎ) ಅನುಮತಿ ಕೋರಿ ಸಲ್ಲಿಸಿದ್ದ ಮನವಿಯನ್ನು ಬಿಡಿಎ ಹಿಂಪಡೆದಿದೆ.

73.3 ಕಿ.ಮೀ ಪೆರಿಫೆರಲ್ ವರ್ತುಲ ರಸ್ತೆಗೆ ಅಂದಾಜು 2,560 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದ್ದು, ಪರಿಹಾರ ನೀಡುವ ಬಗ್ಗೆ ಗೊಂದಲಗಳಿವೆ. ಹಳೆಯ ಪರಿಹಾರ ಬೇಡ ಎನ್ನುತ್ತಿರುವ ರೈತರು, ಹೊಸದಾಗಿ ಪರಿಹಾರ ನಿಗದಿಪಡಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಅಲ್ಲದೆ, ಈ ಯೋಜನೆ ಜಾರಿಗೆ ಸುಮಾರು 36 ಸಾವಿರ ಮರಗಳನ್ನು ಕಡಿಯಬೇಕಾಗುತ್ತದೆ. ಇದಕ್ಕೆ ಪರಿಸರ ಕಾರ್ಯಕರ್ತರಿಂದ ಸಾಕಷ್ಟು ವಿರೋಧವೂ ವ್ಯಕ್ತವಾಗಿದೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತು ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಪಾದಚಾರಿಮಾರ್ಗ ಸರಿಪಡಿಸಿ'

'ಬಸವನಗುಡಿಯ ಟ್ಯಾಗೋರ ಕೆಳಸೇತುವೆಯ ಹತ್ತಿರ ಪಾದಚಾರಿಮಾರ್ಗ ಹಾಳಾಗಿದೆ. ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದು ಕಷ್ಟವಾಗಿದೆ. ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಕಲ್ಲುಗಳು ಕಿತ್ತು ಹೋಗಿವೆ. ಈಚೆಗೆ ಮಳೆಯಿಂದಾಗಿ ಮಣ್ಣು ಕೊಚ್ಚಿಕೊಂಡು ಹೋಗಿದೆ. ವಾಹನಗಳ ವೇಗದಿಂದಾಗಿ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು.

ಸತೀಶ್ ಬೇವಿನಕಟ್ಟಿ, ಪಾದಚಾರಿ



ಮಿಷನ್ ರಸ್ತೆಯ ಸಿಎಸ್‌ಐ ಕಂಪೌಂಡ್ ಬಳಿ ರಸ್ತೆ ಹದಗೆಟ್ಟಿರುವುದು

'ರಸ್ತೆ ಗುಂಡಿ ಮುಚ್ಚಿ'

ಮಿಷನ್ ರಸ್ತೆಯ ಸಿಎಸ್‌ಐ ಕಂಪೌಂಡ್ ಪಕ್ಕದ ರಸ್ತೆ ಹಾಳಾಗಿದೆ. ವಾಹನ ಸವಾರರು ಪರದಾಡುವ ಸ್ಥಿತಿ ಇದೆ. ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಒಂದಿಲ್ಲೊಂದು ಅಪಘಾತ ಸಂಭವಿಸಿ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆಯಲ್ಲಿರುವ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

ಪ್ರಜ್ವಲ್, ದ್ವಿಚಕ್ರ ವಾಹನ ಸವಾರ

ರಸ್ತೆ ದುರಸ್ತಿಗೊಳಿಸಿ

ಯಶವಂತಪುರ ವಿಧಾನಸಭಾ ಕ್ಷೇತ್ರದ ಹೇರೋಹಳ್ಳಿಯ ವಾರ್ಡ್ ನಂ.72ರ ಸಿಂಡಿಕೇಟ್ ಬ್ಯಾಂಕ್ ಲೇಔಟ್‌ನ 5ನೇ ಕ್ರಾಸ್ ರಸ್ತೆ ಹಾಳಾಗಿದೆ. ಜಲಮಂಡಳಿ ಪೈಪ್ ಅಳವಡಿಸಲು ರಸ್ತೆ ಅಗೆದು 2–3 ವರ್ಷಗಳಾದರೂ ಸರಿಪಡಿಸಿಲ್ಲ. ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಕ್ರಮಕೈಗೊಂಡಿಲ್ಲ. ಅಧಿಕಾರಿಗಳು ಹಾರಿಕೆ ಉತ್ತರವನ್ನು ನೀಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ರಾಮ್, ಸ್ಥಳೀಯ ನಿವಾಸಿ

ಭತ್ತ, ರಾಗಿ ಖರೀದಿ ಕೇಂದ್ರ ತೆರೆಯಲು ಶಾಸಕ ಆಗ್ರಹ



ದಿನೇಶ್ ಗೂಳಿಗೌಡ

ಬೆಂಗಳೂರು: 'ಪ್ರಸಕ್ತ ಸಾಲಿನ (2022-23) ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ಸ್ಥಾಪಿಸಬೇಕು ಹಾಗೂ ಬೆಳೆ ಮಾರಾಟ ಮಿತಿ ತೆಗೆದುಹಾಕಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಸಲ್ಲಿಸಿದ್ದಾರೆ.

'ಪ್ರಸಕ್ತ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸುಮಾರು 81,459 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಕಟಾವಿಗೆ ಬಂದಿದೆ. 50 ಲಕ್ಷ ಕ್ವಿಂಟಲ್ ಉತ್ಪಾದನೆ ಅಂದಾಜಿದೆ. ಸರ್ಕಾರ ಈವರೆಗೂ ಖರೀದಿ ಕೇಂದ್ರ ಆರಂಭ ಅಥವಾ ಬೆಂಬಲ ಬೆಲೆ ನಿಗದಿ ಹಾಗೂ ಒಬ್ಬ ರೈತನಿಂದ ಎಷ್ಟು ಕ್ವಿಂಟಲ್ ಭತ್ತ ಖರೀದಿಸಲಾಗುತ್ತದೆ ಎಂಬುದನ್ನು ತಿಳಿಸಿಲ್ಲ. ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿ ಸುಮಾರು 50 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಾಗಿದ್ದು, 10 ಲಕ್ಷಕ್ಕೂ ಹೆಚ್ಚು ಕ್ವಿಂಟಲ್ ರಾಗಿ ಬೆಳೆ ಅಂದಾಜಿಸಲಾಗಿದೆ. ಆದರೆ, ಖರೀದಿ ಕೇಂದ್ರ ತೆರೆದಿಲ್ಲ. ವಿಳಂಬವಾದರೆ ಮಧ್ಯವರ್ತಿಗಳ ಕಪಿಮುಷ್ಟಿಗೆ ಸಿಲುಕಿ ಕಡಿಮೆ ಬೆಲೆಗೆ ಭತ್ತ ಮತ್ತು ರಾಗಿಯನ್ನು ಮಾರಾಟ ಮಾಡಿ ನಷ್ಟಕ್ಕೆ ಒಳಗಾಗುವ ಸಾಧ್ಯತೆ ಇದೆ' ' ಎಂದು ಮನವಿಯಲ್ಲಿ ಅವರು ಉಲ್ಲೇಖಿಸಿದ್ದಾರೆ.

'ಜಾನಪದ ಕಲೆ ಪರಿಚಯಕ್ಕೆ ರೆಪರ್ಟರಿ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಯಕ್ಷಗಾನ ಕಲಾವಿದ ರಾಧಾಕೃಷ್ಣ ಉರಾಳ, ಬೊಂಬೆಯಾಟ ಕಲಾವಿದ ದತ್ತಾತ್ರೇಯ ಅರಳಿಕಟ್ಟೆ, ಬರಗೂರು ರಾಮಚಂದ್ರಪ್ಪ ಹಾಗೂ ಎಂ.ಎಸ್‌ ನರಸಿಂಹಮೂರ್ತಿ ಅವರಿಗೆ ತೊಗಲುಬೊಂಬೆಗಳ ಬಗ್ಗೆ ಸಂಸ್ಥೆಯ ಮುಖ್ಯಸ್ಥೆ ಯಶೋಧ ಶಶಿಧರ್ ವಿವರಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಂಗ ಕಲೆ ಪ್ರೋತ್ಸಾಹಿಸಲು ರಂಗಾಯಣ ಸ್ಥಾಪಿಸಿದಂತೆ ಜಾನಪದ ಕಲೆಯನ್ನು ಕ್ರಮಬದ್ಧವಾಗಿ ಪರಿಚಯಿಸಲು ಜಾನಪದ ರೆಪರ್ಟರಿಯನ್ನು ಸರ್ಕಾರ ಸ್ಥಾಪಿಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹಿಸಿದರು.

ರಂಗಪುತ್ಥಳಿ ಯಶೋಧ ಪಪೆಟ್ರಿ ಸಂಸ್ಥೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ಪುತ್ಥಳಿ ಸಂಭ್ರಮ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಜಾನಪದ ಕಲೆಯನ್ನೇ ಬದುಕಾಗಿಸಿಕೊಂಡವರ ಬದುಕು ಹಸನಾಗಿಸಲು ಯೋಚಿಸಬೇಕು. ರೆಪರ್ಟರಿ ಸ್ಥಾಪನೆಯಿಂದ ಈ ಕಲೆ ಬೆಳೆಯುತ್ತದೆ. ಹೊಸ ರೀತಿಯ ಪ್ರಯೋಗಗಳು ಕಲೆಯನ್ನು ಉಳಿಸುವ ಜತೆಗೆ ಬೆಳೆಸುತ್ತವೆ. ಈ ಕಲೆಗೆ ಸಾವಿಲ್ಲ' ಎಂದು ಹೇಳಿದರು.

'ಈ ಮೊದಲು ಜಾನಪದ ಕಲೆಯ ಕುಲ, ಕಸುಬು ಎಲ್ಲವೂ ಒಂದೇ ಆಗಿತ್ತು. ಕೈಗಾರೀಕರಣ ಬಳಿಕ ಕುಲ ಪದ್ಧತಿ ಶಿಥಿಲವಾಗಿ, ಕಲೆಗಳ ಪ್ರಯೋಗ ಬದಲಾಯಿತು. ಜನಪದ ಸಾಹಿತ್ಯವನ್ನು ಮತ್ತೆ ಸೃಷ್ಟಿಸಲು ಸಾಧ್ಯವಿಲ್ಲ. ಆದರೆ, ಕಲೆಯನ್ನು ಮರು ಸೃಷ್ಟಿಸಬಹುದು. ಈ ಕಲೆ ಹೊಸ ಹೊಸ ರೂಪದಲ್ಲಿ ಬರುತ್ತಾ ಇರಬೇಕು' ಎಂದು ತಿಳಿಸಿದರು.

ಹಾಸ್ಯ ಬರಹಗಾರ ಎಂ.ಎಸ್. ನರಸಿಂಹಮೂರ್ತಿ, 'ಕೋವಿಡ್ ಅವಧಿಯಲ್ಲಿ ಕಲಾವಿದರ ಜೀವನವು ಸಂಕಷ್ಟದಲ್ಲಿತ್ತು. ಮುಂದೆ ಹೇಗೆ ಎಂಬ ಪ್ರಶ್ನೆ ಹಲವರಿಗೆ ಕಾಡಿದ್ದವು. ಈಗ ಮೊದಲಿನಂತೆ ಚಟುವಟಿಕೆಗಳು ನಡೆಯುತ್ತಿರುವುದು ಉತ್ತಮ ಬೆಳವಣಿಗೆ' ಎಂದರು.

ಇದಕ್ಕೂ ಮೊದಲು ಸಂಸ್ಥೆಯ ಕಲಾವಿದರು ತೊಗಲುಗೊಂಬೆಯಾಟ ಪ್ರದರ್ಶಿಸಿದರು. ರಾಧಾಕೃಷ್ಣ ಉರಾಳ ನೇತೃತ್ವದಲ್ಲಿ ಕಲಾಕದಂಬ ಆರ್ಟ್ ಸೆಂಟರ್ ತಂಡದವರು ಯಕ್ಷಗಾನ ಪ್ರಸ್ತುತಪಡಿಸಿದರು.

ಸಂಕ್ಷಿಪ್ತ ಸುದ್ದಿ

'ಧನಸಹಾಯ ಪ್ರಕ್ರಿಯೆ ಸರಳಗೊಳಿಸಿ'

ಬೆಂಗಳೂರು: 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧನಸಹಾಯ ಯೋಜನೆಗೆ ಸಂಬಂಧಿಸಿದ ಪ್ರಕ್ರಿಯೆಗಳ ಸರಳೀಕರಣ ಮೂಲಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳ ಉಳಿವಿಗೆ ಸರ್ಕಾರ ನೆರವಾಗಬೇಕು' ಎಂದು ಉದಯಭಾನು ಕಲಾ ಸಂಘ ಆಗ್ರಹಿಸಿದೆ.

'ಇತ್ತೀಚಿನ ವರ್ಷಗಳಲ್ಲಿ ಸಚಿವರು ಬದಲಾದಂತೆ ನಿಯಮಗಳು ಬದಲಾಗುತ್ತಿವೆ. ಈ ಹಿಂದೆ ಇದ್ದ ಸಚಿವರು ಅನುದಾನ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದರು. ಹೋರಾಟ ನಡೆಸಿ ಅದರಿಂದ ಬಿಡುಗಡೆ ಹೊಂದಲಾಯಿತು. ಈಗ ಆನ್‌ಲೈನ್ ಮೂಲಕ ನೂರಾರು ಪುಟ ದಾಖಲೆ ಸಲ್ಲಿಸುವ ನಿಯಮವಿದೆ. ಸರ್ವರ್ ಸಮಸ್ಯೆ ಸೇರಿ ವಿವಿಧ ತಾಂತ್ರಿಕ ಕಾರಣದಿಂದ ದಾಖಲಾತಿ ಸಲ್ಲಿಕೆ ಪ್ರಕ್ರಿಯೆ ಸಮರ್ಪಕವಾಗಿ ನಡೆಯುತ್ತಿಲ್ಲ' ಎಂದು ಸಂಘದ ಕಾರ್ಯದರ್ಶಿ ಎಂ. ನರಸಿಂಹ ತಿಳಿಸಿದ್ದಾರೆ.

'ಮಾತಾಡ್ ಮಾತಾಡ್ ಕನ್ನಡ ಸೇರಿ ಹಲವು ಕಾರ್ಯಕ್ರಮಗಳು ಸಂಘ–ಸಂಸ್ಥೆಗಳ ಸಹಕಾರದಿಂದ ಯಶಸ್ವಿಯಾಗಿವೆ. ಈಗ ಸಂಘ–ಸಂಸ್ಥೆಗಳು, ಕಲಾವಿದರ ಕಡೆಗಣನೆ ಸರಿಯಲ್ಲ. ಕೂಡಲೇ ಸಮಸ್ಯೆಗಳನ್ನು ನಿವಾರಿಸಬೇಕು' ಎಂದು ಒತ್ತಾಯಿಸಿದ್ದಾರೆ.

ದೃಢೀಕರಣ ಪತ್ರ: ಪಿಂಚಣಿದಾರರಿಗೆ ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಪಿಂಚಣಿದಾರರು ತಮ್ಮ ಜೀವಿತದ ದೃಢೀಕರಣ ಪತ್ರವನ್ನು ಡಿ.31ರ ಒಳಗೆ ಸಲ್ಲಿಸುವಂತೆ ಕುಲಸಚಿವರು ತಿಳಿಸಿದ್ದಾರೆ.

ಖಾತೆ ಹೊಂದಿರುವ ಬ್ಯಾಂಕ್ ಶಾಖಾಧಿಕಾರಿಗಳಿಂದ ಅಥವಾ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ದೃಢೀಕರಿಸಿದ ಪತ್ರವನ್ನು ವಿವರಗಳೊಂದಿಗೆ ವಿಶ್ವವಿದ್ಯಾಲಯದ ಪಿಂಚಣಿ ವಿಭಾಗಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ.

ಸಿ.ಎಂ ಗಾದಿ: ಕಾಂಗ್ರೆಸ್‌ನಲ್ಲಿ ಮತ್ತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ, ಮುಂದಿನ ಮುಖ್ಯಮಂತ್ರಿ ಗಾದಿ ವಿಚಾರ ಕಾಂಗ್ರೆಸ್‌ನಲ್ಲಿ ಮತ್ತೆ ಮುಂಚೂಣಿಗೆ ಬಂದಿದೆ.

ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಭಾನುವಾರ ಮಾತನಾಡಿದ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯಾಗುವ ಕನಸು ಬಿಚ್ಚಿಟ್ಟಿರುವುದು ಇದೀಗ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಒಕ್ಕಲಿಗ ಸಮುದಾಯದ ಸಭೆಯಲ್ಲಿ ಮಾತನಾಡಿದ ಶಿವಕುಮಾರ್, 'ಇವತ್ತು ನಮಗೆ ಒಂದು ಅವಕಾಶ ಸಿಕ್ಕಿದೆ. ಇಂದು ನಮ್ಮ ಮನೆ ಬಾಗಿಲಿಗೆ ಬೆಳಕು ಹರಿದು ಬಂದಿದೆ. ಅದನ್ನು ನೀವು ರಾಜಕೀಯವಾಗಿ ಬಳಸಿಕೊಳ್ಳಬೇಕು. ನಿಮ್ಮ ಸ್ಫೂರ್ತಿ, ಆತ್ಮವಿಶ್ವಾಸ ನೋಡುತ್ತಿದ್ದರೆ ವಿಧಾನಸೌಧದಲ್ಲಿ ಕುಳ್ಳಿರಿಸುವ ರೀತಿ ಇದೆ. ಏನು ಮಾಡುತ್ತೀರೋ ಗೊತ್ತಿಲ್ಲ, ನಿಮ್ಮ ಮನೆ ಬಾಗಿಲಿಗೆ ಅವಕಾಶ ಬಂದಿದೆ, ಕಳೆದುಕೊಳ್ಳಬೇಡಿ. ಆ ಮೂಲಕ, ಬೆನ್ನಿಗೆ ನಿಂತು ಸಿ.ಎಂ ಮಾಡಿ' ಎಂದು ಪರೋಕ್ಷವಾಗಿ ಕೋರಿದ್ದಾರೆ.

ಮತ್ತೊಂದೆಡೆ, ಕನಕ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿಯೇ 'ಸಿದ್ದರಾಮಯ್ಯ ಮುಂದಿನ ಸಿಎಂ' ಎಂಬ ಘೋಷಣೆ ಮೊಳಗಿದೆ. ಸಿದ್ದರಾಮಯ್ಯ ಅವರ ಆಪ್ತ, ಹೆಬ್ಬಾಳ ಕ್ಷೇತ್ರದ ಶಾಸಕ ಬೈರತಿ ಸುರೇಶ್ ಅವರು, 'ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ' ಎಂದು ಘೋಷಿಸಿದ್ದಾರೆ.

ಮುಂದಿನ ಮುಖ್ಯಮಂತ್ರಿ ವಿಚಾರದಲ್ಲಿ ಯಾರೂ ಮಾತನಾಡಬಾರದು ಎಂದು ಈ ಹಿಂದೆಯೇ ಪಕ್ಷದ ನಾಯಕರಿಗೆ ಹೈಕಮಾಂಡ್ ಎಚ್ಚರಿಕೆ ನೀಡಿತ್ತು.

'ಜನಸ್ಪಂದನ' ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ 'ಪ್ರಜಾವಾಣಿ'ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

ಲಾಲ್‌ಬಾಗ್: ಸಮಸ್ಯೆಗಳಿಗೆ ಇಲ್ಲ ಮುಕ್ತಿ

'ಸರಸ ಸಲ್ಲಾಪಕ್ಕೆ ಕೊನೆಯಿಲ್ಲವೇ?'



ಲಾಲ್‌ಬಾಗ್ ಉದ್ಯಾನ ಇತ್ತೀಚೆಗೆ ಪ್ರೇಮಿಗಳ ಸರಸ ಸಲ್ಲಾಪಕ್ಕೆ ಮೀಸಲಾಗುತ್ತಿದೆ. ಕುಟುಂಬ ಸಮೇತ ಉದ್ಯಾನ ವೀಕ್ಷಿಸಲು ಬರುವವರಿಗೆ ಇದರಿಂದ ಮುಜುಗರ ಆಗಲಿದೆ. ಇದು ಸಣ್ಣ ಮಕ್ಕಳ ಮೇಲೆ ಪರಿಣಾಮವನ್ನುಂಟು ಮಾಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಸಂತೋಷ್ ಪಿ. ಶೆಟ್ಟಿ, ಕಾಕ್ಸ್‌ಟೌನ್ ನಿವಾಸಿ

'ಸಿಬ್ಬಂದಿಯ ಅಸಭ್ಯ ವರ್ತನೆ'

ನಮ್ಮ ಕುಟುಂಬ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದಾಗ ಉದ್ಯಾನದ ಭದ್ರತಾ ಸಿಬ್ಬಂದಿ ಅಸಭ್ಯವಾಗಿ ವರ್ತಿಸಿದರು. ಸೆಲ್ಫಿ ತೆಗೆದುಕೊಳ್ಳಲೂ ಆಕ್ಷೇಪ ವ್ಯಕ್ತಪಡಿಸಿದರು. ಸಾರ್ವಜನಿಕ ಪ್ರದೇಶಗಳಲ್ಲಿ ಯಾವ ರೀತಿ ವರ್ತಿಸಬೇಕು ಎಂಬ ಜ್ಞಾನ ನಮಗಿದೆ. ಆದರೆ, ಸಿಬ್ಬಂದಿಯ ವರ್ತನೆಯಿಂದ ಲಾಲ್‌ಬಾಗ್‌ನ ಗೌರವಕ್ಕೆ ಧಕ್ಕೆಯಾಗುತ್ತಿದೆ. ಅಧಿಕಾರಿಗಳು ಮುಂದೆ ಈ ರೀತಿಯಾಗದಂತೆ ಕ್ರಮ ಕೈಗೊಳ್ಳಬೇಕು.

ಹೇಮಂತ, ಬೆಂಗಳೂರು.

ಪ್ರಜಾವಾಣಿ @75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಬಡಜನರಿಗೆ ಹಲವು ಸೌಲಭ್ಯಗಳ ವಿತರಣೆ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಬಡಮಕ್ಕಳನ್ನು ಎ. ರವಿ ದತ್ತು ತೆಗೆದುಕೊಂಡರು. ಸಚಿವರಾದ ಆರ್‌.ಅಶೋಕ, ಡಾ.ಕೆ.ಸುಧಾಕರ್, ಬಿಜೆಪಿ ಮುಖಂಡರಾದ ಪಿ.ಕೆ.ರಾಜಗೋಪಾಲ್, ಎಂ.ಈ.ಪಿಳ್ಳಪ್ಪ, ಟಿ.ಎನ್‌.ಚಂದ್ರಶೇಖರ್ ಗೌಡ ಇದ್ದರು.

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಎ. ರವಿ ಅವರ ಜನ್ಮದಿನದ ಅಂಗವಾಗಿ 'ಎ. ರವಿ ಅಭಿಮಾನಿಗಳ ಬಳಗ'ದ ವತಿಯಿಂದ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಖ್ಯರಸ್ತೆ, ಹುಣಸಮಾರನಹಳ್ಳಿಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಜನರಿಗೆ ಹಲವು ಸೌಲಭ್ಯಗಳನ್ನು ವಿತರಿಸಲಾಯಿತು.

ಗಿನ್ನಿಸ್ ದಾಖಲೆಗೆ ಭಾಜನರಾಗಿರುವ ಇಬ್ಬರು ಪ್ರತಿಭಾನ್ವಿತ ಮಕ್ಕಳು ಸೇರಿದಂತೆ ಎಂಟು ಮಕ್ಕಳನ್ನು ರವಿ ದತ್ತು ಪಡೆದರು. 5 ಸಾವಿರ ಮಹಿಳೆಯರಿಗೆ ಸೀರೆ ಮತ್ತು ಬಾಗಿನ, 2 ಸಾವಿರ ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಸೇರಿ ವಿವಿಧ ಸವಲತ್ತುಗಳನ್ನು ನೀಡಲಾಯಿತು. ಈ ವೇಳೆ ಮಾತನಾಡಿದ ಸಚಿವ ಆರ್‌.ಅಶೋಕ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ರವಿ ಮೂರು ಬಾರಿ ಸ್ಪರ್ಧಿಸಿ ಕಡಿಮೆ ಅಂತರದಲ್ಲಿ ಸೋಲು ಅನುಭವಿಸಿದ್ದರೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಒದಗಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬೇಲಿಮಠದ ಶಿವರುದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ, ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಮಹರ್ಷಿ ಆನಂದ ಗುರೂಜಿ, ಸಚಿವರಾದ ಡಾ.ಕೆ. ಸುಧಾಕರ್, ಮುನಿರತ್ನ, ಸಂಸದ ಡಿ.ವಿ. ಸದಾನಂದ ಗೌಡ, ಶಾಸಕ ಎಸ್.ಆರ್. ವಿಶ್ವನಾಥ್ ಇದ್ದರು.

ಬಂದರು ವಿರೋಧಿ ಪ್ರತಿಭಟನೆ: ಪಾದ್ರಿಗಳ ವಿರುದ್ಧ ಮೊಕದ್ದಮೆ

ತಿರುವನಂತಪುರ (ಪಿಟಿಐ): ಕೇರಳದ ವಿಳಿಂಞದಲ್ಲಿ ಶನಿವಾರ ನಡೆದ 'ಬಂದರು ವಿರೋಧಿ ಪ್ರತಿಭಟನೆ'ಗೆ ಸಂಬಂಧಿಸಿ ಇಲ್ಲಿಯ ಆರ್ಚ್‌ಬಿಷಪ್ ಥಾಮಸ್ ಜೆ.ನೆಟ್ಟೊ ಸೇರಿ ಸುಮಾರು 15 ಲ್ಯಾಟಿನ್ ಕ್ಯಾಥೋಲಿಕ್ ಪಾದ್ರಿಗಳ ಮೇಲೆ ಮೊಕದ್ದಮೆ ದಾಖಲಿಸಲಾಗಿದೆ.

ಇವರು ಪ್ರತಿಭಟನೆಯನ್ನು ಬೆಂಬಲಿಸಿದ್ದರು. ಆರೋಪಿಗಳ ವಿರುದ್ಧ ಕ್ರಿಮಿನಲ್ ಸಂಚು, ಕಾನೂನು ಬಾಹಿರವಾಗಿ ಗುಂಪುಸೇರುವಿಕೆ ಮತ್ತು ಗಲಭೆ ಮೊಕದ್ದಮೆಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಲ್ಲದೆ, ಇತರ ಸುಮಾರು 110 ಮಂದಿ ಪ್ರತಿಭಟನಾಕಾರರ ವಿರುದ್ಧವೂ ಮೊಕದ್ದಮೆ ದಾಖಲಿಸಲಾಗಿದೆ.

29 ಪೊಲೀಸರಿಗೆ ಗಾಯ: ಅದಾನಿ ಬಂದರು ನಿರ್ಮಾಣ ವಿರೋಧಿಸಿ ಚರ್ಚ್ ನೇತೃತ್ವದ ಉದ್ರಿಕ್ತರ ಗುಂಪು ವಿಳಿಂಞ ಪೊಲೀಸ್ ಠಾಣೆ ಮೇಲೆ ಭಾನುವಾರ ರಾತ್ರಿ ದಾಳಿ ನಡೆಸಿದ ಪರಿಣಾಮ 29 ಪೊಲೀಸರು ಗಾಯಗೊಂಡಿದ್ದಾರೆ.

ಪೊಲೀಸ್ ವಾಹನಗಳು ಜಖಂಗೊಂಡಿವೆ. ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪಂಚ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಲೇಖಕ ಸಂತೋಷ ಕುಮಾರ ಮೆಹೆಂದಳೆ ಬೇಸರ

'ನಿರೀಕ್ಷಿತ ಮಟ್ಟದಲ್ಲಿ ಓದುಗರಿಗೆ ತಲುಪದ ಪುಸ್ತಕ'

ಪ್ರಜಾವಾಣಿ ವಾರ್ತೆ



ವಿಕ್ರಂ ಪ್ರಕಾಶನ ಆಯೋಜಿಸಿದ ಕನ್ನಡ ರಾಜ್ಯೋತ್ಸವ ಹಾಗೂ ಐದು ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಹರಿಪ್ರಕಾಶ್, ನಿತ್ಯಾನಂದ ವಿವೇಕವಂಶಿ, ವಿಜಯ ಕರ್ನಾಟಕ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, ಲೇಖಕ ಮತ್ತು ಅಂಕಣಕಾರ ರೋಹಿತ್ ಚಕ್ರತೀರ್ಥ, ಕೃತಿಕರ್ತೃಗಳಾದ ಡಿ.ವಿ. ಗುರುಪ್ರಸಾದ್, ಸಿನಿಮಾ ಸಾಹಿತಿ ವಿ. ನಾಗೇಂದ್ರ ಪ್ರಸಾದ್, ನಾ. ಸೋಮೇಶ್ವರ, ಸಂತೋಷ ಕುಮಾರ್ ಮೆಹೆಂದಳೆ, ಟಿಎನ್ನೆಸ್ ಮತ್ತು ಮುಧು ಎಸ್‌ ಚಿನ್ನಸ್ವಾಮಿ ಅವರು ಭಾಗವಹಿಸಿದ್ದರು. —ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕನ್ನಡದಲ್ಲಿ ವರ್ಷಕ್ಕೆ 6 ಸಾವಿರಕ್ಕೂ ಅಧಿಕ ಪುಸ್ತಕಗಳು ಬಿಡುಗಡೆ ಆಗುತ್ತಿವೆ. ಆದರೆ, ಎಲ್ಲ ಪುಸ್ತಕಗಳು ನಿರೀಕ್ಷಿತ ಮಟ್ಟದಲ್ಲಿ ಓದುಗರನ್ನು ತಲುಪುತ್ತಿಲ್ಲ' ಎಂದು ಲೇಖಕ ಸಂತೋಷ ಕುಮಾರ ಮೆಹೆಂದಳೆ ಅವರು ಬೇಸರ ವ್ಯಕ್ತಪಡಿಸಿದರು.

ವಿಕ್ರಂ ಪ್ರಕಾಶನ ಭಾನುವಾರ ಆಯೋಜಿಸಿದ್ದ ಪಂಚ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. 'ಪುಸ್ತಕ ಓದುಗರ ಸಂಖ್ಯೆ ಕುಗ್ಗಲು ಸಾಮಾಜಿಕ ಜಾಲತಾಣವೂ ಕಾರಣ. ಪುಸ್ತಕ ಕೊಳ್ಳುವಿಕೆ ಜನರ ಕಡೆಯ ಆದ್ಯತೆ ಆಗಿರುತ್ತದೆ. ಪ್ರಕಾಶಕರು ಉತ್ತಮ ಪುಸ್ತಕಗಳನ್ನು ಓದುಗ ವರ್ಗಕ್ಕೆ ನೀಡಬೇಕು. ಸಾಹಿತ್ಯಕ್ಕೆ ಅದರದೆ ಆದ ಮೌಲ್ಯವಿದೆ. ಅದನ್ನು ಕಡಿಮೆ ಮಾಡಬಾರದು. ನಾನು ಬರೆದ ಪುಸ್ತಕ ಓದುಗರಿಗೆ ಇಷ್ಟವಾಗದಿದ್ದರೆ ಅವರಿಗೆ ಪುಸ್ತಕದ ಹಣ ಮರಳಿಸುವ ಸಂಕಲ್ಪ ಮಾಡಿದ್ದೇನೆ' ಎಂದು ಹೇಳಿದರು.

ನಿವೃತ್ತ ಪೊಲೀಸ್ ಅಧಿಕಾರಿ ಡಿ.ವಿ. ಗುರುಪ್ರಸಾದ್, 'ಪುಸ್ತಕ ಜಾತ್ರೆ ನವೆಂಬರ್ ತಿಂಗಳಿಗೆ ಸೀಮಿತ ಆಗಬಾರದು. ವರ್ಷದ ಎಲ್ಲ ದಿನ ಕನ್ನಡ ಜಾತ್ರೆ ನಡೆಯಬೇಕು' ಎಂದು ಹೇಳಿದರು.

ಲೇಖಕ ನಾ.ಸೋಮೇಶ್ವರ, 'ಸಂವಹನ ಸರಿಯಾದ ರೀತಿಯಲ್ಲಿ ನಡೆಯದಿದ್ದರೆ ತಪ್ಪಾಗಿ ಅರ್ಥೈಸಿಕೊಳ್ಳುವ ಸಾಧ್ಯತೆಗಳು ಇರುತ್ತವೆ. ಮಾತನಾಡುವ ಕಲೆಯನ್ನು ಮಕ್ಕಳಿಗೆ ಬಾಲ್ಯದಿಂದಲೇ ಕಲಿಸಬೇಕು. ಈ ಬಗ್ಗೆ ಪುಸ್ತಕ ಬರೆದಿದ್ದೇನೆ' ಎಂದು ಹೇಳಿದರು.

ವಿಜಯ ಕರ್ನಾಟಕದ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ, 'ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸ ಕಡಿಮೆ ಆಗುತ್ತಿದೆ. ಮೊಬೈಲ್ ಗೀಳು ಹೆಚ್ಚುತ್ತಿದೆ. ಪಾಲಕರು ಮಕ್ಕಳಿಗೆ ಮೊಬೈಲ್ ಬದಲು ಪುಸ್ತಕ ನೀಡಬೇಕು' ಎಂದರು. ಇದಕ್ಕೂ ಮೊದಲು ಟೀಮ್ ಯೋಧದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಪುಸ್ತಕ ಪರಿಚಯ

ಪುಸ್ತಕ: ಸಿಸ್ಟರ್ ಅಭಯಾ ಸಾವು ಕೊಲೆಯೋ ಆತ್ಮಹತ್ಯೆಯೋ?
ಲೇಖಕ: ಡಿ.ವಿ. ಗುರುಪ್ರಸಾದ್
ಪುಟಗಳು: 197
ಬೆಲೆ: ₹190

ಪುಸ್ತಕ: ನುಡಿದರೆ ಮುತ್ತಿನ ಹಾರದಂತಿರಬೇಕು!
ಲೇಖಕ: ನಾ. ಸೋಮೇಶ್ವರ
ಪುಟಗಳು: 196
ಬೆಲೆ: ₹200

ಪುಸ್ತಕ: ಅಲೆಮಾರಿಯ ಡೈರಿ
ಲೇಖಕ: ಸಂತೋಷ ಕುಮಾರ ಮೆಹೆಂದಳೆ
ಪುಟಗಳು: 191
ಬೆಲೆ: ₹200

ಪುಸ್ತಕ: ಯೋಧಂ ಶರಣಂ ಗಚ್ಛಾಮಿ
ಲೇಖಕ: ಟಿಎನ್‌ಎಸ್
ಪುಟಗಳು: 116
ಬೆಲೆ: ₹120

ಪುಸ್ತಕ: ಚಾಣಕ್ಯ ಅಮಿತ್ ಷಾ
ಲೇಖಕ: ಮಧು ಎಸ್. ಚಿನ್ನಸ್ವಾಮಿ
ಪುಟಗಳು: 454
ಬೆಲೆ: ₹460

• ಐದು ಪುಸ್ತಕಗಳನ್ನೂ ವಿಕ್ರಂ ಪ್ರಕಾಶನ ಪ್ರಕಟಿಸಿದೆ

‘ಗಿರಣಿ ಉದ್ಯಮ’ಕ್ಕೊಂದು ಕೋರ್ಸ್

ಗಿರಣಿ ತಂತ್ರಜ್ಞಾನ ಕಲಿಕೆಗೆ ಹೊಸ ಸಾಧ್ಯತೆ ಕಲ್ಪಿಸುವಂತಹ ಕೋರ್ಸ್ ಸಿಎಫ್‌ಟಿಆರ್‌ಐನಲ್ಲಿದೆ. ಕೋರ್ಸ್ ಕುರಿತು ಸಂಕ್ಷಿಪ್ತ ವಿವರ ಇಲ್ಲಿದೆ

ಶಿವಪ್ರಸಾದ್ ರೈ

ಹಿಟ್ಟಿನ ಗಿರಣಿಯಿಂದ ಉತ್ತಮ ಬದುಕು ಕಂಡುಕೊಳ್ಳಬಹುದೇ? ಹೌದೆನ್ನುತ್ತದೆ ಮೈಸೂರಿನ ಸಿಎಫ್‌ಟಿಆರ್‌ಐ (ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ).

ಅದಕ್ಕೆ ಕಾರಣ ಸಂಸ್ಥೆಯಲ್ಲಿರುವ ಹಿಟ್ಟಿನ ಗಿರಣಿ ತಂತ್ರಜ್ಞಾನದ (ಫ್ಲೋರ್ ಮಿಲ್ಲಿಂಗ್ ಟೆಕ್ನಾಲಜಿ) ಕೋರ್ಸ್. ಇಲ್ಲಿ ತರಬೇತಿ ಪಡೆದವರು ಉದ್ಯಮ ಸ್ಥಾಪಿಸಿದ್ದಲ್ಲದೇ ಅದರಲ್ಲಿ ಯಶಸ್ಸನ್ನೂ ಪಡೆದು, ಹಲವರಿಗೆ ಉದ್ಯೋಗಗಳನ್ನೂ ನೀಡಿದ್ದಾರೆ.

1981ರಲ್ಲಿ ಭಾರತ–ಸ್ವಿಟ್ಜರ್‌ಲೆಂಡ್ ಸಹಯೋಗದಲ್ಲಿ ಆರಂಭವಾದ ಯೋಜನೆಯೇ ‘ಅಂತರರಾಷ್ಟ್ರೀಯ ಗಿರಣಿ ತಂತ್ರಜ್ಞಾನದ ಶಾಲೆ’. (ISMT – International School of Milling Technology) ಇದು ಒಂದು ವರ್ಷದ ಅವಧಿಯ ಕೋರ್ಸ್. ಈವರೆಗೆ 41 ಬ್ಯಾಚ್‌ಗಳಲ್ಲಿ 836 ವಿದ್ಯಾರ್ಥಿಗಳು ಕೋರ್ಸ್ ಪೂರೈಸಿದ್ದಾರೆ. ಇದರಲ್ಲಿ ಭಾರತ ಹಾಗೂ ಬಾಂಗ್ಲಾದೇಶ, ಕಾಂಬೋಡಿಯಾ, ಘಾನಾ, ಕೀನ್ಯಾ ಮುಂತಾದ 26 ದೇಶಗಳ 117 ವಿದ್ಯಾರ್ಥಿಗಳು ಸೇರಿದ್ದಾರೆಂಬುದು ವಿಶೇಷ. ಇದೇ ಡಿಸೆಂಬರ್‌ನಿಂದ 42ನೇ ತಂಡಕ್ಕೆ ಕೋರ್ಸ್ ಪ್ರವೇಶ ಆರಂಭವಾಗುತ್ತಿದೆ.

ಇದಕ್ಕಾಗಿಯೇ , ಕಂಪ್ಯೂಟರ್ ನಿಯಂತ್ರಿತ ಪೈಲೆಟ್ ರೋಲರ್ ಹಿಟ್ಟಿನ ಗಿರಣಿ ಅಳವಡಿಸಲಾಗಿದೆ. ಸಂಸ್ಥೆಯಲ್ಲಿ ಪ್ರಯೋಗಾಲಯವಿದೆ. ಗಿರಣಿಯಲ್ಲಿ ಮಾಡಿದ ಉತ್ಪನ್ನಗಳ ಗುಣಮಟ್ಟ ನಿರ್ಧರಿಸಲು ‘ಪೈಲಟ್ ಸ್ಕೇಲ್ ಬೇಕಿಂಗ್’ ವ್ಯವಸ್ಥೆ ಇದೆ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳಿರುವ ಬೃಹತ್ ಗ್ರಂಥಾಲಯ, ಅನುಭವಿ ಉಪನ್ಯಾಸಕರಿದ್ದಾರೆ.



ಸುರೇಶ್ ಸ್ಯಾಕ್ರೆ, ಐ.ಎಸ್.ಎಮ್.ಟಿ ಪ್ರಾಂಶುಪಾಲ

ಶೈಕ್ಷಣಿಕ ಅರ್ಹತೆ: ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಎಂಜಿನಿ ಯರಿಂಗ್, ತಂತ್ರಜ್ಞಾನ, ವಿಜ್ಞಾನ ವಿಭಾಗದಲ್ಲಿ ಪದವಿ ಅಥವಾ ಡಿಪ್ಲೊಮಾ ಪೂರ್ಣಗೊಳಿಸಿರಬೇಕು.



ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿರುವ ಐಎಸ್‌ಎಂಟಿ ಕೇಂದ್ರ

ಉನ್ನತ ಶ್ರೇಣಿಯೊಂದಿಗೆ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಶಸ್ತಿ ಹಾಗೂ ಕೋರ್ಸ್ ಪೂರ್ಣಗೊಳಿಸಿದವರಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ. ಉದ್ಯೋಗ ಮಾರ್ಗದರ್ಶನವನ್ನೂ ನೀಡಲಾಗುತ್ತದೆ.

‘ಗಿರಣಿ ತಂತ್ರಜ್ಞಾನ ಕಲಿಕೆಗೆ ಹೊಸ ಸಾಧ್ಯತೆ ಕಲ್ಪಿಸುವ ಉದ್ದೇಶವಿರುವ ಕೋರ್ಸ್ ಇದು. ಕೋರ್ಸ್‌ನಿಂದಾಗಿ ಗಿರಣಿ ಉದ್ಯಮದಲ್ಲಿ ಸಾಕಷ್ಟು ಬದಲಾವಣೆಯಾಗಿವೆ. ಉದ್ಯೋಗಗಳು ಸೃಷ್ಟಿಯಾಗಿವೆ’ ಎಂಬುದು ಸಂಸ್ಥೆಯ ಪ್ರಾಂಶುಪಾಲ ಸುರೇಶ್ ಸ್ಯಾಕ್ರೆ ಅವರ ನುಡಿ.

‘ಗಿರಣಿ ತಂತ್ರಜ್ಞಾನದ ಕಲಿಕೆ ನನ್ನ ಬದುಕಿನ ಪ್ರಮುಖ ತಿರುವು. ಕೋರ್ಸ್ ಪಡೆದು ಗಿರಣಿ ಉದ್ಯಮ ಆರಂಭಿಸಿ ಯಶಸ್ಸು ಪಡೆದು ನೂರಾರು ಜನರಿಗೆ ಉದ್ಯೋಗ ನೀಡಿದ ತೃಪ್ತಿ ನನಗಿದೆ’ ಎನ್ನುತ್ತಾರೆ ಸಂಸ್ಥೆಯ ಹಳೆ ವಿದ್ಯಾರ್ಥಿ ಕೋಲ್ಕತ್ತಾದ ಹ್ಯಾರಿಸನ್ಸ್ ಫುಡ್ ಪ್ರೈ ಲಿಮಿಟೆಡ್ ನಿರ್ದೇಶಕ ಹ್ಯಾರೀಸ್ ನೆಲ್ಲಿಕ್ಕೋಟೆ.

ಏನೇನು ಪಠ್ಯಕ್ರಮವಿದೆ: ಈ ಕೋರ್ಸ್‌ನ ಪಠ್ಯ ಹಾಗೂ ಪ್ರಾಯೋಗಿಕ ವಿಷಯಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ.

- ಗಿರಣಿ ಕಾರ್ಯಾಚರಣೆ, ಯಂತ್ರಗಳು, ಧಾನ್ಯ ವಿಜ್ಞಾನ ಮತ್ತು ಬೇಕಿಂಗ್ ಕಲೆ.
- ಭೌತವಿಜ್ಞಾನ,ರಸಾಯನ ವಿಜ್ಞಾನ, ಗಣಿತ ವಿಜ್ಞಾನದ ಕಲಿಕೆ
- ಮೆಕ್ಯಾನಿಕ್ಸ್, ವಿದ್ಯುತ್ ತಂತ್ರಜ್ಞಾನ, ಶಕ್ತಿಯ ನಿರ್ವಹಣೆ, ಪ್ಯಾಕೇಜಿಂಗ್, ಕಂಪ್ಯೂಟರ್ ವಿಜ್ಞಾನ
- ವಿವಿಧ ಹಿಟ್ಟಿನ ಗಿರಣಿಗಳಿಗೆ ಅಧ್ಯಯನ ಪ್ರವಾಸ
- ಕೋರ್ಸ್ ಮೂಲಕ ಐ.ಎಸ್.ಎಂ.ಟಿ ಗಿರಣಿಯಲ್ಲಿ ‘ಸಸ್ಯ ಕಸಿ’ ಮತ್ತು ಸ್ವಯಂಚಾಲಿತ ಗಿರಣಿಯ ಬಗ್ಗೆ ಪ್ರಾಯೋಗಿಕ ತರಗತಿ ನೀಡುತ್ತಾರೆ. ಪ್ರವೇಶ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ದೇಶದ ವಿದ್ಯಾರ್ಥಿಗಳಿಗೆ ₹ 2.5 ಲಕ್ಷ ಹಾಗೂ ವಿದೇಶಿ ವಿದ್ಯಾರ್ಥಿಗಳಿಗೆ 11 ಸಾವಿರ ಡಾಲರ್ ಶುಲ್ಕ ನಿಗದಿಪಡಿಸಿದ್ದು, ವಸತಿ ನಿಲಯದ ಖರ್ಚು ಪ್ರತ್ಯೇಕ. ಹೆಚ್ಚಿನ ಮಾಹಿತಿಗೆ:9243552882 https://cftri.res.inಗೆ ಭೇಟಿ ಕೊಡಿ.

ಕೋರ್ಸ್ ಆಯ್ಕೆಯಲ್ಲಿ ಗೊಂದಲ ಬೇಡ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಪಿಯುಸಿ ನಂತರ ನೀಟ್ ಪರೀಕ್ಷೆಯಲ್ಲಿ 413 ಅಂಕಗಳನ್ನು ಪಡೆದಿದ್ದೇನೆ. ಕೆಸಿಇಟಿ ಪರೀಕ್ಷೆಯಲ್ಲಿ ಕೃಷಿ ವಿಜ್ಞಾನದಲ್ಲಿ 4001 ಮತ್ತು ಪಶುವೈದ್ಯಕೀಯ ವಿಜ್ಞಾನದಲ್ಲಿ 3408 ರ‍್ಯಾಂಕ್ ಪಡೆದಿದ್ದೇನೆ. ನನಗೆ ಎಂಜಿನಿಯರಿಂಗ್‌ನಲ್ಲೂ ಆಸಕ್ತಿಯಿದೆ. ಈಗ ಕೃಷಿ ಪದವಿಗೆ ಸೀಟ್ ಸಿಕ್ಕಿದ್ದರೂ, ಅದನ್ನು ಓದಲು ಸಿದ್ಧನಿಲ್ಲ. ದಂತವೈದ್ಯಕೀಯ ಸೀಟು ಸಿಕ್ಕಿದ್ದರೂ, ಅದು ಬೇಡ, ಆಯುರ್ವೇದ ತೆಗೆದುಕೋ ಎಂದು ತಂದೆಯವರು ಹೇಳುತ್ತಿದ್ದಾರೆ. ಹಾಗಾಗಿ, ಆಯುರ್ವೇದ ಮತ್ತು ದಂತವೈದ್ಯಕೀಯ ಆಯ್ಕೆಗಳ ಮಧ್ಯೆ ಗೊಂದಲಕ್ಕೊಳಗಾಗಿದ್ದೇನೆ. ಉತ್ತಮ ಆಯ್ಕೆ ಯಾವುದು ಸೂಚಿಸಿ.

ಹೆಸರು, ಊರು ತಿಳಿಸಿಲ್ಲ.

ನೀವು ಇಷ್ಟೊಂದು ವಿಭಿನ್ನವಾದ ಆಯ್ಕೆಗಳನ್ನು (ದಂತವೈದ್ಯಕೀಯ, ಪಶುವೈದ್ಯಕೀಯ, ಕೃಷಿ, ಆಯುರ್ವೇದ, ಎಂಜಿನಿಯರಿಂಗ್) ಈಗಲೂ ಪರಿಶೀಲಿಸುತ್ತಿದ್ದರೆ ಗೊಂದಲವಾಗುವುದು ಸಹಜ. ಈ ಗೊಂದಲಗಳ ಪರಿಹಾರಕ್ಕೆ ಈ ಸೂಚನೆಗಳನ್ನು ಗಮನಿಸಿ:

- ನಿಮ್ಮ ಪ್ರತಿಭೆ, ಆಸಕ್ತಿ, ಅಭಿರುಚಿ ಯಾವ ಕ್ಷೇತ್ರದಲ್ಲಿದೆ ಎಂದು ಅರಿಯಬೇಕು. ಇದನ್ನು ಆಪ್ಟಿಟ್ಯೂಡ್ ಟೆಸ್ಟ್ ಅಥವಾ ಸ್ವಯಂ ಮೌಲ್ಯಮಾಪನದಿಂದ ಅರಿಯಬಹುದು.
- ನಿಮ್ಮ ಭವಿಷ್ಯದ ಆಸೆ, ಆಕಾಂಕ್ಷೆಗಳಿಗೂ ನಿಮ್ಮ ಪ್ರತಿಭೆ, ಆಸಕ್ತಿ, ಅಭಿರುಚಿಗೂ ಹೊಂದಾಣಿಕೆಯಿರಬೇಕು.
- ಈ ಅಂಶಗಳನ್ನು ಗಮನಿಸಿ ವೃತ್ತಿಯೋಜನೆಯನ್ನು ಮಾಡಿದರೆ ಯಾವ ವೃತ್ತಿ/ಕೋರ್ಸ್ ಸೂಕ್ತವೆಂದು ತಿಳಿಯುತ್ತದೆ. ಆಯುರ್ವೇದ ಮತ್ತು ದಂತವೈದ್ಯಕೀಯಗಳೆರಡೂ ಬೇಡಿಕೆಯಲ್ಲಿರುವ ಕ್ಷೇತ್ರಗಳು. ಮೇಲ್ನೋಟಕ್ಕೆ, ದಂತವೈದ್ಯಕೀಯಕ್ಕೆ ಹೆಚ್ಚಿನ ಬೇಡಿಕೆಯಿದೆ ಎಂದೆನಿಸಿದರೂ, ವೃತ್ತಿಯೋಜನೆ ಮಾಡಿದ ನಂತರವೇ ನಿರ್ಧರಿಸುವುದು ಸೂಕ್ತ. ವೃತ್ತಿಯೋಜನೆಯನ್ನು ಮಾಡುವ ಪ್ರಕ್ರಿಯೆಯ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

2.ನಾನು ಬಿ.ಎ 2ನೇ ವರ್ಷದಲ್ಲಿದ್ದು, ಪದವಿ ನಂತರ ಯಾವ ಕೋರ್ಸ್ ಮಾಡಿದರೆ ಉದ್ಯೋಗ ಲಭಿಸುತ್ತದೆ? ಎಂಎಸ್‌ಡಬ್ಲ್ಯು ಮಾಡಬೇಕೆಂದಿರುವೆ. ಇದರ ಬಗ್ಗೆ ಮಾಹಿತಿ ಕೊಡಿ ಸರ್.

ಮಹಂತೇಶ್, ಕಲಬುರುಗಿ.

ನೀವು ಬಿ.ಎ ಕೋರ್ಸ್ ಅನ್ನು ಯಾವ ವಿಷಯದಲ್ಲಿ ಮಾಡುತ್ತಿದ್ದೀರೆಂದು ತಿಳಿಸಿಲ್ಲ. ಬಿಎ ನಂತರದ ಆಯ್ಕೆಗಳಲ್ಲಿ ವಿಪುಲ ಹಾಗೂ ವೈವಿಧ್ಯಮಯ ಅವಕಾಶಗಳಿವೆ. ನೀವು ಬಿ.ಎ ನಂತರ ಮಾಡಬಹುದಾದ ಕೋರ್ಸ್‌ಗಳೆಂದರೆ ಐಎಎಸ್, ಕೆಎಎಸ್, ಎಂಎ, ಎಂಬಿಎ, ಎಲ್‌ಎಲ್‌ಬಿ, ಸಿಎ, ಎಸಿಎಸ್, ಬಿ.ಇಡಿ, ಬಿಪಿಇಡಿ, ಎಂಎಸ್‌ಡಬ್ಲ್ಯು, ಜರ್ನಲಿಸಮ್, ಫೈನ್ ಆರ್ಟ್ಸ್, ಡಿಸೈನ್ ಕೋರ್ಸ್‌ಗಳು (ಗ್ರಾಫಿಕ್ಸ್, ವಿಎಫ್‌ಎಕ್ಸ್, ಗೇಮ್ಸ್, ಫ್ಯಾಷನ್ ಇತ್ಯಾದಿ), ವಿದೇಶಿ ಮತ್ತು ಭಾರತೀಯ ಭಾಷೆಗಳು, ವಿಷಯಾನುಸಾರ ಸರ್ಟಿಫಿಕೆಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳು ಇತ್ಯಾದಿ.

ಬಿಎ ಕೋರ್ಸನ್ನು ಸಂಬಂಧಪಟ್ಟ ವಿಷಯದಲ್ಲಿ ಮಾಡಿದ್ದಲ್ಲಿ, ಎಂಎಸ್‌ಡಬ್ಲ್ಯು ಕೋರ್ಸ್‌ಗೆ ಅರ್ಹತೆಯಿರುತ್ತದೆ. ಒಂದು ಸಂಸ್ಥೆಯ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಎಲ್ಲಾ ಪ್ರಯತ್ನಗಳನ್ನು ಕೇಂದ್ರೀಕರಿಸಿ, ಯೋಜನೆಗಳನ್ನು ನಿಷ್ಠೆಯಿಂದ ಕಾರ್ಯಗತಗೊಳಿಸುವುದೇ ಆಡಳಿತ ವರ್ಗದ ಮೂಲ ಉದ್ದೇಶ. ಈ ನಿಟ್ಟಿನಲ್ಲಿ, ಮಾನವ ಸಂಪನ್ಮೂಲದ ನಿರ್ವಹಣೆ, ಸಂಸ್ಥೆಗಳ ಕಾರ್ಯಾಚರಣೆಯಲ್ಲಿ ಹೆಚ್ಚಿನ ಪ್ರಾಮುಖ್ಯವನ್ನು ಪಡೆದಿದೆ. ಹಾಗಾಗಿ, ಎಂಎಸ್‌ಡಬ್ಲ್ಯು ಪದವೀಧರರಿಗೆ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಮತ್ತು ನಿರ್ವಹಣೆ, ಕಾರ್ಮಿಕ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ, ಸಮುದಾಯದ ಅಭಿವೃದ್ಧಿ ಇತ್ಯಾದಿ ವಲಯಗಳಲ್ಲಿ ವ್ಯಾಪಕವಾದ ಉದ್ಯೋಗಾವಕಾಶಗಳಿವೆ.

3. ಬಿ.ಎಸ್ಸಿ ಓದುತ್ತಿದ್ದೇನೆ. ನಂತರ ಎಂ.ಎಸ್ಸಿ ಮಾಡಬೇಕಾದರೆ ಹೇಗೆ ಸಿದ್ಧತೆ ಮಾಡಬೇಕು?

ಹೆಸರು, ಊರು ತಿಳಿಸಿಲ್ಲ.

ಮೊದಲಿಗೆ, ಎಂ.ಎಸ್ಸಿ ನಂತರದ ನಿಮ್ಮ ವೃತ್ತಿಜೀವನದ ಕನಸುಗಳೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿರಬೇಕು ಮತ್ತು ಅದರಂತೆ ಶಿಕ್ಷಣವನ್ನು ಮುಂದುವರಿಸಬೇಕು. ಹಾಗೂ, ಯಾವ ವಿಷಯದಲ್ಲಿ (ಉದಾಹರಣೆಗೆ ಭೌತವಿಜ್ಞಾನ, ಗಣಿತ, ರಸಾಯನ ವಿಜ್ಞಾನ ಇತ್ಯಾದಿ) ಮತ್ತು ಯಾವ ವಿಭಾಗದಲ್ಲಿ (ಉದಾಹರಣೆಗೆ ಭೌತವಿಜ್ಞಾನದ ವಿಭಾಗಗಳಾದ ಆಸ್ಟ್ರೊಫಿಸಿಕ್ಸ್, ಜಿಯೋಫಿಸಿಕ್ಸ್, ಥರ್ಮೋಡೈನಾಮಿಕ್ಸ್, ಕ್ವಾಂಟಮ್ ಮೆಕ್ಯಾನಿಕ್ಸ್ ಇತ್ಯಾದಿ) ಎಂ.ಎಸ್ಸಿ ಮಾಡಬೇಕು ಎಂದು ನಿರ್ಧರಿಸಿ.

ಆಯ್ಕೆ ಮಾಡಿದ ವಿಭಾಗಕ್ಕೆ ಸಂಬಂಧಿಸಿದಂತೆ, ಯಾವ ವಿಶ್ವವಿದ್ಯಾಲಯ ಸೂಕ್ತವೆಂದು ನಿರ್ಧರಿಸಲು ಮೂಲಸೌಕರ್ಯ, ಪ್ರಾಧ್ಯಾಪಕ ವರ್ಗ, ಪ್ರಯೋಗಾಲಯಗಳು, ಗ್ರಂಥಾಲಯ, ಉದ್ಯಮಗಳ ಸಹಯೋಗ, ನೇಮಕಾತಿ ದಾಖಲೆ ಇತ್ಯಾದಿ ಅಂಶಗಳನ್ನು ಪರಿಶೀಲಿಸಿ. ನಿಮಗೆ ಸೂಕ್ತವೆನಿಸಿದ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಗಳ ಮಾದರಿ, ಪಠ್ಯಕ್ರಮ ಇತ್ಯಾದಿಗಳನ್ನು ಗಮನಿಸಿ, ಕಾರ್ಯತಂತ್ರವನ್ನು ರೂಪಿಸಿ, ತಯಾರಾಗಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಿದರೆ ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ.

4. ನಾನು ಈಗ ಬಿ.ಎ ಮುಗಿಸಿದ್ದೇನೆ. ನನಗೆ ಒಂದು ಗೊಂದಲ ಇದೆ ಬಿ.ಎ ಮುಗಿದ ತಕ್ಷಣ ಬಿ.ಇಡಿ, ಅಥವಾ ಎಂಎ ಅಥವಾ ಎಲ್‌ಎಲ್‌ಬಿ ಮಾಡಬಹುದು ಆದರೆ ನಾನು ಪದವಿಯಲ್ಲಿ ಸಮಾಜಶಾಸ್ತ್ರ ವಿಷಯವನ್ನು ತೆಗೆದುಕೊಂಡಿದ್ದೇನೆ. ಹಾಗಾಗಿ, ಎಂಎಸ್‌ಡಬ್ಲ್ಯು ಮಾಡಿದರೆ ನನಗೆ ಮುಂದೆ ಉದ್ಯೋಗಾವಕಾಶವಿರುತ್ತದೆಯೇ?

ಹೆಸರು, ಊರು ತಿಳಿಸಿಲ್ಲ.

ವೃತ್ತಿ/ಕೋರ್ಸ್ ಆಯ್ಕೆಯ ಪ್ರಕ್ರಿಯೆಯಲ್ಲಿ ಅನೇಕ ಆಯ್ಕೆಗಳಿದ್ದರೆ (ಬಿ.ಇಡಿ, ಎಂಎ, ಎಲ್‌ಎಲ್‌ಬಿ, ಎಂಎಸ್‌ಡಬ್ಲ್ಯು), ಗೊಂದಲ ಹೆಚ್ಚಾಗಿ ನಿರ್ಧಾರ ಕ್ಲಿಷ್ಟವಾಗುತ್ತದೆ. ಎಂಎಸ್‌ಡಬ್ಲ್ಯು ನಂತರ ವ್ಯಾಪಕ ಉದ್ಯೋಗಾವಕಾಶಗಳಿವೆ; ಆದರೆ, ನಿಮಗೆ ಅದು ಸೂಕ್ತವೇ ಎಂದು ಯೋಚಿಸಿ. ನಿಮ್ಮ ಅಭಿರುಚಿ, ಆಸಕ್ತಿ, ಮತ್ತು ಸಾಮರ್ಥ್ಯಗಳನ್ನು ಅರ್ಥಮಾಡಿಕೊಂಡು, ಸೂಕ್ತವಾದ ಎರಡು ಆಯ್ಕೆಗಳನ್ನು ಪರಿಶೀಲಿಸಿ, ನಿರ್ಧಾರ ಕೈಗೊಳ್ಳಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ ಈ ಲಿಂಕ್ ನೋಡಿ www.prajavani.net/education-career

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಅಮೆಜಾನ್ ಫ್ಯೂಚರ್ ಎಂಜಿನಿಯರ್ ಸ್ಕಾಲರ್‌ಶಿಪ್

ಪ್ರಸ್ತುತ ಬಿ.ಇ/ಬಿ.ಟೆಕ್ ಕಂಪ್ಯೂಟರ್ ಸೈನ್ಸ್ ಕೋರ್ಸ್, ಐಟಿ ಮತ್ತು ಇತರ ಶಾಖೆಗಳಲ್ಲಿ ಮೊದಲ ವರ್ಷದ ಪದವಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಂದ ಸ್ಕಾಲರ್‌ಷಿಪ್‌ಗಾಗಿ ಅಮೆಜಾನ್ ಸಂಸ್ಥೆ ಅರ್ಜಿ ಆಹ್ವಾನಿಸಿದೆ.

ಈ ವಿದ್ಯಾರ್ಥಿವೇತನವು ಭಾರತದಲ್ಲಿರುವ ಯುವತಿಯರಿಗೆ ಕಂಪ್ಯೂಟರ್ ವಿಜ್ಞಾನ ಕಲಿಕೆ ಮತ್ತು ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಿದೆ. ಈ ಯುವತಿಯರು ಸಾಮಾನ್ಯವಾಗಿ ಮೊದಲ ತಲೆಮಾರಿನ ಕಲಿಕಾರ್ಥಿಗಳಾಗಿದ್ದು, ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಕುಟುಂಬದ ಹಿನ್ನೆಲೆಯವರಾಗಿರುತ್ತಾರೆ.

ಅರ್ಹತೆ : ಕಂಪ್ಯೂಟರ್ ಸೈನ್ಸ್ ಅಥವಾ ಸಂಬಂಧಿತ ಶಾಖೆಗಳಲ್ಲಿ ಬಿ.ಇ./ ಬಿ. ಟೆಕ್. ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಈ ವಿದ್ಯಾರ್ಥಿನಿಯರು ಪ್ರಸ್ತುತ ಮೊದಲ ವರ್ಷದ ಪದವಿಗೆ ದಾಖಲಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ₹3ಲಕ್ಷಕ್ಕಿಂತ ಕಡಿಮೆ ಇರಬೇಕು. ರಾಜ್ಯ ಅಥವಾ ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶವನ್ನು ತೆಗೆದುಕೊಳ್ಳಬೇಕು.

ಆರ್ಥಿಕ ನೆರವು: ₹ 1,60,000 (ಪದವಿ ಮುಗಿಯುವವರೆ ವರ್ಷಕ್ಕೆ ₹ 40,000).

ಅಮೆಜಾನ್ ಸ್ಕಾಲರ್‌ಷಿಪ್‌ನೊಂದಿಗೆ ಎಂಜಿನಿಯರಿಂಗ್ ಪದವಿ ಪಡೆಯುವವರು ಮುಂದೆ ಕೌಶಲ ಅಭಿವೃದ್ಧಿ, ಉದ್ಯೋಗ ಹುಡುಕುವುದಕ್ಕೂ ನೆರವು ಪಡೆಯಬಹುದು. ಮಾತ್ರವಲ್ಲ, ಅಮೆಜಾನ್ ಇಂಟರ್ನ್‌ಷಿಪ್ ಪಡೆಯಲು ಅವಕಾಶವಿರುತ್ತದೆ.

ಅರ್ಜಿ ಸಲ್ಲಿಕೆಗೆ ಕೊನೆದಿನ: 31-12-2022

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಬೇಕು

ಹೆಚ್ಚಿನ ಮಾಹಿತಿಗೆ: www.b4s.in/praja/AFES3

ಕ್ರೀಡಾಪಟುಗಳಿಗೆ ಸ್ಕಾಲರ್‌ಷಿಪ್

ವಿವರ: ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಶನಲ್ ಸ್ಕಾಲರ್‌ಷಿಪ್ ಆ್ಯಂಡ್ ಮೆಂಟರ್‌ಷಿಪ್ ಪ್ರೋಗ್ರಾಂ ಫಾರ್ ಸ್ಪೋರ್ಟ್ಸ್ ಪರ್ಸನ್ ಅಂಡ್ ಇಂಡಿವಿಶುವಲ್ಸ್.

ಪ್ರತಿಭೆ ಇದ್ದರೂ, ಆರ್ಥಿಕ ಸಂಕಷ್ಟದ ಕಾರಣದಿಂದ ವಿದ್ಯಾಭ್ಯಾಸ ಮುಂದುವರಿಸಲು ಅಶಕ್ತರಾಗಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಮೂಲಕ ಆರ್ಥಿಕ ಬೆಂಬಲ ನೀಡಲು ಕೋಲ್ಗೇಟ್ - ಪಾಮೊಲಿವ್ (ಇಂಡಿಯಾ) ಲಿಮಿಟೆಡ್ ಕಂಪನಿ ಈ ಸ್ಕಾಲರ್‌ಷಿಪ್ ಪ್ರೋಗ್ರಾಂ ರೂಪಿಸಿದೆ.

ಅರ್ಹತೆ: ಅರ್ಜಿದಾರರು ಪದವಿಧರರಾಗಿದ್ದು, ದುರ್ಬಲ ವರ್ಗದ ಮಕ್ಕಳಿಗೆ ಪಾಠ ಮಾಡುವ ಅಥವಾ ಕ್ರೀಡಾ ತರಬೇತಿಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು.

ಅರ್ಜಿದಾರರು ಕ್ರೀಡಾಪಟುಗಳಾಗಿದ್ದರೆ, ಕಳೆದ ಎರಡು-ಮೂರು ವರ್ಷಗಳಲ್ಲಿ ರಾಜ್ಯ/ ರಾಷ್ಟ್ರ /ಅಂತರರಾಷ್ಟ್ರೀಯ ಮಟ್ಟದ ರಾಜ್ಯ/ ರಾಷ್ಟ್ರವನ್ನು ಪ್ರತಿನಿಧಿಸಿರಬೇಕು. ರಾಷ್ಟ್ರೀಯ ಶ್ರೇಯಾಂಕದಲ್ಲಿ 500 ಒಳಗೆ / ರಾಜ್ಯ ಶ್ರೇಯಾಂಕದಲ್ಲಿ100 ಒಳಗೆ ಸ್ಥಾನಪಡೆದಿರಬೇಕು. 9 ವರ್ಷಗಳಿಂದ 20 ವರ್ಷಗಳೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕು. ಎಲ್ಲ ಮೂಲಗಳಿಂದ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷ ಮೀರಿರಬಾರದು.

ಆರ್ಥಿಕ ನೆರವು: ಆಯ್ದ ವಿದ್ಯಾರ್ಥಿಗಳಿಗೆ 3 ವರ್ಷಗಳವರೆಗೆ ವರ್ಷಕ್ಕೆ ₹ 75,000ದಂತೆ ವಿದ್ಯಾರ್ಥಿವೇತನ ಪಡೆಯಬಹುದು

ಅರ್ಜಿ ಸಲ್ಲಿಸಲು ಕೊನೆ ದಿನ: 31-12-2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/KSSI2

(ಕೃಪೆ: www.buddy4study.com)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ



ಸಮಾಜಶಾಸ್ತ್ರ

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1453ರಲ್ಲಿ ಆಟೋಮನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು

ಎ) ಕಾನ್‌ಸ್ಟಾಂಟಿನೋಪಲ್ ಬಿ) ರೋಮ್

ಸಿ) ಕಾಬೂಲ್ ಡಿ) ಕರಾಚಿ

ಉತ್ತರ:- (ಎ)

2) ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಿದ ವರ್ಷ...............................

ಎ) 1945 ಬಿ) 1950

ಸಿ) 1947 ಡಿ) 1948

ಉತ್ತರ:- (ಡಿ)

3) ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಆಧಿಪತ್ಯಗಳ ಮೇಲಿನ ಗವರ್ನರ್ ಜನರಲ್ ಆಗಿ ಯಾವ ವರ್ಷ ನೇಮಕಗೊಂಡನು?

ಎ) 1675 . ಬಿ) 1742

ಸಿ) 1897 ಡಿ) 1947

ಉತ್ತರ:- (ಬಿ)

4) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?

ಎ) ರಣಜಿತ್ ಸಿಂಗ್ ಬಿ) ಮೂಲರಾಜ

ಸಿ) ಅನ್ವರುದ್ದೀನ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- (ಎ)

5) ಭಾರತದಲ್ಲಿರುವ ಅತಿಎತ್ತರವಾದ ಶಿಖರ ಯಾವುದು?

ಎ) ಮೌಂಟ್ ಎವರೆಸ್ಟ್ ಬಿ) ಕಾಂಚನಜುಂಗಾ

ಸಿ) ಧವಳಗಿರಿ ಡಿ) ಗಾಡ್ವಿನ್‌ಆಸ್ಟಿನ್ ಅಥವಾ ಕೆ2

ಉತ್ತರ:- (ಡಿ)

6) ಹಳದಿ ಕ್ರಾಂತಿ ಯಾವುದಕ್ಕೆ ಸಂಬಂಧಿಸಿದೆ?

ಎ) ಮೀನು ಉತ್ಪಾದನೆ

ಬಿ) ಎಣ್ಣೆ ಬೀಜಗಳ ಉತ್ಪಾದನೆ

ಸಿ) ಹಾಲಿನ ಉತ್ಪಾದನೆ ಡಿ) ಮೊಟ್ಟೆ ಉತ್ಪಾದನೆ

ಉತ್ತರ:- (ಬಿ)

7) ನೀತಿ ಆಯೋಗವು __________ ರಂದು ಸ್ಥಾಪಿತವಾಯಿತು.

ಎ) 2012 ಬಿ) 2014 ಸಿ) 2015 ಡಿ) 2020

ಉತ್ತರ:- (ಸಿ)

8) ಈ ಕೆಳಗಿನ ಯಾವುದು ಬ್ಯಾಂಕ್ ಸಲ್ಲಿಸುವ ಸೇವೆ ಅಡಿಯಲ್ಲಿ ಬರುವುದಿಲ್ಲ?

ಎ) ಕ್ರೆಡಿಟ್/ ಡೆಬಿಟ್ ಕಾರ್ಡ್ ನೀಡುವುದು

ಬಿ) ಮನೆ/ವಾಹನ ಖರೀದಿಗೆ ಸಾಲ ನೀಡಲು ಏಜನ್ಸಿಗಳಿಗೆ ಹಾಗೂ ಖಾಸಗಿ ಬಂಡವಾಳದಾರರಿಗೆ ಪ್ರೋತ್ಸಾಹಿಸುವುದು

ಸಿ) ಭದ್ರತಾ ಕಪಾಟುಗಳನ್ನು ಒದಗಿಸುವುದು

ಡಿ) ಪರಸ್ಪರ ನಿಧಿಗಳನ್ನು ನಿರ್ವಹಿಸುವುದು

ಉತ್ತರ:- (ಬಿ)

9) ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಪ್ರತಿ ಜಿಲ್ಲೆಯನ್ನು ‘ಠಾಣೆ’ಗಳನ್ನಾಗಿ ವಿಭಜಿಸಿಪ್ರತಿ ಠಾಣೆಯನ್ನು ‘ಕೊತ್ವಾಲ’ರ ಅಧೀನದಲ್ಲೂ, ಹಳ್ಳಿಗಳು .... ಅಧೀನದಲ್ಲೂ ಇರುವಂತೆ ಮಾಡಿದನು.

ಎ) ‘ಚೌಕಿದಾರ’ರ ಬಿ) ನ್ಯಾಯಾಧೀಶ

ಸಿ) ಖಾಜಿ ಡಿ) ಮೇಲಿನ ಯಾರೂ ಅಲ್ಲ

ಉತ್ತರ:- (ಎ)

10) ಭಾರತದ ಸಂವಿಧಾನ ರಚನೆ ಮುಖ್ಯವಾದ ಕಾಯ್ದೆ ಯಾವುದು?

ಎ) 1935ರ ಭಾರತ ಸರ್ಕಾರದ ಕಾಯ್ದೆ

ಬಿ) 1909 ಭಾರತೀಯ ಪರಿಷತ್ ಕಾಯ್ದೆ

ಸಿ) 1861ರ ಭಾರತೀಯ ಪರಿಷತ್ ಕಾಯ್ದೆ

ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ)

II ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ

1) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?

ಉತ್ತರ: ಲಾರ್ಡ್ **ಕಾರ್ನ್‌ವಾಲೀಸ**ನು ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದನು.

2) ಯಾವ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಮ್‌ನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು?

ಉತ್ತರ:- 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಮ್‌ನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು

3) ಭಾರತದಲ್ಲಿ ಹಸಿರು ಕ್ರಾಂತಿಯ ಪಿತಾಮಹ’ ಎಂದು ಯಾರನ್ನು ಕರೆಯುತ್ತಾರೆ? ಯಾಕೆ?

ಉತ್ತರ:- ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನವನ್ನು ಬಳಕೆಗೆ ತರುವಲ್ಲಿ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಅವರ ಪಾತ್ರ ಪ್ರಮುಖವಾದುದು. ಹಾಗಾಗಿ ಇವರು ಭಾರತದ ‘ಹಸಿರು ಕ್ರಾಂತಿಯ ಪಿತಾಮಹ’ ಎನಿಸಿದ್ದಾರೆ.

4) 1929ರಲ್ಲಿ ಮೊಟ್ಟಮೊದಲಿಗೆ ಆರ್ಥಿಕ ಯೋಜನೆಗಳನ್ನು ರೂಪಿಸಿದ ದೇಶ ಯಾವುದು?

ಉತ್ತರ:- ಸೋವಿಯತ್ ರಷ್ಯ

5) ದಸ್ತಕ್ ಎಂದರೇನು?

ಉತ್ತರ: ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಣೆ ಮಾಡಲು ಬೇಕಾದ ಪರವಾನಿಗೆ ಪತ್ರ

III ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯದಲ್ಲಿ ಉತ್ತರಿಸಿ

1) ಫ್ರೆಂಚರ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.

ಉತ್ತರ:- ಸೂರತ್, ಮಚಲಿಪಟ್ಟಣ, ಚಂದ್ರನಗರ, ಮಾಹೆ, ಕಾರೈಕಲ್ಲು, ಕಾಸಿಂಬಜಾರ್, ಬಾಲಸೂರ್

2) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ರಾಜ್ಯಗಳನ್ನು ಹೆಸರಿಸಿ

ಉತ್ತರ:- ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು

3) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

(ಗಮನಿಸಿ: ಇದು 2020 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ: ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ

1. ಭಾರತೀಯ ರಾಜನು ಬ್ರಿಟಿಷ್ ಸೈನಾ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳ ಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು. ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

4) ಭಾರತದಲ್ಲಿ ಪೋರ್ಚುಗೀಸರ ಏಕಸ್ವಾಮ್ಯತೆಯು ಯಾವಾಗ ಶಿಥಿಲಗೊಂಡಿತು?

ಉತ್ತರ: 17ನೇ ಶತಮಾನದವರೆಗೂ ಪೋರ್ಚುಗೀಸರು ವ್ಯಾಪಾರಿ ಏಕಸ್ವಾಮ್ಯತೆಯನ್ನು ಹೊಂದಿದ್ದರು. ಭಾರತದೊಳಗೆ ಡಚ್ ಮತ್ತು ಇಂಗ್ಲಿಷರ ಪ್ರವೇಶದೊಂದಿಗೆ ಪೋರ್ಚುಗೀಸರ ಏಕಸ್ವಾಮ್ಯತೆಯು ಶಿಥಿಲಗೊಂಡಿತು.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಭೌತಶಾಸ್ತ್ರ

1) ನಾವು ವಿದ್ಯುತ್ ಕ್ಷೇತ್ರ ಮತ್ತು ವಿದ್ಯುತ್ ವಿಭವಕ್ಕೆ ಸಂಬಂಧಿಸಿದ ಎರಡು ಮಹತ್ವಪೂರ್ಣ ತೀರ್ಮಾನಕ್ಕೆ ಬರಬಹುದು. ಅವು ಯಾವುವು?

ಉತ್ತರ:-ನಾವು ವಿದ್ಯುತ್ ಕ್ಷೇತ್ರ ಮತ್ತು ವಿದ್ಯುತ್ ವಿಭವಕ್ಕೆ ಸಂಬಂಧಿಸಿದ ಎರಡು ಮಹತ್ವಪೂರ್ಣ ತೀರ್ಮಾನಕ್ಕೆ ಬರಬಹುದು.

ಅವು (i) ಎಲ್ಲಿ ವಿಭವದಲ್ಲಿ ಹೆಚ್ಚು ಇಳಿಕೆ ಇರುತ್ತದೆಯೋ, ವಿದ್ಯುತ್ ಕ್ಷೇತ್ರವು ಆ ದಿಕ್ಕಿನಲ್ಲಿ ಇರುತ್ತದೆ

(ii) ಯಾವುದೇ ಬಿಂದುವಿನಲ್ಲಿ ವಿದ್ಯುತ್ ಕ್ಷೇತ್ರದ ಪರಿಮಾಣವು, ಆ ಬಿಂದುವಿನ ಸಮವಿಭವ ಮೇಲ್ಮೆಗೆ ಲಂಬವಾಗಿ ವಿಭವದ ಪರಿಮಾಣದಲ್ಲಿ ಪ್ರತಿ ಸ್ಥಳಪಲ್ಲಟಕ್ಕೆ ಆದ ಬದಲಾವಣೆಯಾಗಿರುತ್ತದೆ

2) ಯಾವ ರೀತಿಯ ಬಲಗಳನ್ನು ಸಂರಕ್ಷೀ ಬಲವೆಂದು ಕರೆಯುತ್ತಾರೆ?

ಉತ್ತರ: ಯಾವಾಗ ಬಂದು ಬಾಹ್ಯ ಬಲವು ಯಾವುದೇ ವಸ್ತುವನ್ನು ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಒಯ್ಯುವಲ್ಲಿ ಸ್ಪ್ರಿಂಗ್ ಬಲ, ಗುರುತ್ವ ಬಲ ಮುಂತಾದ ಬಲಗಳ ವಿರುದ್ಧ ಕೆಲಸ ಮಾಡಿದಲ್ಲಿ ಆಗ, ಆ ಬಾಹ್ಯ ಬಲವು ವಿಭವಶಕ್ತಿಯಾಗಿ ಆ ವಸ್ತುವಿನಲ್ಲಿ ಸಂಚಿತವಾಗುತ್ತದೆ.. ಯಾವಾಗ ಬಾಹ್ಯ ಬಲವನ್ನು ಹಿಂಪಡೆಯಲಾಗುತ್ತದೆಯೋ, ಆಗ ವಸ್ತುವು ಚಲಿಸಲ್ಪಡುತ್ತದೆ, ಹಾಗೆ ಚಲಿಸುವಾಗ ಅದು ಚಲನಶಕ್ತಿಯನ್ನು ಪಡೆಯುತ್ತದೆ ಮತ್ತು ಅಷ್ಟೇ ಮೊತ್ತದ ವಿಭವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಹೀಗೆ ಚಲನಶಕ್ತಿ ಮತ್ತು ವಿಭವಶಕ್ತಿಯ ಒಟ್ಟು ಮೊತ್ತವು ಸಂರಕ್ಷಿಸಲ್ಪಡುತ್ತದೆ. ಈ ರೀತಿಯ ಬಲಗಳನ್ನು ಸಂರಕ್ಷೀ ಬಲವೆಂದು ಕರೆಯುತ್ತಾರೆ. ಸ್ಪ್ರಿಂಗ್ ಬಲ ಮತ್ತು ಗುರುತ್ವಾಕರ್ಷಣಾ ಬಲಗಳು ಸಂರಕ್ಷೀ ಬಲಕ್ಕೆ ಉದಾಹರಣೆಗಳಾಗಿವೆ.

3) ಕಿರ್ಖಾಫ್ ನಿಯಮ

(a) ಸಂಧಿ ನಿಯಮ ಮತ್ತು (b) ಕುಣಿಕೆ ನಿಯಮ ಕುರಿತು ಬರೆಯಿರಿ

ಉತ್ತರ:- ಕಿರ್ಖಾಫ್ ನಿಯಮಗಳು:

(a) ಸಂಧಿ ನಿಯಮ: ಮಂಡಲ ಘಟಕಗಳ ಯಾವುದೇ ಸಂಧಿಯಲ್ಲಿ ಸಂಧಿಯನ್ನು ಪ್ರವೇಶಿಸುತ್ತಿರುವ ಪ್ರವಾಹಗಳ ಮೊತ್ತ ಸಂಧಿಯಿಂದ ಹೊರ ಹೋಗುತ್ತಿರುವ ಪ್ರವಾಹಗಳ ಮೊತ್ತಕ್ಕೆ ಸಮವಾಗಿರಬೇಕು.

(b) ಕುಣಿಕೆ ನಿಯಮ: ಒಂದು ಪೂರ್ಣಮಂಡಲದಲ್ಲಿ ವಿಭವದಲ್ಲಿನ ಬದಲಾವಣೆಗಳ ಬೀಜಗಣಿತೀಯ ಮೊತ್ತ ಶೂನ್ಯ

4) ಭೂಮಿಯ ಕಾಂತೀಯತೆ ಸಂಬಂಧಿಸಿದಂತೆ ಡೈನಮೋ ಎಫೆಕ್ಟ್ ಬಗ್ಗೆ ತಿಳಿಸಿ

ಉತ್ತರ:- ಭೂಮಿಯ ಹೊರಗರ್ಭದ ಲೋಹೀಯ ದ್ರವಗಳ (ಹೆಚ್ಚಾಗಿ ಕರಗಿದ ಕಬ್ಬಿಣ ಮತ್ತು ನಿಕ್ಕಲ್‌ಅನ್ನು ಒಳಗೊಂಡಿರುವ) ಸಂವಹನ ಚಲನೆಯಿಂದ ಉಂಟಾದ ವಿದ್ಯುತ್ ಪ್ರವಾಹಗಳಿಂದ ಬರುತ್ತದೆಯೆಂದು ಯೋಚಿಸಲಾಗಿದೆ. ಇದನ್ನು ಡೈನಮೋ ಎಫೆಕ್ಟ್ ಎಂದು ತಿಳಿಯಲಾಗಿದೆ.

5) ಡಯಾಕಾಂತೀಯತೆ ಬಗ್ಗೆ ಬರೆಯಿರಿ

ಉತ್ತರ:- ಡಯಾಕಾಂತೀಯತೆಗೆ ಅತ್ಯಂತ ಸರಳವಾದ ವಿವರಣೆಯು ಈ ಕೆಳಕಂಡಂತಿದೆ. ಒಂದು ಪರಮಾಣುವಿನಲ್ಲಿ ನ್ಯೂಕ್ಲಿಯಸ್ ಸುತ್ತಲೂ ಸುತ್ತುವ ಎಲೆಕ್ಟ್ರಾನ್‌ಗಳು ಕಕ್ಷೀಯ ಕೋನೀಯ ಸಂವೇಗವನ್ನು ಹೊಂದಿರುತ್ತವೆ. ಈ ಕಕ್ಷೀಯ ಎಲೆಕ್ಟ್ರಾನ್‌ಗಳು ಪ್ರವಾಹವನ್ನು ಒಯ್ಯುವ ಕುಣಿಕೆಗೆ ಸಮಾನವಾಗಿವೆ ಮತ್ತು ಹಾಗಾಗಿ ಕಕ್ಷೀಯ ಕಾಂತೀಯ ಮಹತ್ವವನ್ನು ಹೊಂದಿವೆ.

ಡಯಾಕಾಂತೀಯ ಪದಾರ್ಥಗಳೆಂದರೆ ಅವುಗಳಲ್ಲಿ ಒಂದು ಪರಮಾಣುವಿನಲ್ಲಿನ ಫಲಿತ ಕಾಂತೀಯ ಮಹತ್ವವು ಸೊನ್ನೆಯಾಗಿರುತ್ತದೆ.

ಕಾಂತಕ್ಷೇತ್ರವನ್ನು ಪ್ರಯೋಗಿಸಿದಾಗ ಅದೇ ದಿಕ್ಕಿನಲ್ಲಿ ಕಕ್ಷೀಯ ಕಾಂತೀಯ ಮಹತ್ವವನ್ನು ಹೊಂದಿರುವ ಎಲೆಕ್ಟ್ರಾನುಗಳು ನಿಧಾನವಾಗುತ್ತವೆ ಮತ್ತು ವಿರುದ್ಧ ದಿಕ್ಕಿನಲ್ಲಿರುವವು ವೇಗಗೊಳ್ಳುತ್ತವೆ. ಲೆನ್ಜ್‌ನ ನಿಯಮಕ್ಕೆ ಅನುಗುಣವಾದ ಪ್ರೇರಿತ ಪ್ರವಾಹದ ಕಾರಣದಿಂದ ಇದು ಸಂಭವಿಸುತ್ತದೆ. ಹಾಗಾಗಿ, ಪದಾರ್ಥವು ನಿವ್ವಳ ಕಾಂತೀಯ ಮಹತ್ವವನ್ನು ಪ್ರಯೋಗಿಸಿದ ಕ್ಷೇತ್ರಕ್ಕೆ ವಿರುದ್ಧ ದಿಕ್ಕಿನಲ್ಲಿ ವೃದ್ಧಿಸುತ್ತದೆ ಮತ್ತು ಆದ್ದರಿಂದ ವಿಕರ್ಷಣೆಯಾಗುತ್ತದೆ.

ಡಯಾಕಾಂತೀಯ ವಸ್ತುಗಳೆಂದರೆ ಬಿಸ್ಮತ್, ಕಾಪರ್, ಲೆಡ್, ಸಿಲಿಕಾನ್, ನೈಟ್ರೋಜನ್ (STP ನಲ್ಲಿ), ನೀರು ಮತ್ತು ಸೋಡಿಯಂ ಕ್ಲೋರೈಡ್. ಎಲ್ಲಾ ಪದಾರ್ಥಗಳಲ್ಲೂ ಡಯಾಕಾಂತೀಯತೆ ಇರುತ್ತದೆ.

6) ಯಾವುದನ್ನು “ವ್ಯಾಟ್‌ಲೆಸ್ ವಿದ್ಯುತ್” ಎಂದು ಕರೆಯುತ್ತಾರೆ?

ಉತ್ತರ: ಒಂದು ವಿದ್ಯುತ್ ಮಂಡಲವು ಪ್ರೇರಕ ಅಥವಾ ಧಾರಕವನ್ನು ಮಾತ್ರ ಒಳಗೊಂಡಾಗ ವೋಲ್ಟೇಜ್ ಮತ್ತು ವಿದ್ಯುತ್ತಿನ ನಡುವಿನ ಪ್ರಾವಸ್ಥಾಂತರವು $\pi/2$. ಆಗಿರುತ್ತದೆ. ಆದುದರಿಂದ $\cos\theta = 0$, ಇಲ್ಲಿ ವಿದ್ಯುತ್ ಸಾಮರ್ಥ್ಯ ವ್ಯಯವಾಗುವುದಿಲ್ಲ. ಆದರೆ ವಿದ್ಯುತ್ ಹರಿಯುತ್ತಿರುತ್ತದೆ. ಈ ವಿದ್ಯುತ್ತನ್ನು “ವ್ಯಾಟ್‌ಲೆಸ್ ವಿದ್ಯುತ್” ಎಂದು ಕರೆಯುತ್ತಾರೆ.

7) ವಿಮಾನ ನಿಲ್ದಾಣದಲ್ಲಿ ಭದ್ರತಾ ತಪಾಸಣೆಗೆಂದು ಒಬ್ಬ ವ್ಯಕ್ತಿಯು ಲೋಹ ಶೋಧಕ ಬಾಗಿಲಿನ ಮೂಲಕ ಹಾದು ಹೋಗಬೇಕಾಗುತ್ತದೆ. ಅವಳು / ಅವನು ಏನಾದರೂ ಲೋಹದ ವಸ್ತುವನ್ನು ಇಟ್ಟುಕೊಂಡಿದ್ದರೆ ಲೋಹ ಶೋಧಕ ಶಬ್ದವನ್ನು ಹೊರಸೂಸುತ್ತದೆ. ಈ ಶೋಧಕ ಯಾವ ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ?

ಉತ್ತರ : ಲೋಹಶೋಧಕಗಳು ಎ. ಸಿ. ಮಂಡಲದ ಅನುರಣನೆ ತತ್ವದ ಮೇಲೆ ಕೆಲಸ ಮಾಡುತ್ತದೆ ನಾವು ಲೋಹ ಶೋಧಕದ ಮೂಲಕ ಹಾದು ಹೋದಾಗ ವಾಸ್ತವವಾಗಿ ಅನೇಕ ಸುರುಳಿಗಳಿರುವ ಕಾಯಿಲ್ ಮೂಲಕ ನಡೆದು ಹೋಗುತ್ತೇವೆ. ಈ ಕಾಯಿಲ್‌ನ್ನು ಧಾರಕಕ್ಕೆ ಜೋಡಿಸಿ ಶೃತಿ ಮಾಡಲಾಗಿರುವ ಮಂಡಲಕ್ಕೆ ಸೇರಿಸಿ ಅನುರಣನಾ ಸ್ಥಿತಿಯಲ್ಲಿ ಇಟ್ಟಿರುತ್ತಾರೆ ಯಾವುದಾದರೂ ಲೋಹದೊಂದಿಗೆ ಆ ಸುರುಳಿಯಲ್ಲಿ ನಡೆದು ಹೋದಾಗ ಮಂಡಲದ ಪ್ರತಿಭಾದೆ ಬದಲಾಗುತ್ತದೆ. ಹಾಗಾಗಿ ವಿದ್ಯುತ್‌ನಲ್ಲೂ ಗಮನಾರ್ಹ ಬದಲಾವಣೆ ಆಗುತ್ತದೆ. ಈ ವಿದ್ಯುತ್‌ನಲ್ಲಾದ ಬದಲಾವಣೆಯನ್ನು ಕಂಡುಹಿಡಿದು ವಿದ್ಯುತ್ ಮಂಡಲ ಎಚ್ಚರಿಕೆಯ ಶಬ್ದವನ್ನು ಹೊರಸೂಸುತ್ತದೆ.



8) ಹೈಡ್ರೋಜನ್ ಪರಮಾಣುವಿನ ಬೋರ್ ಮಾದರಿಯ ಮಿತಿಗಳನ್ನು/ ಕೊರತೆಗಳನ್ನು ತಿಳಿಸಿ

ಉತ್ತರ:- ಹೈಡ್ರೋಜನ್ ಪರಮಾಣುವಿನ ಬೋರ್ ಮಾದರಿಗೆ ಸಾಕಷ್ಟು ಇತಿಮಿತಿಗಳಿವೆ. ಅವುಗಳಲ್ಲಿ ಕೆಲವು ಹೀಗಿವೆ.

(i) ಬೋರ್ ಮಾದರಿಯು, ಕೇವಲ ಹೈಡ್ರೋಜನ್ ತರಹದ ಪರಮಾಣುಗಳಿಗೆ ಮಾತ್ರ ಅನ್ವಯವಾಗುತ್ತದೆ. ಎರಡೇ ಎರಡು ಎಲೆಕ್ಟ್ರಾನ್‌ಗಳನ್ನು ಹೊಂದಿರುವ ಹೀಲಿಯಮ್‌ಗೂ ಸಹ ನಾವಿದನ್ನು ವಿಸ್ತರಿಸಲಾಗುವುದಿಲ್ಲ. ಎರಡಕ್ಕಿಂತ ಹೆಚ್ಚಿನ ಎಲೆಕ್ಟ್ರಾನ್‌ಗಳನ್ನು ಹೊಂದಿರುವ ಪರಮಾಣುಗಳಿಗೆ ಬೋರ್‌ರ ಹೈಡ್ರೋಜನ್ ಪರಮಾಣುವಿನ ಮಾದರಿಯನ್ನು ವಿಶ್ಲೇಷಿಸಲು ಪ್ರಯತ್ನಿಸಿದಲ್ಲಿ ಯಾವುದೇ ಉತ್ತಮ ಫಲಿತಾಂಶ ದೊರಕಲಿಲ್ಲ. ಪ್ರತಿಯೊಂದು ಎಲೆಕ್ಟ್ರಾನ್, ಧನ ವಿದ್ಯುದಾವೇಶ ಹೊಂದಿದ ನ್ಯೂಕ್ಲಿಯಸ್ ಜೊತೆ ಮಾತ್ರ ಸಂಪರ್ಕವೇರ್ಪಡದೆ, ಉಳಿದೆಲ್ಲ ಎಲೆಕ್ಟ್ರಾನ್‌ಗಳ ಜೊತೆ ಸಂಪರ್ಕವೇರ್ಪಡುವುದೇ ಈ ಸಮಸ್ಯೆಗೆ ಕಾರಣವಾಗಿತ್ತು. ಬೋರ್ ಮಾದರಿಯಲ್ಲಿ ನ್ಯೂಕ್ಲಿಯಸ್ ಮತ್ತು ಎಲೆಕ್ಟ್ರಾನಿನ ನಡುವಿನ ವಿದ್ಯುತ್ ಬಲವನ್ನು ಮಾತ್ರ ತೊಡಗಿಸಿಕೊಳ್ಳುತ್ತದೆ ಅದು ಬಹು ಎಲೆಕ್ಟ್ರಾನ್‌ಗಳ ಬಲವನ್ನು ಗಣನೆಗೆ ತೆಗೆದುಕೊಳ್ಳುವದಿಲ್ಲ.

(ii) ಹೈಡ್ರೋಜನ್ ತರಹದ ಪರಮಾಣುವಿನಿಂದ ಹೊರಸೂಸಲ್ಪಟ್ಟ ಬೆಳಕಿನ ಆವೃತ್ತಿಗಳನ್ನು ಬೋರ್ ಮಾದರಿಯು ಸರಿಯಾಗಿಯೇ ಊಹಿಸಿದೆ. ಆದರೆ ಈ ಮಾದರಿಯು, ರೋಹಿತದಲ್ಲಿನ ಆವೃತ್ತಿಗಳಿಗಿರುವ ತೀವ್ರತೆಯನ್ನು ವಿವರಿಸಲಾಗಲಿಲ್ಲ. ಹೈಡ್ರೋಜನ್ ಪರಮಾಣುವಿನ ಗೋಚರ ಆವೃತ್ತಿಗಳಲ್ಲಿ ಕೆಲವೊಂದು ದುರ್ಬಲವಾಗಿದ್ದರೆ ಇನ್ನುಳಿದವುಗಳು ತೀವ್ರವಾಗಿವೆ. ಪ್ರಯೋಗದಿಂದ ವೀಕ್ಷಿಸಿದ ಕೆಲವು ಸಂಕ್ರಮಣಗಳು ಉಳಿದ ಸಂಕ್ರಮಣಗಳಿಗಿಂತ ಅನುಕೂಲಕರವಾಗಿದ್ದವು. ಇದನ್ನು ಬೋರ್ ಮಾದರಿಗೆ ವಿಶ್ಲೇಷಿಸಲಾಗಲಿಲ್ಲ.

ಬೋರ್ ಮಾದರಿಯು, ಪರಮಾಣುವಿನ ಅತ್ಯಂತ ಸೊಗಸಾದ ಚಿತ್ರಣವನ್ನು ನೀಡಿದ್ದರೂ ಅದಕ್ಕೆ ಸಂಕೀರ್ಣ ಪರಮಾಣುಗಳನ್ನು ವಿವರಿಸಬಹುದಾದ ಸಾಮಾನ್ಯ ತತ್ವವನ್ನು ಕೊಡಲಾಗಲಿಲ್ಲ. ಸಂಕೀರ್ಣ ಪರಮಾಣುಗಳಿಗೆ ನಾವು ಕ್ವಾಂಟಮ್ ಮೆಕ್ಯಾನಿಕ್ಸ್ ಆಧಾರಿತ ಹೊಸ ಮೂಲಸ್ವರೂಪದ ಸಿದ್ಧಾಂತವನ್ನು ಉಪಯೋಗಿಸ ಬೇಕಾಗುತ್ತದೆ. ಅದು ಮಾತ್ರ ಪರಮಾಣುವಿನ ಸಂಪೂರ್ಣ ಚಿತ್ರಣವನ್ನು ಕೊಡಬಲ್ಲದು.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮ ಕೇಂದ್ರ, ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಕೃಷ್ಣಯ್ಯ ಆಚಾರ್ಯಗೆ 'ಕಾಳಿಂಗ ನಾವಡ ಪ್ರಶಸ್ತಿ'



ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ನೀಡುವ 'ಕಾಳಿಂಗ ನಾವಡ ಪ್ರಶಸ್ತಿ'ಗೆ ಭಾಗವತರು, ಮದ್ದಳೆ ಹಾಗೂ ಚಂಡೆ ವಾದಕರಾದ ಬಿದ್ಕಲ್‌ಕಟ್ಟೆ ಕೃಷ್ಣಯ್ಯ ಆಚಾರ್ಯ ಆಯ್ಕೆಯಾಗಿದ್ದಾರೆ.

ಸಂಸ್ಥೆಯು ಪ್ರತಿ ವರ್ಷ ಯಕ್ಷಗಾನ ಸಾಧಕರೊಬ್ಬರಿಗೆ ಈ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಬೆಳ್ಳಿತಟ್ಟೆಯನ್ನು ಒಳಗೊಂಡಿದೆ. ಡಿ.25ರ ಸಂಜೆ 5 ಗಂಟೆಗೆ ಬೆಂಗಳೂರಿನ ಗವಿಪುರದಲ್ಲಿರುವ ಉದಯಭಾನು ಕಲಾಸಂಘದ ಸಭಾ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ರಾಧಾಕೃಷ್ಣ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯಗೆ ವಂದೇ ಮಾತರಂ ಅಪಥ್ಯ: ಬಿಜೆಪಿ

ಬೆಂಗಳೂರು:'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಂದೇ ಮಾತರಂ ಗೀತೆಗೆ ವಿರೋಧ ವ್ಯಕ್ತಪಡಿಸಿರುವುದನ್ನು ನೋಡಿದರೆ ಅವರಿಗೆ ದೇಶದ ಏಕತೆಗಿಂತ ಅಧಿಕಾರಕ್ಕಾಗಿ ಸಮಾಜ ಒಡೆಯುವುದೇ ಮುಖ್ಯ ಎನ್ನುವುದನ್ನು ತೋರಿಸುತ್ತದೆ' ಎಂದು ಬಿಜೆಪಿ ಕಿಡಿ ಕಾರಿದೆ.

ಈ ಕುರಿತು ಟ್ವೀಟ್ ಮಾಡಿರುವ ಬಿಜೆಪಿ, 'ದೇಶದಲ್ಲಿ ಎಲ್ಲ ಧರ್ಮೀಯರು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡಿರುವ ವಂದೇ ಮಾತರಂ ಗೀತೆಗೆ ವಿರೋಧ ವ್ಯಕ್ತಪಡಿಸುವುದು ಅವರ ಜಿಹಾದಿ ಮನಸ್ಥಿತಿಯನ್ನು ತೋರಿಸುತ್ತದೆ. ವಂದೇ ಮಾತರಂ ಅವರಿಗೆ ಅಪಥ್ಯ' ಎಂದು ಹೇಳಿದೆ.

'ಬ್ರಿಟಿಷರು ವಂದೇ ಮಾತರಂ ಹಾಡನ್ನು ವಿರೋಧಿಸಿದ್ದರು. ಈಗ ಅದೇ ಸಾಲಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದ್ದಾರೆ. ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ ವಂದೇ ಮಾತರಂ ಗೀತೆಗೆ ಅವಮಾನ ಮಾಡುವ ಮೂಲಕ ಭಾರತೀಯರ ಏಕತೆಯ ಭಾವನೆಯನ್ನು ವಿಭಜಿಸುವ ಪ್ರಯತ್ನ ಮಾಡಿದ್ದು, ಭಾರತೀಯರ ಕ್ಷಮೆ ಕೋರಬೇಕು' ಎಂದೂ ಬಿಜೆಪಿ ಒತ್ತಾಯಿಸಿದೆ.

ಪಂಚಮಸಾಲಿ ಪ್ರತಿಭಟನಾ ಸಮಾವೇಶ ಡಿ. 22ಕ್ಕೆ

ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ '2ಎ' ಮೀಸಲಾತಿ ನೀಡಲು ಸರ್ಕಾರ ಹಿಂದುಳಿದ ವರ್ಗಗಳ ಆಯೋಗದಿಂದ ಡಿ.19ರೊಳಗಾಗಿ ವರದಿ ತರಿಸಿಕೊಂಡು, ಅಂತಿಮ ನಿಲುವು ಪ್ರಕಟಿಸಬೇಕು. ಇಲ್ಲದಿದ್ದರೆ ಡಿ.22ರಂದು ಸುವರ್ಣ ವಿಧಾನಸೌಧ ಎದುರು 25 ಲಕ್ಷ ಜನರೊಂದಿಗೆ ಬೃಹತ್ ಪ್ರತಿಭಟನಾ ಸಮಾವೇಶ ನಡೆಸುತ್ತೇವೆ' ಎಂದು ಕೂಡಲಸಂಗಮದ ಪಂಚಮಸಾಲಿ ಸಮಾಜದ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೀಸಲಾತಿಗಾಗಿ ನಾವೂ ಹಲವು ವರ್ಷಗಳಿಂದ ಹೋರಾಡುತ್ತಿದ್ದೇವೆ. ಆದರೆ, ಸರ್ಕಾರದಿಂದ ಭರವಸೆ ಸಿಕ್ಕಿದೆಯೇ ಹೊರತು ಬೇಡಿಕೆ ಈಡೇರಿಲ್ಲ' ಎಂದು ದೂರಿದರು.

30ಕ್ಕೆ ಅಂತಿಮ ವಿಚಾರಣೆ • ಕಾನೂನು ತಜ್ಞರು, ಹಿರಿಯ ಅಧಿಕಾರಿಗಳ ಜತೆ ಸಿ.ಎಂ ಸಭೆ

'ಗಡಿ ವಿವಾದ: ಕಾನೂನು ಸಮರಕ್ಕೆ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಕಾನೂನು ಸಮರಕ್ಕೆ ನಮ್ಮ ರಾಜ್ಯ ಎಲ್ಲ ರೀತಿಯಲ್ಲಿ ಸಿದ್ಧವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗಡಿ ವ್ಯಾಜ್ಯ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಇದೇ 30ರಂದು ವಿಚಾರಣೆಗೆ ಬರಲಿದೆ. ಈ ಹಿನ್ನೆಲೆಯಲ್ಲಿ ಕಾನೂನು ತಜ್ಞರು ಮತ್ತು ಹಿರಿಯ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಭಾನುವಾರ ಚರ್ಚೆ ನಡೆಸಿದರು.

2004ರಲ್ಲಿ ಮಹಾರಾಷ್ಟ್ರ ಹೂಡಿರುವ ಪ್ರಕರಣದ ಬೆಳವಣಿಗೆ ಮತ್ತು 30ರಂದು ವಿಚಾರಣೆಗೆ ಬರಬಹುದಾದ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ.

2017ರಲ್ಲಿ ಸುಪ್ರೀಂ ಕೋರ್ಟ್‌ನ ಅಂದಿನ ಮುಖ್ಯ ನ್ಯಾಯಮೂರ್ತಿಯವರು ಈ ಪ್ರಕರಣವನ್ನು ಕೈಗೆತ್ತಿಕೊಳ್ಳಬೇಕೋ, ಬೇಡವೋ, ಇದು ಯೋಗ್ಯವೇ ಎಂದು ಪ್ರಶ್ನೆ ಕೇಳಿ ಆದೇಶ ಮಾಡಿದ್ದರು. ಈ ಆದೇಶದ ಅನ್ವಯ ಯೋಗ್ಯತೆಯ ಬಗ್ಗೆ ಚರ್ಚೆಯಾಗಲಿದೆ. ಈ ಮಧ್ಯೆ, ಮಹಾರಾಷ್ಟ್ರ ಸರ್ಕಾರ 2017ರ ಪ್ರಕರಣ ವನ್ನು ಪ್ರಶ್ನಿಸಿತ್ತು.

'ಈ ಪ್ರಕರಣದಲ್ಲಿ ರಾಜ್ಯದ ನಡೆ ಏನಿರಬೇಕು, ಸಂವಿಧಾನ ಏನು ಹೇಳುತ್ತದೆ ಎಂಬ ಬಗ್ಗೆ ಚರ್ಚಿಸಿದ್ದೇವೆ. ಸಂವಿಧಾನ, ರಾಜ್ಯ ಪುನರ್ ವಿಂಗಡನಾ ಕಾಯ್ದೆ ಹಾಗೂ ಸತ್ಯಾಂಶಗಳು ನಮ್ಮ ಪರವಾಗಿವೆ ಎಂದು ಕರ್ನಾಟಕ ಗಡಿ ಮತ್ತು ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರು ಸ್ಪಷ್ಟಪಡಿಸಿದ್ದಾರೆ. ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹಾಗೂ ಹಿರಿಯ ವಕೀಲ ಉದಯ ಹೊಳ್ಳ ಕೆಲವು ನಿರ್ದೇಶನಗಳನ್ನು ನೀಡಿದ್ದಾರೆ. ಇದೇ 29ರಂದು ದೆಹಲಿಯಲ್ಲಿ ಹಿರಿಯ ವಕೀಲ ಮುಕುಲ್ ರೋಟಗಿ ಜೊತೆಗೂ ವಿಷಯಗಳನ್ನು ಚರ್ಚಿಸಲಾಗುವುದು' ಎಂದು ಹೇಳಿದರು.

ಸರ್ವಪಕ್ಷ ಸಭೆ: 'ವಿರೋಧ ಪಕ್ಷದ ನಾಯಕರ ಜೊತೆ ಚರ್ಚಿಸಿ, ದಿನ ನಿಗದಿ ಮಾಡಿ ಸರ್ವಪಕ್ಷ ಸಭೆ ಕರೆಯಲಾಗುವುದು' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಬೆಳಗಾವಿ: ಮಹಾರಾಷ್ಟ್ರದ ವಾಹನಗಳಿಗೆ ಮಸಿ

ಬೆಳಗಾವಿ: ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದು, ಕಲ್ಲು ತೂರಿದ ಘಟನೆಗೆ ಪ್ರತೀಕಾರವಾಗಿ, ಕರ್ನಾಟಕ ರಕ್ಷಣ ವೇದಿಕೆ (ಟಿ.ಎ.ನಾರಾಯಣ ಗೌಡ ಬಣ) ಕಾರ್ಯಕರ್ತರು ನಗರದಲ್ಲಿ ಭಾನುವಾರ ಮಹಾರಾಷ್ಟ್ರದ ವಾಹನಕ್ಕೆ ಮಸಿ ಬಳಿದರು.

ಇಲ್ಲಿನ ಮಹಾಂತೇಶ ನಗರದ ಬಳಿ ರಾಷ್ಟ್ರೀಯ ಹೆದ್ದಾರಿ ಬದಿಯ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಮಹಾರಾಷ್ಟ್ರ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದರು. ಇದೇ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಮಹಾರಾಷ್ಟ್ರದ ವಾಹನ ತಡೆದು, ಅದರ ಗಾಜು ಒಡೆಯಲು ಯತ್ನಿಸಿದರು. ಆಗ, ಪೊಲೀಸರು ವಶಕ್ಕೆ ಪಡೆದರು. ಈ ವೇಳೆ ಪರಸ್ಪರರ ಮಧ್ಯೆ ತಳ್ಳಾಟ ನಡೆಯಿತು.

'ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ಆಗುತ್ತಿರುವ ಅನ್ಯಾಯವನ್ನು ನಾವು ಸಹಿಸುವುದಿಲ್ಲ. ನಮ್ಮ ತಾಳ್ಮೆಯ ದುರುಪಯೋಗ ಪಡೆದುಕೊಳ್ಳಬೇಡಿ. ಒಂದುವೇಳೆ ನಾವು ಸಿಡಿದೆದ್ದರೆ, ಮಹಾರಾಷ್ಟ್ರ ಸರ್ಕಾರ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಆಕ್ರೋಶ: 'ಮಹಾರಾಷ್ಟ್ರದಲ್ಲಿ ನಮ್ಮ ಬಸ್‌ಗಳಿಗೆ ಮಸಿ ಬಳಿದ, ಕಲ್ಲು ತೂರಿದ ಕಿಡಿಗೇಡಿಗಳನ್ನು ತಕ್ಷಣ ಬಂಧಿಸಬೇಕು' ಎಂದು ಕರವೇ ಕಾರ್ಯಕರ್ತರು ಆಗ್ರಹಿಸಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರತಿಕೃತಿ ದಹಿಸಿದರು. ಹೆದ್ದಾರಿಯಲ್ಲಿ ಕೆಲಕಾಲ ಸಂಚಾರ ಸ್ಥಗಿತವಾಗಿತ್ತು.

ಗಡಿ ವಿಚಾರ– ಕರ್ನಾಟಕದ ನಿಲುವು ಸ್ಪಷ್ಟ: ಎಚ್‌.ಕೆ. ಪಾಟೀಲ

ಹುಬ್ಬಳ್ಳಿ: 'ಗಡಿ ವಿವಾದ ಕುರಿತು ಮಹಾರಾಷ್ಟ್ರ ಸರ್ಕಾರ ಅನಗತ್ಯ, ಸಮಂಜಸವಲ್ಲದ ಹಾಗೂ ಬೇಜವಾಬ್ದಾರಿಯ ಹೇಳಿಕೆಗಳನ್ನು ಕೊಡುವುದು, ನಿಲುವುಗಳನ್ನು ತಾಳುವುದು ಮಾಡುತ್ತಿದೆ. ಆದರೆ, ಈ ವಿಚಾರದಲ್ಲಿ ಕರ್ನಾಟಕದ ನಿಲುವು ಸ್ಪಷ್ಟವಾಗಿದೆ. ಯಥಾಸ್ಥಿತಿ ಇಲ್ಲವೇ ಮಹಾಜನ್ ವರದಿ ಎಂಬುದಕ್ಕೆ ಕರ್ನಾಟಕ ಬದ್ಧವಾಗಿದೆ. ಅದರಲ್ಲಿ ರಾಜಿಯಿಲ್ಲ' ಎಂದು ಶಾಸಕ ಹಾಗೂ ಮಹಾರಾಷ್ಟ್ರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಎಚ್‌.ಕೆ.ಪಾಟೀಲ ಸ್ಪಷ್ಟಪಡಿಸಿದರು.

ನಗರದಲ್ಲಿ ಮಾತನಾಡಿದ ಅವರು, 'ಇದು ರಾಜ್ಯ ಸರ್ಕಾರದ ನಿರ್ಣಯ ಮಾತ್ರವಲ್ಲ, ಕರ್ನಾಟಕದ ಮಹಾ ಜನತೆಯ ನಿರ್ಣಯ. ಈ ನಿರ್ಣಯದಲ್ಲಿ ವ್ಯತ್ಯಾಸ ಮಾಡುವ ಯಾವುದೇ ರೀತಿಯ ಬೇಜವಾಬ್ದಾರಿತನ ಅಥವಾ ಅಂಥ ವರ್ತನೆಗಳನ್ನು ಯಾರೂ ಒಪ್ಪುವುದಿಲ್ಲ' ಎಂದರು.

'ಗಡಿ ವಿಚಾರದಲ್ಲಿ ರಾಜ್ಯ ಸರ್ಕಾರವು ಅಲ್ಲಲ್ಲಿ ಎಡವುತ್ತಿದೆ. ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದು ಎಂದು ಕೆಲವರು ಕೇಳುತ್ತಿದ್ದಾರೆ. ಮಾತುಕತೆ ನಡೆಸಬಹುದು ಎಂದು ಹೇಳುವ ಅಧಿಕಾರ ಕೊಟ್ಟವರು ಯಾರು?' ಎಂದರು.

'ನಮ್ಮ ರಾಜ್ಯದ ರಾಜ್ಯಪಾಲರು ಮಹಾರಾಷ್ಟ್ರದ ರಾಜ್ಯಪಾಲರೊಂದಿಗೆ ಗಡಿ ವಿಚಾರ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಗಡಿ ವಿಚಾರ ಬಗ್ಗೆ ಮಾತನಾಡುವುದಕ್ಕೆ ರಾಜ್ಯಪಾಲರಿಗೆ ಅಧಿಕಾರ ಕೊಟ್ಟು ಕಳುಹಿಸಿದವರು ಯಾರು? ನಮ್ಮ ರಾಜ್ಯಪಾಲರು ಮಾಡಿದ್ದು ತಪ್ಪು. ಅವರೇನು ಎರಡು ರಾಜ್ಯಗಳ ಮುಖ್ಯಸ್ಥರಾ, ಕುಳಿತು ಮಾತನಾಡಲು? ಯಾವ ಕಾರಣಕ್ಕಾಗಿ ರಾಜ್ಯಪಾಲರನ್ನು ಮಾತುಕತೆಗೆ, ಸಮಾಲೋಚನೆಗೆ, ಚರ್ಚೆಗೆ ಕಳುಹಿಸಿದ್ದರು ಎಂಬುದನ್ನು ಜನರಿಗೆ ನೀವು ಸ್ಪಷ್ಟಪಡಿಸಬೇಕು' ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

'ಟೈಲರ್ ಮಕ್ಕಳಿಗೂ ವಿದ್ಯಾನಿಧಿ'

ಕೊಪ್ಪ: ಜನಸಂಕಲ್ಪ ಸಮಾವೇಶದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ಪ್ರಜಾವಾಣಿ ವಾರ್ತೆ

ಕೊಪ್ಪ (ಚಿಕ್ಕಮಗಳೂರು): 'ರೈತರ ಮಕ್ಕಳಿಗೆ ಜಾರಿಗೊಳಿಸಿರುವ ವಿದ್ಯಾನಿಧಿ ಯೋಜನೆ ಸವಲತ್ತನ್ನು ಟೈಲರ್‌ಗಳ ಮಕ್ಕಳಿಗೂ ವಿಸ್ತರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೊಪ್ಪದಲ್ಲಿ ಭಾನುವಾರ ಬಿಜೆಪಿ ಜನಸಂಕಲ್ಪ ಸಮಾವೇಶದಲ್ಲಿ ಅವರು ಮಾತನಾಡಿದರು. 'ಟೈಲರ್ ಮಕ್ಕಳಿಗೂ ಯೋಜನೆಯನ್ನು ವಿಸ್ತರಿಸಬೇಕು ಎಂದು ಇಲ್ಲಿನವರು ಮನವಿ ಸಲ್ಲಿಸಿದ್ದಾರೆ. ಆ ನಿಟ್ಟಿನಲ್ಲಿ ಕ್ರಮ ವಹಿಸುತ್ತೇನೆ' ಎಂದು ತಿಳಿಸಿದರು.

ಕಾಡಾನೆ ದಾಳಿಯಿಂದ ಸಾವಿಗೀಡಾದ ವ್ಯಕ್ತಿಯ ಕುಟುಂಬಕ್ಕೆ ನೀಡುವ ಪರಿಹಾರವನ್ನು ₹7.5 ಲಕ್ಷದಿಂದ ₹15 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಆನೆ ಉಪಟಳ ನಿಯಂತ್ರಣಕ್ಕೆ ಪ್ರತಿ ಜಿಲ್ಲೆಯಲ್ಲಿ ಪ್ರತ್ಯೇಕ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಎಫ್‌ಒ) ಹಾಗೂ 50 ಮಂದಿಯ ದಳ ನೇಮಕಕ್ಕೆ ಕ್ರಮವಹಿಸಲಾಗಿದೆ ಎಂದು ಹೇಳಿದರು.

'ಈ ಕ್ಷೇತ್ರದ (ಶೃಂಗೇರಿಯ) ಶಾಸಕ (ಟಿ.ಡಿ. ರಾಜೇಗೌಡ) ವಿರುದ್ಧ ಭ್ರಷ್ಟಾಚಾರ ದೂರು ದಾಖಲಾಗಿದೆ. ದೂರುದಾರರಿಗೆ ಆಮಿಷವೊಡ್ಡಿ ಪ್ರಕರಣವನ್ನು ವಾಪಸ್ ಪಡೆಸುವ ತಂತ್ರ ನಡೆದಿದೆ' ಎಂದು ಅವರು ಆರೋಪಿಸಿದರು.

ದತ್ತ ಪೀಠಕ್ಕೆ ಶೀಘ್ರ ಪರಿಹಾರ: ದತ್ತ ಪೀಠದಲ್ಲಿ ಪೂಜೆ ವಿಚಾರವಾಗಿ ಶಾಸಕ ಸಿ.ಟಿ. ರವಿ ನೇತೃತ್ವದಲ್ಲಿ ಸುದೀರ್ಘ ಹೋರಾಟ ನಡೆದಿದೆ. ಹೋರಾಟದ ಪ್ರತಿಫಲವಾಗಿ ಒಳ್ಳೆಯ ದಿನಗಳು ಬಂದಿವೆ, ಕಾನೂನಾತ್ಮಕವಾಗಿಯೂ ಒಂದು ಹಂತಕ್ಕೆ ತಲುಪಿದೆ. ಮುಂದಿನ ದಿನಗಳಲ್ಲಿ ಪರಿಹಾರ ಸಿಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

'ಹಿಂದೂ ಅರ್ಚಕರಿಂದ ಪೂಜೆ'

ಈ ಬಾರಿ ದತ್ತ ಜಯಂತಿಯಲ್ಲಿ ಹಿಂದೂ ಅರ್ಚಕರು ಪೂಜೆ ನೆರವೇರಿಸಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ವಿಶ್ವಾಸ ವ್ಯಕ್ತಪಡಿಸಿದರು.

ಹಿಂದೂ ಅರ್ಚಕರ ನೇಮಕಕ್ಕೆ ಇರುವ ಅಡ್ಡಿಯನ್ನು ಮೂರು ದಿನಗಳಲ್ಲಿ ನಿವಾರಿಸಲಾಗುವುದು. ದತ್ತ ಪೀಠದಲ್ಲಿ ವಿಜೃಂಭಣೆಯಿಂದ ಪೂಜೆ ನೆರವೇರಿಸಲಾಗುವುದು' ಎಂದು ಭರವಸೆ ವ್ಯಕ್ತಪಡಿಸಿದರು. 'ಬಿಜೆಪಿ ಅಧಿಕಾರ ಹಿಡಿದರೆ ದತ್ತಪೀಠದಲ್ಲಿ ಹಿಂದೂ ಅರ್ಚಕರಿಂದ ಪೂಜೆ ನಡೆಯುತ್ತದೆ, ಸಿದ್ರಾಮುಲ್ಲಾ ಖಾನ್ (ಸಿದ್ದರಾಮಯ್ಯ) ಅಧಿಕಾರಕ್ಕೆ ಬಂದರೆ ಹಿಂದೂ ಕಾರ್ಯಕರ್ತರ ಹತ್ಯೆ ನಡೆಯುತ್ತೆ' ಎಂದರು.

'ಹಿಂದೂ' ಕೆಟ್ಟ ಪದ ಎಂದು ಕಾಂಗ್ರೆಸ್‌ನವರು ಹೇಳಿದ್ದಾರೆ. ಸೈನಿಕರು ಮುಖಾಮುಖಿಯಾದಾಗ ಹೇಳುವ 'ಜೈ ಹಿಂದ್' ಪದವನ್ನು ಮುತ್ಸಾಳ ಕಾಂಗ್ರೆಸ್‌ನವರಿಗೆ ಕೇಳುವಂತೆ ಹೇಳಬೇಕು. ಹಿಂದೂಗಳ ಮತ ಬೇಡ ಎಂದು ತಾಕತ್ತಿದ್ದರೆ ಅವರು ಹೇಳಲಿ' ಎಂದು ಸವಾಲೆಸೆದರು.

30ಕ್ಕೆ ಶೈಕ್ಷಣಿಕ ಕಾರ್ಯಾಗಾರ

ತಿಪಟೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಮಟ್ಟದ ಶೈಕ್ಷಣಿಕ ಕಾರ್ಯಾಗಾರ ಹಾಗೂ 61 ಶಿಕ್ಷಕರಿಗೆ 'ಅಕ್ಷರಸಿರಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನವೆಂಬರ್ 30ರಂದು ತಿಪಟೂರಿನ ಸರ್ಕಾರಿ ಬಾಲಕರ ಪ್ರೌಢಶಾಲಾ ಆವರಣದಲ್ಲಿ ನಡೆಯಲಿದೆ.

ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳ ಪ್ರಾಥಮಿಕ ಶಿಕ್ಷಕರನ್ನು ಸನ್ಮಾನಿಸಲಾಗುವುದು. ಸಿದ್ಧಗಂಗಾ ಸ್ವಾಮೀಜಿ, ಕೆರಗೋಡಿ ರಂಗಾಪುರ ಕ್ಷೇತ್ರದ ಗುರುಪರದೇಶಿಕೇಂದ್ರ ಸ್ವಾಮೀಜಿ, ಸಚಿವ ಬಿ.ಸಿ. ನಾಗೇಶ್ ಭಾಗವಹಿಸಲಿದ್ದಾರೆ

ಪ್ರಾಥಮಿಕ ಶಾಲಾ ಶಿಕ್ಷಕರ 26 ಪ್ರಮುಖ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಂಭುಲಿಂಗ ಗೌಡ ಪಾಟೀಲ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೊಮ್ಮಾಯಿ ವಿರುದ್ಧ ಕ್ರಮಕ್ಕೆ ಎನ್‌ಸಿಪಿ ಆಗ್ರಹ

ಮುಂಬೈ: 'ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಶಾಂತಿ ಕದಡುವ ಹೇಳಿಕೆಗಳನ್ನು ನೀಡುತ್ತಿರುವ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಎನ್‌ಸಿಪಿ ಭಾನುವಾರ ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

'ಕರ್ನಾಟಕದ ಜತೆ ವಿಲೀನಗೊಳಸಬೇಕೆಂದು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ತಾಲ್ಲೂಕಿನ ಕೆಲ ಗ್ರಾಮ ಪಂಚಾಯಿತಿಗಳು ನಿರ್ಣಯ ಅಂಗೀಕರಿಸಿದ್ದವು' ಎಂದು ಬೊಮ್ಮಾಯಿ ಅವರು ಈಚೆಗೆ ಹೇಳಿದ್ದರು.

'ಕನ್ನಡ ಮಾತನಾಡುವ ಜನರಿರುವ ಸೊಲ್ಲಾಪುರ ಮತ್ತು ಅಕ್ಕಲಕೋಟೆಯನ್ನು ಕರ್ನಾಟಕಕ್ಕೆ ಸೇರಿಸಬೇಕು' ಎಂದೂ ಅವರು ಹೇಳಿಕೆ ನೀಡಿದ್ದರು.

ಕರ್ನಾಟಕದ ಬಸ್‌ಗಳ ಮೇಲೆ ಈಚೆಗೆ ಮಹಾರಾಷ್ಟ್ರ ಪರ ಬರಹಗಳನ್ನು ಬರೆದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೂಡ ಬೊಮ್ಮಾಯಿ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಮನವಿ ಮಾಡಿದ್ದರು.

'ಬಸ್‌ಗಳ ಮೇಲೆ ಬರೆದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅದೇ ರೀತಿ ಗಡಿ ವಿವಾದಕ್ಕೆ ಸಂಬಂಧಿಸಿ ಅನಗತ್ಯ ಹೇಳಿಕೆ ನೀಡಿ ಕೆಲವರು ಕಾನೂನು ಕೈಗೆತ್ತಿಕೊಳ್ಳಲು ಪ್ರೇರಣೆ ನೀಡಿರುವ ಬೊಮ್ಮಾಯಿ ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಎನ್‌ಸಿಪಿ ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದ್ದಾರೆ.

'ಬೊಮ್ಮಾಯಿ ಅವರು ಕೆಲ ದಿನಗಳಿಂದ ನೀಡುತ್ತಿರುವ ಹೇಳಿಕೆಗಳು ಜನರ ಭಾವನೆಗಳಿಗೆ ನೋವುಂಟು ಮಾಡುತ್ತಿವೆ ಮತ್ತು ಜನರು ತಮ್ಮ ಭಾವನೆಗಳನ್ನು ನಕಾರಾತ್ಮಕವಾಗಿ ವ್ಯಕ್ತಪಡಿಸುತ್ತಿದ್ದಾರೆ' ಎಂದೂ ಅವರು ತಿಳಿಸಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಟ ದಿವಂಗತ ವಿಷ್ಣುವರ್ಧನ್ ಅವರ ಮನೆಗೆ ಭೇಟಿ ನೀಡಿದರು. ಪತ್ನಿ ಭಾರತಿ ವಿಷ್ಣುವರ್ಧನ್, ಪುತ್ರಿ ಕೀರ್ತಿ, ಅಳಿಯ ಅನಿರುದ್ಧ ಇದ್ದಾರೆ.

'ಡಿಸೆಂಬರ್ ಒಳಗೆ ವಿಷ್ಣು ಸ್ಮಾರಕ ಉದ್ಘಾಟನೆ'

ಬೆಂಗಳೂರು: ಮೈಸೂರು ಸಮೀಪ ನಿರ್ಮಾಣವಾಗುತ್ತಿರುವ ನಟ ದಿವಂಗತ ವಿಷ್ಣುವರ್ಧನ್ ಅವರ ಸ್ಮಾರಕವನ್ನು ಡಿಸೆಂಬರ್ ಒಳಗೆ ಉದ್ಘಾಟಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ನಗರದ ಜಯನಗರದಲ್ಲಿ ಈ ಹಿಂದೆ ವಿಷ್ಣುವರ್ಧನ್ ಅವರಿದ್ದ ಮನೆಯ ಜಾಗದಲ್ಲೇ ಹೊಸ ಮನೆಯ ನಿರ್ಮಾಣವಾಗಿದ್ದು, 'ವಲ್ಮೀಕ' ಹೆಸರಿನ ಈ ಮನೆಯ ಗೃಹಪ್ರವೇಶ ಭಾನುವಾರ (ನ.27) ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ, 'ಮೈಸೂರಿನಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ಮತ್ತು ವಸ್ತುಸಂಗ್ರಹಾಲಯ ಉದ್ಘಾಟನೆ ಮಾಡುವ ಹಂತಕ್ಕೆ ಬಂದಿದೆ. ವಿಷ್ಣುವರ್ಧನ್ ಅವರ ಮೇರು ವ್ಯಕ್ತಿತ್ವ, ಘನತೆಗೆ ತಕ್ಕ ಹಾಗೆ ಈ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಮಾಡುತ್ತೇವೆ' ಎಂದರು.

ಮೈಸೂರು ಸಮೀಪ ಉದ್ಬೂರು ಬಳಿಯ ಹಾಲಾಳು ಗ್ರಾಮದಲ್ಲಿ ಐದು ಎಕರೆಯಲ್ಲಿ ₹11 ಕೋಟಿ ವೆಚ್ಚದಲ್ಲಿ ಸ್ಮಾರಕ ನಿರ್ಮಾಣವಾಗುತ್ತಿದೆ. 2020ರಲ್ಲಿ ಇದರ ಶಂಕುಸ್ಥಾಪನೆಯಾಗಿತ್ತು. ಅವರ ಪ್ರತಿಮೆ, ಅವರ ನೂರಾರು ಛಾಯಾಚಿತ್ರಗಳುಳ್ಳ ಗ್ಯಾಲರಿ, ರಂಗತರಬೇತಿ ಶಿಬಿರಗಳ ಆಯೋಜನೆಗೆ ಸ್ಥಳಾವಕಾಶವೂ ಈ ಸ್ಮಾರಕದಲ್ಲಿ ಇರಲಿದೆ.

ಕೆಲಸ, ಹಣದ ಆಮಿಷವೊಡ್ಡಿ ಮತಾಂತರ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕೆಲಸ ಕೊಡಿಸುವ ಹಾಗೂ ಹಣದ ಆಮಿಷವೊಡ್ಡಿ ಮುಸ್ಲಿಂ ಧರ್ಮಕ್ಕೆ ಮತಾಂತರ ನಡೆಸಿದ ಬಗ್ಗೆ ನಗರದ ಯುವತಿಯೊಬ್ಬರು ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ನಗರದ ಬಿಕರ್ನಕಟ್ಟೆಯಲ್ಲಿ ಮಳಿಗೆ ಹೊಂದಿರುವ ಕಲ್ಲಾಪುವಿನ ಖಲೀಲ್, ಕಂಕನಾಡಿಯ ಡಾ.ಜಮೀಲಾ, ಭದ್ರಾವತಿಯ ಐಮಾನ್ ಹಾಗೂ ಇತರ ಮೂವರು ಈ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ.

'ನಾನು ಹತ್ತನೇ ತರಗತಿ ಮುಗಿಸಿದ ಬಳಿಕ ಬಿಕರ್ನಕಟ್ಟೆಯ ಫ್ಯಾನ್ಸಿ ಮಳಿಗೆಯೊಂದರಲ್ಲಿ ಒಂದೂವರೆ ವರ್ಷ ಕೆಲಸ ಮಾಡಿದ್ದೆ. ಆಗ ಸಮೀಪದ ಖಲೀಲ್ ಮಳಿಗೆಯಲ್ಲಿ ಮೊಬೈಲ್‌ಗೆ ರಿಚಾರ್ಜ್ ಮಾಡಿಸುತ್ತಿದ್ದೆ. ಒಳ್ಳೆಯ ಕೆಲಸ ಕೊಡಿಸುತ್ತೇನೆ, ಹಣ ನೀಡುತ್ತೇನೆ ಎಂದು ಆಮಿಷವೊಡ್ಡಿ ಖಲೀಲ್ 2021ರ ಜ.14ರಂದು ಕಲ್ಲಾಪುವಿನ ಮನೆಗೆ ಕರೆದೊಯ್ದು ಮನೆಯ ಹೆಂಗಸರ ಮೂಲಕ ಒತ್ತಾಯ ಪೂರ್ವಕವಾಗಿ ನನ್ನಿಂದ ನಮಾಜ್ ಮಾಡಿಸಿ ಮತಾಂತರ ಮಾಡಿಸಿದ್ದ. ಖಲೀಲ್ ನನ್ನ ಹೆಸರನ್ನು ಆಯಿಷಾ ಎಂದು ಬದಲಾಯಿಸಿದ್ದಲ್ಲದೇ ಲೈಂಗಿಕ ಕಿರುಕುಳವನ್ನೂ ನೀಡಿದ್ದ' ಎಂದು ಸಂತ್ರಸ್ತ ಯುವತಿ ಆರೋಪಿಸಿದ್ದಾರೆ.

'ನಾನು ಡಾ.ಜಮೀಲಾ ಹಾಗೂ ಡಾ. ಸೈಯದ್ ಮನೆಯಲ್ಲಿ ಕೆಲಸಕ್ಕಿದ್ದೆ. ಆಗ ಜಮೀಲಾ ಅವರು ಧರಿಸುವುದಕ್ಕೆ ಬುರ್ಖಾ ನೀಡಿ, ಯಾರಾದರೂ ಕೇಳಿದರೆ ಮುಸ್ಲಿಂ ಎಂದೇ ಹೇಳಬೇಕು ಎಂದು ಸೂಚಿಸಿದ್ದರು. ಅವರ ಮನೆಯಲ್ಲಿ ಕೆಲಸಕ್ಕಿದ್ದಾಗ ಭದ್ರಾವತಿಯ ಐಮಾನ್ ಎಂಬಾತನ ಪರಿಚಯವಾಗಿತ್ತು. ತನ್ನನ್ನು ಪ್ರೀತಿಸುವಂತೆ ಒತ್ತಾಯಿಸಿದ್ದ, ಆತ 2022ರ ಆ. 30ರಂದು ಮನೆಗೆ ಕರೆಸಿಕೊಂಡಿದ್ದ'

'ನನಗೆ ಲೈಂಗಿಕ ಕಿರುಕುಳ ನೀಡಿದ ಹಾಗೂ ಮತಾಂತರ ಮಾಡಿದ ಖಲೀಲ್ ಮೇಲೆ ಇದಕ್ಕೆ ಸಹಕಾರ ನೀಡಿದ ಆತನ ಸಂಬಂಧಿಕರ ಮೇಲೆ, ಡಾ.ಜಮೀಲಾ ಹಾಗೂ ಐಮಾನ್ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಸಂತ್ರಸ್ತ ಯುವತಿ ಒತ್ತಾಯಿಸಿದ್ದಾರೆ.

ಚಿತ್ರದುರ್ಗದಲ್ಲಿ ಜ. 8ಕ್ಕೆ ಕಾಂಗ್ರೆಸ್ ಏಕತಾ ಸಮಾವೇಶ

ಬೆಂಗಳೂರು: ಚಿತ್ರದುರ್ಗದಲ್ಲಿ ಜನವರಿ 8ರಂದು ಎಸ್‌ಸಿ–ಎಸ್‌ಟಿ ಏಕತಾ ಸಮಾವೇಶ ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ. ಈ ಸಮಾವೇಶಕ್ಕೂ ಮೊದಲು ಸ್ಥಳೀಯವಾಗಿ ಜಾಗೃತಿ ಸಭೆಗಳನ್ನು ಹಮ್ಮಿಕೊಳ್ಳಲು ಕೂಡಾ ತೀರ್ಮಾನಿಸಲಾಗಿದೆ.

'ಸಮಾವೇಶಕ್ಕೆ 5 ಲಕ್ಷದಿಂದ 10 ಲಕ್ಷ ಜನರನ್ನು ಸೇರಿಸಲು ಚರ್ಚೆ ನಡೆದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಪಕ್ಷದ ಪ್ರಮುಖ ನಾಯಕರನ್ನು ಆಹ್ವಾನಿಸಲಾಗುವುದು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪೂರ್ವಭಾವಿ ಸಭೆ ಶಾಸಕ ಸತೀಶ ಜಾರಕಿಹೊಳಿ ಅವರ ಬೆಂಗಳೂರಿನ ನಿವಾಸದಲ್ಲಿ ನಡೆಯಿತು. ಶಾಸಕ ಜಿ. ಪರಮೇಶ್ವರ, ಮುಖಂಡರಾದ ಎಚ್‌.ಸಿ. ಮಹದೇವಪ್ಪ ಸಭೆಯಲ್ಲಿದ್ದರು.

ವಿಶ್ವದ ಅಗ್ರ ಉಲ್ಲೇಖಿತ ಸಂಶೋಧಕರಲ್ಲಿ ಕೆಎಲ್‌ಇಯ ಇಬ್ಬರಿಗೆ ಸ್ಥಾನ

ಹುಬ್ಬಳ್ಳಿ: ಕ್ಲಾರಿವೇಟ್ (ವೆಬ್ ಆಫ್ ಸೈನ್ಸ್ ಕೋರ್ ಕಲೆಕ್ಷನ್) ಗುರುತಿಸಿರುವ 2022ನೇ ಸಾಲಿನ ವಿಶ್ವದ ಅತಿ ಹೆಚ್ಚು ಉಲ್ಲೇಖಿತ ಅಗ್ರ ಸಂಶೋಧಕರ (ಹೈಲಿ ಸೈಟೆಡ್ ರಿಸರ್ಚರ್) ವಾರ್ಷಿಕ ಪಟ್ಟಿಯಲ್ಲಿ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಅಡ್ವಾನ್ಸ್ಡ್ ಸೈನ್ಸಸ್‌ನ ಸಂಶೋಧನಾ ನಿರ್ದೇಶಕ ಪ್ರೊ. ತೇಜರಾಜ್ ಎಂ. ಅಮ್ಮಿನಬಾವಿ ಮತ್ತು ಸಹಾಯಕ ಪ್ರಾಧ್ಯಾಪಕ ಡಾ. ನಾಗರಾಜ್ ಪಿ. ಶೆಟ್ಟಿ ಅವರು ಸ್ಥಾನ ಪಡೆದಿದ್ದಾರೆ.



ತೇಜರಾಜ್ ಎಂ. ಅಮ್ಮಿನಬಾವಿ



ಡಾ. ನಾಗರಾಜ್ ಪಿ. ಶೆಟ್ಟಿ

ಕಳೆದ ಒಂದು ದಶಕದಲ್ಲಿ ಬಹು ಉಲ್ಲೇಖಿತ ಪತ್ರಿಕೆಗಳ ಪ್ರಕಟಣೆಯ ಮೂಲಕ, ಗಮನಾರ್ಹ ಪ್ರಭಾವ ಬೀರಿದ ವಿಜ್ಞಾನಿಗಳು ಮತ್ತು ಸಾಮಾಜಿಕ ವಿಜ್ಞಾನಿಗಳನ್ನು ಕ್ಲಾರಿವೇಟ್ ಗುರುತಿಸುತ್ತದೆ. ಪಟ್ಟಿಯು 21 ಕ್ಷೇತ್ರಗಳ ಸುಮಾರು 4 ಸಾವಿರಕ್ಕೂ ಹೆಚ್ಚು ಉಲ್ಲೇಖಿತ ಸಂಶೋಧಕರನ್ನು ಒಳಗೊಂಡಿದೆ. ಈ ಪೈಕಿ, ಸುಮಾರು 3,200ಕ್ಕೂ ಹೆಚ್ಚು ಸಂಶೋಧಕರು ಹಲವು ಕ್ಷೇತ್ರಗಳಲ್ಲಿ ಅಸಾಧಾರಣ ಕಾರ್ಯಕ್ಷಮತೆ ಹೊಂದಿದ್ದಾರೆ.

ತೇಜರಾಜ್ ಅವರು ಸತತ ಎರಡನೇ ವರ್ಷ ಈ ಮನ್ನಣೆ ಪಡೆದಿದ್ದು, ಪಟ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದಾರೆ. ನಾಗರಾಜ್ ಅವರು 18ನೇ ಸ್ಥಾನ ಪಡೆದಿದ್ದಾರೆ. ಪಟ್ಟಿಯಲ್ಲಿ ಭಾರತದ 25 ಸಂಶೋಧಕರು ಸ್ಥಾನ ಪಡೆದಿದ್ದಾರೆ. ಅಗ್ರ ಸಂಶೋಧಕರ ಪಟ್ಟಿಯಲ್ಲಿ ಇಬ್ಬರನ್ನು ಹೊಂದಿರುವ ಏಕೈಕ ಖಾಸಗಿ ವಿಶ್ವವಿದ್ಯಾನಿಲಯ ಕೆಎಲ್‌ಇ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗಡಿ ವಿವಾದ ಎದ್ದಾಗ ಬಸ್ ಸಂಚಾರ ಬಂದ್

ಪ್ರೌಢಶಿಕ್ಷಣ: ರಾಜ್ಯದತ್ತ ಮುಖ

• ಇಮಾಮ್‌ಹುಸೇನ್ ಗೂಡುನವರ

ಪ್ರಜಾವಾಣಿ ವಿಶೇಷ



ನಿಪ್ಪಾಣಿ ತಾಲ್ಲೂಕಿನ ಬೋರಗಾಂವ ಗ್ರಾಮದ ಕನ್ನಡ ಮಾಧ್ಯಮ ಶಾಲೆಗೆ ಅಧ್ಯಯನಕ್ಕಾಗಿ ಬರುವ ಮಹಾರಾಷ್ಟ್ರದ ಮಕ್ಕಳು

ಬೆಳಗಾವಿ: ಕರ್ನಾಟಕದಲ್ಲಿ ಕನ್ನಡದೊಂದಿಗೆ ಮರಾಠಿ ಮಾಧ್ಯಮ ಶಾಲೆಗಳಿಗೂ ಸರ್ಕಾರ ಸಮಾನ ಸೌಲಭ್ಯ ಕಲ್ಪಿಸುತ್ತಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ಈ ವಿಚಾರದಲ್ಲಿ ಇಬ್ಬಗೆ ನೀತಿ ಅನುಸರಿಸುತ್ತಿದೆ.

ರಾಜ್ಯದ ಗಡಿಯಿಂದ ಐದೇ ಕಿ.ಮೀ. ಅಂತರದಲ್ಲಿ ಕೊಲ್ಹಾಪುರ ಜಿಲ್ಲೆಯ ಇಚಲಕರಂಜಿ ಪಟ್ಟಣವಿದೆ. ಉದ್ಯೋಗ ಅರಸಿ ಹೋಗಿ, ಕನ್ನಡಿಗರೂ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ನೆಲೆಸಿದ್ದಾರೆ. ಅವರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲೆಂದು ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ತೆರೆಯಲಾಗಿದೆ. ಆದರೆ, ಪ್ರೌಢಶಿಕ್ಷಣಕ್ಕಾಗಿ ಹೊರನಾಡ ಕನ್ನಡಿಗರ ಮಕ್ಕಳು ಕರ್ನಾಟಕದತ್ತಲೇ ಮುಖಮಾಡುವುದು ಅನಿವಾರ್ಯವಾಗಿದೆ.

13 ಕಿ.ಮೀ ಪ್ರಯಾಣ: 'ನಾವೂ 1ರಿಂದ 7ನೇ ತರಗತಿಯವರೆಗೆ ಇಚಲಕರಂಜಿಯಲ್ಲೇ ಓದುತ್ತೇವೆ. ಮುಂದೆ 8ರಿಂದ 10ನೇ ತರಗತಿಗಾಗಿ ನಿತ್ಯ 13 ಕಿ.ಮೀ. ಕ್ರಮಿಸಿ, ನಿಪ್ಪಾಣಿ ತಾಲ್ಲೂಕಿನ ಬೋರಗಾಂವಕ್ಕೆ ಹೋಗುತ್ತಿದ್ದೇವೆ. ಗಡಿ ವಿವಾದದಿಂದಾಗಿ ಶನಿವಾರ ಉಭಯ ರಾಜ್ಯಗಳ ಮಧ್ಯೆ ಬಸ್ ಸಂಚಾರ ಸ್ಥಗಿತಗೊಂಡು ತರಗತಿಗೆ ಹೋಗಲಾಗಲಿಲ್ಲ. ಇಂಥ ಸಮಸ್ಯೆ ಆಗಾಗ ತಲೆದೋರುತ್ತಲೇ ಇವೆ. ನಿಯಮಿತವಾಗಿ ಶಾಲೆಗೆ ಹಾಜರಾಗಲು ಸಮಸ್ಯೆಯಾಗುತ್ತಿದೆ. ನಮ್ಮೂರಿನಲ್ಲೇ ಪ್ರೌಢಶಾಲೆ ಆರಂಭಿಸಿದರೆ ಅನುಕೂಲ' ಎಂದು ವಿದ್ಯಾರ್ಥಿಗಳಾದ ಓಂಕಾರ ಪಾಟೀಲ, ಮಹೇಶ ಮುತ್ನಾಳಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ನಾವು ಮೂಲತಃ ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯವರು. ಉದ್ಯೋಗಕ್ಕಾಗಿ ಇಲ್ಲಿ ಬಂದು ನೆಲೆಸಿದ್ದೇವೆ. ನನ್ನ ಮಗ ಎಸ್ಸೆಸ್ಸೆಲ್ಸಿ ವ್ಯಾಸಂಗಕ್ಕಾಗಿ ಬೋರಗಾಂವಗೆ ಹೋಗುತ್ತಾನೆ. ನಿತ್ಯ ಬೆಳಿಗ್ಗೆ ಮತ್ತು ಸಂಜೆ ಪ್ರಯಾಣದಲ್ಲೇ ಹೆಚ್ಚಿನ ಸಮಯ ಕಳೆಯುತ್ತಿದ್ದಾನೆ. ಇದರಿಂದ ಕಲಿಕೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಮಹಾರಾಷ್ಟ್ರ ಸರ್ಕಾರ ಇಚಲಕರಂಜಿಯಲ್ಲೇ ಕನ್ನಡ ಮಾಧ್ಯಮ ಪ್ರೌಢಶಾಲೆ ಆರಂಭಿಸಲು ಕ್ರಮ ಕೈಗೊಳ್ಳಬೇಕು' ಎನ್ನುತ್ತಾರೆ ರಾಮಗೌಡ ಪಾಟೀಲ.

> **ಗಡಿ ವಿವಾದದಿಂದ ಮಕ್ಕಳ ಶಿಕ್ಷಣಕ್ಕೆ ಯಾವ ತೊಂದರೆಯೂ ಆಗಬಾರದು. ಉಭಯ ರಾಜ್ಯಗಳೂ ಮಾತುಕತೆ ನಡೆಸಿ, ಮಕ್ಕಳ ಭವಿಷ್ಯದ ದೃಷ್ಟಿಯಿಂದ ಸೂಕ್ತ ತೀರ್ಮಾನ ಕೈಗೊಳ್ಳಬೇಕು**
> **ಅಶೋಕ ಚಂದರಗಿ,** ಅಧ್ಯಕ್ಷ, ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

40 ಮಕ್ಕಳು: 'ನಮ್ಮ ಶಾಲೆ ಗಡಿ ಭಾಗದಲ್ಲಿದೆ. ಇಲ್ಲಿ ಪ್ರೌಢಶಿಕ್ಷಣ ಪಡೆಯಲು ಮಹಾರಾಷ್ಟ್ರದ ಇಚಲಕರಂಜಿಯಿಂದ 35 ಮಕ್ಕಳು, ಉಪರಿಯಿಂದ ಇಬ್ಬರು, ಕುರಂದವಾಡದಿಂದ ಮೂವರು ಮಕ್ಕಳು ಬರುತ್ತಾರೆ' ಎಂದು ಕೆ.ಎಸ್. ಪಾಟೀಲ ಪ್ರೌಢಶಾಲೆ ಮುಖ್ಯಶಿಕ್ಷಕ ಎ.ಎ.ಧೂಳಸಾವಂತ್ ತಿಳಿಸಿದರು.

187 ನಾಣ್ಯ ನುಂಗಿದ್ದ ವ್ಯಕ್ತಿ!



ವ್ಯಕ್ತಿಯ ಹೊಟ್ಟೆಯಿಂದ ಹೊರ ತೆಗೆದ ನಾಣ್ಯಗಳು

ಬಾಗಲಕೋಟೆ: ವ್ಯಕ್ತಿಯೊಬ್ಬರು ನುಂಗಿದ್ದ 187 ನಾಣ್ಯಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಹೊಟ್ಟೆಯಿಂದ ತೆಗೆಯುವಲ್ಲಿ ಕುಮಾರೇಶ್ವರ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿದ್ದಾರೆ.

ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಹಾನಗಲ್ ಕುಮಾರೇಶ್ವರ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗದ ತಜ್ಞ ವೈದ್ಯರಾಗಿರುವ ಡಾ.ಈಶ್ವರ ಕಲಬುರ್ಗಿ, ಡಾ.ಪ್ರಕಾಶ ಕಟ್ಟಿಮನಿ, ಅರಿವಳಿಕೆ ತಜ್ಞರಾದ ಡಾ.ಅರ್ಚನಾ ಮತ್ತು ಡಾ.ರೂಪಾ ಹುಲಕುಂದೆ ಅವರಿದ್ದ ತಂಡ ನಾಣ್ಯಗಳನ್ನು ಹೊರ ತೆಗೆದಿದೆ.

ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ 58 ವರ್ಷ ವಯಸ್ಸಿನ ವ್ಯಕ್ತಿ ₹5ರ 56 ನಾಣ್ಯ, ₹2ರ 51 ಹಾಗೂ ₹1ರ 80 ನಾಣ್ಯಗಳನ್ನು ನುಂಗಿದ್ದರು. ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಅವರನ್ನು ಕುಟುಂಬದವರು ಇಲ್ಲಿನ ಕುಮಾರ ಆಸ್ಪತ್ರೆಗೆ ದಾಖಲಿಸಿದ್ದರು. ಎಕ್ಸ್‌ರೇ, ಎಂಡೊಸ್ಕೋಪಿ ಮಾಡಿಸಿದಾಗ ನ್ಯಾಣಗಳಿರುವುದು ಪತ್ತೆಯಾಗಿದೆ. ರೋಗಿಯ ಜೀವಕ್ಕೆ ಅಪಾಯ ಇದ್ದಿದ್ದರಿಂದ ಕೂಡಲೇ ಶಸ್ತ್ರಚಿಕಿತ್ಸೆ ಮಾಡಿದ್ದು, ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ.

ಸಾಹಿತ್ಯ ಸಮ್ಮೇಳನ ಪ್ರತಿನಿಧಿಯಾಗಲು ಪರಿಷತ್ ಸದಸ್ಯತ್ವ ಕಡ್ಡಾಯ: ಜೋಶಿ

ಪ್ರಜಾವಾಣಿ ವಾರ್ತೆ



ಹಾವೇರಿ: 'ನಗರದಲ್ಲಿ ಜನವರಿ 6,7 ಮತ್ತು 8ರಂದು ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಲು ಇಚ್ಛಿಸುವವರು ಕಡ್ಡಾಯವಾಗಿ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾಗಿರಬೇಕು' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಭಾನುವಾರ ನಡೆದ ಸಾಹಿತ್ಯ ಸಮ್ಮೇಳನದ ಸ್ವಾಗತಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಸಾಹಿತ್ಯ ಸಮ್ಮೇಳನಕ್ಕೆ ₹500 ಪ್ರತಿನಿಧಿ ಶುಲ್ಕ ನಿಗದಿಪಡಿಸಲಾಗಿದೆ. ಕಸಾಪ ಸಮ್ಮೇಳನಕ್ಕಾಗಿ ಸಿದ್ಧಪಡಿಸಿರುವ ಆ್ಯಪ್ ಮೂಲಕ ಡಿ.1ರಿಂದ ಡಿ.18ರ ವರೆಗೆ ನೋಂದಣಿ ಮಾಡಿಕೊಳ್ಳಬಹುದು. ಆ್ಯಪ್ ಮೂಲಕವೇ ಪರಿಷತ್ ಸದಸ್ಯರಾಗಬಹುದು. ಸಮ್ಮೇಳನಕ್ಕೆ 20 ಸಾವಿರ ಪ್ರತಿನಿಧಿಗಳಿಗೆ ಅವಕಾಶವಿದ್ದು, ಮೊದಲು ನೋಂದಣಿ ಮಾಡಿಕೊಂಡವರಿಗೆ ಆದ್ಯತೆ ಸಿಗಲಿದೆ ಎಂದು ಹೇಳಿದರು.

16 ಉಪಸಮಿತಿಗಳ ರಚನೆ: ಸಮನ್ವಯ ಸಮಿತಿ, ವೇದಿಕೆ ನಿರ್ಮಾಣ ಸಮಿತಿ, ಆಹಾರ ಸಮಿತಿ, ಮೆರವಣಿಗೆ ಸಮಿತಿ, ವಸತಿ ಸಮಿತಿ ಸೇರಿದಂತೆ ಒಟ್ಟು 16 ಉಪಸಮಿತಿಗಳನ್ನು ರಚಿಸಿ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು.

ಮರಾಠಿಗರಿಗೆ ಸಂದೇಶ: ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ ಹೆಬ್ಬಾರ್ ಮಾತನಾಡಿ, ರಾಜ್ಯದ ಗಡಿ ವಿಚಾರದಲ್ಲಿ ಪದೇ ಪದೇ ವಿವಾದ ಸೃಷ್ಟಿಸುತ್ತಿರುವ ಮಹಾರಾಷ್ಟ್ರದ ಕನ್ನಡ ವಿರೋಧಿ ಮಂದಿಗೆ ಅಭೂತಪೂರ್ವವಾಗಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಮೂಲಕ ಉತ್ತರ ಕೊಡಲಾಗುವುದು. ಕನ್ನಡ ನೆಲ, ಜಲ, ಭಾಷೆ ವಿಚಾರದಲ್ಲಿ ಕನ್ನಡಿಗರೆಲ್ಲರೂ ಒಗ್ಗಟ್ಟಾಗಿದ್ದೇವೆ ಎಂಬ ಸಂದೇಶ ನೀಡಲಿದ್ದೇವೆ ಎಂದರು.

ಧರ್ಮದ ಲೇಪನ ನೀಡಿದ್ದರಿಂದ ನೋವಾಗಿದೆ: ಶಾಸಕ ರಾಮದಾಸ್

ವಿವಾದಕ್ಕೆ ಒಳಗಾಗಿದ್ದ ತಂಗುದಾಣದ 2 ಗುಂಬಜ್ ತೆರವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಬಳಿ ನಿರ್ಮಿಸಿದ್ದ ಬಸ್ ನಿಲ್ದಾಣದ ಮೇಲಿನ ಮೂರು ಗುಂಬಜ್‌ಗಳಲ್ಲಿ ಎರಡನ್ನು ತೆರವುಗೊಳಿಸಲಾಗಿದೆ.

'ಮೈಸೂರು ಪಾರಂಪರಿಕ ನಗರಿಯಾಗಿದ್ದು, ವಿಶ್ವವಿಖ್ಯಾತ ಮೈಸೂರು ಅರಮನೆಯ ಮಾದರಿಯಲ್ಲಿ ಪಾರಂಪರಿಕ ಬಸ್ ತಂಗುದಾಣ ನಿರ್ಮಾಣ ನನ್ನ ಉದ್ದೇಶವಾಗಿತ್ತು. ಆದರೆ, ಅದಕ್ಕೆ ಅನವಶ್ಯಕ ಧರ್ಮದ ಲೇಪನ ನೀಡಿ ಅದನ್ನು ವಿವಾದದ ಸ್ಥಳವಾಗಿ ಪರಿವರ್ತಿಸುವ ಪ್ರಯತ್ನ ಮನಸ್ಸಿಗೆ ತುಂಬಾ ನೋವುಂಟು ಮಾಡಿದೆ' ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದ್ದಾರೆ.

> **ಪ್ರತಾಪ ಸಿಂಹ, ಎಸ್‌.ಎ.ರಾಮದಾಸ್, ಬಸ್ ನಿಲ್ದಾಣದ ಮೇಲಿನ ಗುಂಬಜ್ ಒಡೆದು ಹಾಕಿ, ತೆರಿಗೆದಾರರ ಹಣ ಪೋಲು ಮಾಡಿರುವುದು ಖಂಡನೀಯ**
> **ಡಾ.ಎಚ್‌.ಸಿ.ಮಹದೇವಪ್ಪ** ಕಾಂಗ್ರೆಸ್ ಮುಖಂಡ

'ಬಸ್ ನಿಲ್ದಾಣದ ಮೇಲಿನ ವಿನ್ಯಾಸವು ಮಸೀದಿಯ ಗುಂಬಜ್ ಮಾದರಿಯಲ್ಲಿದೆ. ಅದನ್ನು ನಾಲ್ಕು ದಿನಗಳ ಒಳಗೆ ತೆರವುಗೊಳಿಸಬೇಕು. ಇಲ್ಲದಿದ್ದರೆ ನಾನೇ ಆ ಕೆಲಸ ಮಾಡುತ್ತೇನೆ' ಎಂದು ಸಂಸದ ಪ್ರತಾಪ ಸಿಂಹ ಎಚ್ಚರಿಕೆ ನೀಡಿದ್ದರು.

'ಮುಂದೆ ಎಂದೂ ಇದು ವಿವಾದದ ಕೇಂದ್ರವಾಗಬಾರದು ಹಾಗೂ ಕೆಲವರು ಕಪ್ಪುಚುಕ್ಕೆಯನ್ನು ಇಡಬಾರದೆಂದು, ಎರಡು ಗುಂಬಜ್‌ಗಳನ್ನು ತೆಗೆಯಲಾಗಿದೆ. ಮಧ್ಯದ ಗುಂಬಜ್ ಮಾತ್ರವೇ ಉಳಿಸಲಾಗಿದೆ' ಎಂದು ರಾಮದಾಸ್ ಮಾಹಿತಿ ನೀಡಿದ್ದಾರೆ.

'ಮಧ್ಯದಲ್ಲೊಂದು ದೊಡ್ಡ ಗುಂಬಜ್, ಅಕ್ಕಪಕ್ಕ ಎರಡು ಚಿಕ್ಕ ಗುಂಬಜ್ ಇದ್ದರೆ ಅದು ಮಸೀದಿನೇ. ಅದನ್ನು ತೆರವು ಮಾಡಿಸುತ್ತೇನೆ ಎಂದಿದ್ದೆ ಮತ್ತು ಅದರಂತೆ ನಡೆದುಕೊಂಡಿದ್ದೇನೆ. ಕಾಲಾವಕಾಶ ಕೇಳಿ ಮಾತಿನಂತೆ ನಡೆದುಕೊಂಡ ಜಿಲ್ಲಾಧಿಕಾರಿ ಹಾಗೂ ವಾಸ್ತವ ಅರಿತು ಜನಾಭಿಪ್ರಾಯಕ್ಕೆ ತಲೆಬಾಗಿದ ರಾಮದಾಸ್ ಅವರಿಗೂ ಧನ್ಯವಾದ ಸಲ್ಲಿಸುತ್ತೇನೆ' ಎಂದು ಸಂಸದ ಪ್ರತಾಪ ಸಿಂಹ ಹೇಳಿದ್ದಾರೆ.



ಮೈಸೂರಿನ ಊಟಿ ರಸ್ತೆಯಲ್ಲಿ ನಿರ್ಮಿಸಿರುವ ಬಸ್ ನಿಲ್ದಾಣದಲ್ಲಿ 2 ಗುಂಬಜ್‌ಗಳನ್ನು ತೆರವುಗೊಳಿಸಿ ಮಧ್ಯದ ಒಂದನ್ನು ಉಳಿಸಲಾಗಿದೆ –ಪ್ರಜಾವಾಣಿ ಚಿತ್ರ



ಸುಭಾಷಿತ

ತಮ್ಮ ಭಾವನೆಗಳು ಮತ್ತು ಆಲೋಚನೆಗಳ ಮೇಲೆ ನಿಯಂತ್ರಣ ಸಾಧಿಸುವುದು ಎಷ್ಟು ಕಷ್ಟ ಎಂಬುದು ತಮಗೆ ಕಷ್ಟ ಬಂದಾಗಷ್ಟೇ ಜನರಿಗೆ ಅರ್ಥವಾಗುತ್ತದೆ.

-ಆ್ಯಂಟನ್ ಚೆಕೊವ್

ಬಿಬಿಎಂಪಿ ಚುನಾವಣೆ ಇನ್ನು ಯಾವ ವಿಳಂಬವೂ ಬೇಡ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಚುನಾವಣೆಯು ಈಗಾಗಲೇ ವರ್ಷಗಳಷ್ಟು ವಿಳಂಬವಾಗಿದೆ. ಈ ಹೊತ್ತಿಗೆ ಚುನಾವಣೆ ನಡೆದಿರಬೇಕಿತ್ತು. ಆದರೆ, ಚುನಾವಣೆಯನ್ನು ಇನ್ನಷ್ಟು ವಿಳಂಬಗೊಳಿಸಲು ರಾಜ್ಯ ಸರ್ಕಾರವು ಹತಾಶ ಯತ್ನವೊಂದನ್ನು ನಡೆಸಿದೆ. ಹೈಕೋರ್ಟ್ ಈ ಹಿಂದೆ ನೀಡಿದ್ದ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಮೂರು ತಿಂಗಳ ಕಾಲಾವಕಾಶ ಬೇಕು ಎಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಸರ್ಕಾರದ ನಡೆಯು ಚುನಾವಣೆಯನ್ನು ಇನ್ನಷ್ಟು ವಿಳಂಬ ಮಾಡುವ ಒಂದು ತಂತ್ರ. ರಾಜ್ಯ ಸರ್ಕಾರ ಹೊರಡಿಸಿದ್ದ ವಾರ್ಡ್‌ವಾರು ಮೀಸಲಾತಿ ಪಟ್ಟಿಯನ್ನು ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರು ಇದ್ದ ಏಕಸದಸ್ಯ ಪೀಠವು ಸೆಪ್ಟೆಂಬರ್‌ನಲ್ಲಿ ರದ್ದುಪಡಿಸಿತ್ತು. ಈ ಮೀಸಲಾತಿಯು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನಗಳಿಗೆ ಅನುಗುಣವಾಗಿ ಇಲ್ಲ ಎಂದು ಹೈಕೋರ್ಟ್ ಆಗ ಹೇಳಿತ್ತು. ಚುನಾವಣೆಯನ್ನು ಡಿಸೆಂಬರ್ 31ರೊಳಗೆ ನಡೆಸಬೇಕು ಎಂದು ಹೇಳಿತ್ತು. ಅಲ್ಲದೆ, ಮೀಸಲಾತಿ ಪಟ್ಟಿಯಲ್ಲಿನ ಲೋಪಗಳನ್ನು ಸರಿಪಡಿಸಿ ನವೆಂಬರ್ 30ಕ್ಕೆ ಮೊದಲು ಹೊಸದಾಗಿ ಅಧಿಸೂಚನೆ ಹೊರಡಿಸಬೇಕು ಎಂದು ಕೂಡ ಅದು ಸೂಚಿಸಿತ್ತು. ವಾರ್ಡ್‌ವಾರು ಮೀಸಲಾತಿ ಪಟ್ಟಿಯಲ್ಲಿ ಮಹಿಳೆಯರಿಗೆ ನಿರ್ದಿಷ್ಟ ವಾರ್ಡ್‌ಗಳನ್ನು ಮೀಸಲಾಗಿ ಇರಿಸಿರುವಲ್ಲಿ ಬಹಳ ಲೋಪಗಳು ಕಂಡುಬಂದಿವೆ ಎಂದು ಅದು ಹೇಳಿತ್ತು. ಬಿಜೆಪಿ ಹೊರತುಪಡಿಸಿದ ರಾಜಕೀಯ ಪಕ್ಷಗಳ ಪ್ರಾತಿನಿಧ್ಯ ಇರುವ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಮೀಸಲಾತಿ ಕಲ್ಪಿಸಲಾಗಿದೆ ಎಂದು ಅದು ಹೇಳಿತ್ತು. 'ನಿರ್ದಿಷ್ಟ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ಬಹುತೇಕ ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲು ಇರಿಸಿರುವುದರಿಂದ ಮಹಿಳೆಯರ ಸಂಖ್ಯೆ ಹೆಚ್ಚಿರುವ ಇತರ ಕ್ಷೇತ್ರಗಳ ವ್ಯಾಪ್ತಿಯ ವಾರ್ಡ್‌ಗಳಿಗೆ ಸೇರಿದ ಮಹಿಳೆಯರಿಗೆ ರಾಜಕೀಯ ಅವಕಾಶ ನಿರಾಕರಿಸಿದಂತೆ ಆಗುತ್ತದೆ. ಇದು ತಾರತಮ್ಯದಿಂದ ಕೂಡಿದೆ, ಇದು ಮನಸೋಇಚ್ಛೆ ಕೈಗೊಂಡ ತೀರ್ಮಾನದಂತಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಪ್ರಮಾಣಾನುಗತ ಪ್ರಾತಿನಿಧ್ಯ ನೀಡಲು ಅವರಿಗೆ ವಾರ್ಡ್‌ವಾರು ಮೀಸಲಾತಿಯನ್ನು ಕೂಡ ಪ್ರಮಾಣಾನುಗತವಾಗಿ ನೀಡುವುದು ಸೂಕ್ತ' ಎಂದು ಕೋರ್ಟ್ ಹೇಳಿತ್ತು.



ಈ ಚುನಾವಣೆಯನ್ನು ಇನ್ನೂ ಮುಂದಕ್ಕೆ ತಳ್ಳುವುದು ಪ್ರಜಾತಂತ್ರಕ್ಕೆ ಮಾಡುವ ಅಪಚಾರವಾಗುತ್ತದೆ

ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಇದೇ ಬಗೆಯ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್, ಚುನಾವಣೆ ಹೊಸಿಲಲ್ಲಿ ಇರುವಾಗ ರಾಜ್ಯಗಳು ಆ ಚುನಾವಣೆಯನ್ನು ಇನ್ನಷ್ಟು ವಿಳಂಬ ಮಾಡಲು ಮರುವಿಂಗಡಣೆ ಅಥವಾ ಹೊಸ ವಾರ್ಡ್‌ಗಳ ರಚನೆಯಂತಹ ಕಾರಣಗಳನ್ನು ನೀಡುವಂತಿಲ್ಲ ಎಂದು ಹೇಳಿದೆ. ಸಾಂವಿಧಾನಿಕ ಆಶಯಗಳನ್ನು ಉಲ್ಲಂಘಿಸಲು ಅವಕಾಶ ಇಲ್ಲ ಎಂದು ಹೇಳಿದ್ದ ಸುಪ್ರೀಂ ಕೋರ್ಟ್, ರಾಜ್ಯಗಳು ಚುನಾವಣೆಗಳನ್ನು ನಿಗದಿತ ವೇಳಾಪಟ್ಟಿಗೆ ಅನುಗುಣವಾಗಿ ನಡೆಸಲೇಬೇಕು ಎಂದು ಸ್ಪಷ್ಟಪಡಿಸಿತ್ತು. ಅಗತ್ಯ ಕಂಡುಬಂದರೆ, ಸ್ಥಳೀಯ ಸಂಸ್ಥೆಗಳ ಅವಧಿ ಪೂರ್ಣಗೊಳ್ಳುವ ಸಂದರ್ಭದಲ್ಲಿ ಅಸ್ತಿತ್ವದಲ್ಲಿ ಇದ್ದ ಮೀಸಲಾತಿ ಪಟ್ಟಿಯನ್ನೇ ಬಳಸಿಕೊಂಡು ಚುನಾವಣೆಯನ್ನು ನಡೆಸಬೇಕು ಎಂದು ಹೇಳಿತ್ತು. 2020ರ ಸೆಪ್ಟೆಂಬರ್ ತಿಂಗಳಿನಿಂದ ಬಿಬಿಎಂಪಿಯಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲ. ರಾಜ್ಯ ಸರ್ಕಾರವು ಒಂದಲ್ಲ ಒಂದು ಕಾರಣ ಹೇಳುತ್ತ ಚುನಾವಣೆಯನ್ನು ಮುಂದಕ್ಕೆ ತಳ್ಳುತ್ತ ಬಂದಿದೆ. ಇನ್ನು ಆರು ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಬೇಕಿದೆ. ಬಿಬಿಎಂಪಿ ಚುನಾವಣಾ ಫಲಿತಾಂಶವು ವಿಧಾನಸಭಾ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರಬಹುದು ಎಂಬ ಆತಂಕದಿಂದಾಗಿ ಆಡಳಿತಾರೂಢ ಬಿಜೆಪಿಗೂ ವಿರೋಧ ಪಕ್ಷಗಳಿಗೂ ಬಿಬಿಎಂಪಿ ಚುನಾವಣೆ ಈಗ ನಡೆಯುವುದು ಬೇಕಿಲ್ಲ ಎಂಬಂತೆ ಭಾಸವಾಗುತ್ತಿದೆ. ಬೆಂಗಳೂರು ನಗರದಲ್ಲಿ ಈಗ ಶಾಸಕರಿಗೆ, ಅದರಲ್ಲೂ ಮುಖ್ಯವಾಗಿ ಸಚಿವರಿಗೆ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಂತಿದೆ. ಆದರೆ, ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬಂದರೆ ತಮಗೆ ಒಂದಿಷ್ಟು ತೊಡಕು ಉಂಟಾಗಬಹುದು ಎಂದು ಅವರು ಭಾವಿಸಿರಬಹುದು. ರಾಜಕೀಯ ಪಕ್ಷಗಳ ಲೆಕ್ಕಾಚಾರಗಳು ನ್ಯಾಯಾಲಯಗಳಿಗೆ ತಿಳಿಯದಿರುವುದೇನೂ ಅಲ್ಲ. ಬಿಬಿಎಂಪಿಗೆ ನಡೆಯಬೇಕಿರುವ ಚುನಾವಣೆಯನ್ನು ಇನ್ನೂ ಮುಂದಕ್ಕೆ ತಳ್ಳುವುದು ಪ್ರಜಾತಂತ್ರಕ್ಕೆ ಮಾಡುವ ಅಪಚಾರವಾಗುತ್ತದೆ. ಆ ರೀತಿ ಆಗಲು ಯಾರೂ ಅವಕಾಶ ಮಾಡಿಕೊಡಬಾರದು. ಕೌನ್ಸಿಲ್‌ಗೆ ಚುನಾವಣೆ ನಡೆಸಬೇಕು. ನಗರದ ಜನರಿಗೆ ತಮ್ಮ ಅಳಲು ಹೇಳಿಕೊಳ್ಳಲು, ಪರಿಹಾರ ಪಡೆದುಕೊಳ್ಳಲು ಹೊಣೆಯರಿತ ವ್ಯಕ್ತಿಯೊಬ್ಬರು ತಮ್ಮ ವಾರ್ಡ್‌ನಲ್ಲೇ ಸಿಗುವಂತೆ ಆಗಬೇಕು.

ದಿನದ ಟ್ವೀಟ್



ಸೊಗಸಾದ ಆಟ

ಬಲಿಷ್ಠ ಜರ್ಮನಿಯನ್ನು ಜಪಾನ್ ಸೋಲಿಸಿತು. ಆದರೆ ಜಪಾನ್ ಅನ್ನು ಪುಟ್ಟ ಕೋಸ್ಟರಿಕಾ ಮಣಿಸಿತು. ಫಿಫಾ ವರ್ಲ್ಡ್ ಕಪ್- 2022 ಅನಿರೀಕ್ಷಿತ ಫಲಿತಾಂಶಗಳಿಂದ ಕೂಡಿದೆ... ಮತ್ತು ಹೆಚ್ಚು ಸ್ಪರ್ಧಾತ್ಮಕವಾಗುತ್ತಿದೆ. ಅತ್ಯಂತ ಸೊಗಸಾಗಿದೆ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಕೇಂದ್ರ ಕಾನೂನು ಸಚಿವರು ನ್ಯಾಯಾಂಗದ ವಿರುದ್ಧ ಆಡಿದ ಮಾತುಗಳನ್ನು ನಾವು ಪಕ್ಕಕ್ಕೆ ತಳ್ಳಬಹುದು. ಅಥವಾ ಅವು ಹೇಳುವುದು ಏನು ಎಂಬುದನ್ನು ನೋಡಬಹುದು. ಸಚಿವರ ನಡೆಯು ನ್ಯಾಯಾಂಗದ ತೀರ್ಮಾನಗಳನ್ನು ಸಾರ್ವಜನಿಕರ ಕಣ್ಣಿನಲ್ಲಿ ನಿಧಾನವಾಗಿ ಅಪಮೌಲ್ಯಗೊಳಿಸುವ ಜಾಣ ಕಾರ್ಯತಂತ್ರ. ಡಿ.ವೈ.ಸಿ. (ಚಂದ್ರಚೂಡ್) ಅವರ ಅವಧಿಯಲ್ಲಿ ತನಗೆ ಇಷ್ಟವಾಗುವ ತೀರ್ಮಾನಗಳು ಹೆಚ್ಚು ಬರಲಿಕ್ಕಿಲ್ಲ ಎಂಬುದು ಸರ್ಕಾರಕ್ಕೆ ಗೊತ್ತಿದೆ.

ರಾಧಿಕಾ ರಾಯ್, ವಕೀಲೆ

25 ವರ್ಷಗಳ ಹಿಂದೆ

ಶುಕ್ರವಾರ, 28-11-1997

● 'ಗಡಿ: ಮಹಾಜನ ವರದಿ ಪರಿಧಿಯೊಳಗೆ ಮಾತ್ರ ಚರ್ಚೆ'

ಬೆಂಗಳೂರು, ನವೆಂಬರ್ 27– ಕರ್ನಾಟಕ–ಮಹಾರಾಷ್ಟ್ರ ನಡುವಿನ ಗಡಿ ವಿವಾದದ ಬಗ್ಗೆ ಮಹಾಜನ ವರದಿ ಪರಿಧಿಯೊಳಗೆ ಮಾತ್ರ ಚರ್ಚಿಸುವುದಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ್ ಜೋಷಿ ಅವರಿಗೆ ಹೇಳಿದುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಮುಂಬೈನಿಂದ ಹಿಂದಿರುಗಿದ ಅವರು ಸುದ್ದಿಗಾರರ ಜತೆಗೆ ಮಾತನಾಡುತ್ತಾ, 'ಮಂಗಳವಾರ ಜೋಷಿ ಅವರೊಂದಿಗೆ ಚರ್ಚಿಸಿದ ಸಂದರ್ಭದಲ್ಲಿ, ಉಭಯ ರಾಜ್ಯಗಳ ನಡುವಿನ ಗಡಿ ಹಾಗೂ ಜಲ ವಿವಾದಗಳು ಸುವರ್ಣ ಸ್ವಾತಂತ್ರ್ಯೋತ್ಸವ ವರ್ಷದ ಅಂತ್ಯದ ಒಳಗೆ ಬಗೆಹರಿಯಬೇಕು ಎಂದು ಅವರು ಬಯಸುತ್ತಿದ್ದಾರೆ' ಎಂದರು.

● ರಾಣೆಬೆನ್ನೂರು ಬಳಿ ಬಸ್ ಹಳ್ಳಕ್ಕೆ ಬಿದ್ದು 34 ಸಾವು

ದಾವಣಗೆರೆ, ನವೆಂಬರ್ 27– ರಾಣೆಬೆನ್ನೂರು ತಾಲ್ಲೂಕಿನ ಹಲಗೇರಿ ಬಳಿ ಇಂದು ರಾತ್ರಿ ಬಸ್ಸೊಂದು ತುಂಬಿ ಹರಿಯುತ್ತಿದ್ದ ಹಳ್ಳಕ್ಕೆ ಬಿದ್ದು, ಪ್ರವಾಹದಲ್ಲಿ ಕೊಚ್ಚಿ ಹೋಗಿ ಕನಿಷ್ಠ 34 ಮಂದಿ ಮೃತಪಟ್ಟಿದ್ದಾರೆ. ಸತ್ತವರಲ್ಲಿ 14 ಮಂದಿ ಮಹಿಳೆಯರು ಹಾಗೂ ಏಳು ಮಕ್ಕಳು ಸೇರಿದ್ದಾರೆ.

ಸುಮಾರು 35 ಗಾಯಾಳುಗಳನ್ನು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಸೇರಿಸಲಾಗಿದೆ. ಗಾಯಾಳುಗಳ ಪೈಕಿ ನಾಲ್ಕು ಜನರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಮಂಗಳವಾರ, 28-11-1972

● ಶುಕ್ರವಾರ ಎಲ್ಲ ಭಾರತೀಯ ಯುದ್ಧ ಬಂದಿಗಳ ಬಿಡುಗಡೆ

ನವದೆಹಲಿ, ನವೆಂಬರ್ 27– ಆರುನೂರ ಹದಿನೇಳು ಮಂದಿ ಭಾರತೀಯ ಯುದ್ಧ ಬಂದಿಗಳನ್ನು ಶುಕ್ರವಾರ ಬಿಡುಗಡೆ ಮಾಡಿ ತನ್ನ ಗಡಿಯಾಚೆ ಭಾರತಕ್ಕೆ ಕಳುಹಿಸಲಾಗುವುದೆಂದು ಪಾಕಿಸ್ತಾನ ಇಂದು ಪ್ರಕಟಿಸಿತು.

ಭಾರತೀಯ ಯುದ್ಧ ಬಂದಿಗಳ ಬಿಡುಗಡೆ ನಿರ್ಧಾರವನ್ನು ಇಸ್ಲಾಮಾಬಾದಿನಲ್ಲಿರುವ ಸ್ವಿಸ್ ರಾಯಭಾರಿ ಮೂಲಕ ದೆಹಲಿಗೆ ತಿಳಿಸಲಾಗಿದೆಯೆಂದು ರೇಡಿಯೊ ಪಾಕಿಸ್ತಾನ್ ಪ್ರಸಾರ ಮಾಡಿದೆ.

● 'ಹಾಸನ– ಮಂಗಳೂರು ನಡುವೆ ಬ್ರಾಡ್‌ಗೇಜ್ ಪರಿಶೀಲನೆಯಲ್ಲಿ'

ನವದೆಹಲಿ, ನವೆಂಬರ್ 27– ಹಾಸನದಿಂದ ಮಂಗಳೂರುವರೆಗೆ ಬ್ರಾಡ್‌ಗೇಜ್ ರೈಲು ಮಾರ್ಗ ನಿರ್ಮಾಣದ ಪ್ರಶ್ನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ರೈಲ್ವೆ ಖಾತೆ ಉಪಸಚಿವ ಮಹಮದ್ ಶಫಿ ಖುರೇಷಿ ಅವರು ಇಂದು ರಾಜ್ಯ ಸಭೆಯಲ್ಲಿ ಡಾ. ಕೆ. ನಾಗಪ್ಪ ಆಳ್ವ ಅವರಿಗೆ ತಿಳಿಸಿದರು.

ಅದನ್ನು ಬ್ರಾಡ್‌ಗೇಜಾಗಿ ಪರಿವರ್ತಿಸಲು ಕೂಡಲೇ ನಿರ್ಧಾರ ತೆಗೆದುಕೊಳ್ಳಬಾರದೇಕೆ ಎಂಬ ಸದಸ್ಯರ ಪ್ರಶ್ನೆಗೆ ಸಚಿವರು, ಸದ್ಯದಲ್ಲಿ ನಿರ್ಮಿಸುತ್ತಿರುವ ಮೀಟರ್ ಗೇಜ್ ಮಾರ್ಗ 1974ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆಯೆಂದೂ, ಅದನ್ನು ಬ್ರಾಡ್‌ಗೇಜಾಗಿ ಪರಿವರ್ತಿಸಲು ನಿರ್ಧರಿಸುವುದಕ್ಕೆ ಮುನ್ನ ಅದರ ಆರ್ಥಿಕ ಪರಿಸ್ಥಿತಿಯನ್ನು ಸ್ಥಿರಪಡಿಸಿಕೊಂಡಿರಬೇಕೆಂದೂ ಹೇಳಿದರು.

ಹೊಸ ಶಿಕ್ಷಣ ನೀತಿಯ ಉದಾತ್ತ ಧ್ಯೇಯದ ಸಾಧನೆಗೆ ಶಿಕ್ಷಣ ವ್ಯವಸ್ಥೆ ಸನ್ನದ್ಧಗೊಳ್ಳಲಿ

ಶಿಕ್ಷಣ ನೀತಿ: ಬೇಕು ಗುಣಾತ್ಮಕ ಸಿದ್ಧತೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

2020ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಅನುಷ್ಠಾನಗೊಳಿಸಬೇಕಾದಂತಹ ಸಂದರ್ಭದಲ್ಲಿ, ಶಾಲೆಗಳಿಗೆ ಬಣ್ಣ ಹೊಡೆಸುವ ವಿಷಯದ ಕುರಿತಾಗಿ ಚರ್ಚೆಗಳು ನಡೆಯುತ್ತಿವೆ. ಖಂಡಿತವಾಗಿಯೂ ಶಾಲೆಗಳಿಗೆ ಬಣ್ಣ, ಸುರಕ್ಷತೆ, ಶೌಚಾಲಯದಂತಹ ಮೂಲ ಸೌಕರ್ಯಗಳ ಅಗತ್ಯವಿದೆ. ಕೊರತೆ ಇರುವ ಹುದ್ದೆಗಳಿಗೆ ಸಿಬ್ಬಂದಿಯ ನೇಮಕಾತಿಯಂತಹ ಆಡಳಿತಾತ್ಮಕ ಸಿದ್ಧತೆಗಳ ಅಗತ್ಯವೂ ಇದೆ. ಆದರೆ ಗುಣಾತ್ಮಕವಾದ ಅಗತ್ಯಗಳು ಸುಲಭದಲ್ಲಿ ಅರಿವಿಗೆ ಬರುವುದಿಲ್ಲ. ಉದಾಹರಣೆಗೆ, 2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಧ್ಯೇಯಗಳಲ್ಲಿ ವಾರ್ಷಿಕ ಪರೀಕ್ಷೆಯ ರೂಪದಲ್ಲಿರುವ ಮೌಲ್ಯಮಾಪನದ ಮಹತ್ವ ಕಡಿಮೆಯಾಗಬೇಕು. ಮಗುವಿನ ಅಭಿವ್ಯಕ್ತಿಯ ಸಾಮರ್ಥ್ಯ, ವರ್ತನೆ, ಗ್ರಹಿಸುವ ಶಕ್ತಿ, ಚಿಂತನೆಯ ಮಟ್ಟ ಗಳೆಲ್ಲವನ್ನೂ ಅಳೆಯುವ ರೂಪಣಾತ್ಮಕ ಮೌಲ್ಯಮಾಪನವು ಹೆಚ್ಚಾಗಬೇಕು ಎನ್ನುವುದು ಸೇರಿದೆ. ಸಮರ್ಥ ಪೌರರನ್ನು ರೂಪಿಸಲು ಇದು ಅಗತ್ಯವೂ ಹೌದು. ಇದೆಲ್ಲ ಆಗಬೇಕಾದರೆ ಗುಣಾತ್ಮಕ ಸಿದ್ಧತೆಗಳು ಅಗತ್ಯ.

ಸರ್ವ ಸಮಾನತೆ ಭಾವನೆಯ ಶಿಕ್ಷಣವನ್ನು ಪಡೆಯುವ ಉದಾತ್ತ ಧ್ಯೇಯವನ್ನು ಹೊಸ ಶಿಕ್ಷಣ ನೀತಿಯು ಹೇಳುತ್ತದೆ. ಆದರೆ ಆ ರೀತಿಯ ಶಿಕ್ಷಣವನ್ನು ನೀಡಬೇಕಾದರೆ ಆಗಬೇಕಾದ ಪೂರ್ವಸಿದ್ಧತೆಗಳು ಮೂಲ ಸೌಕರ್ಯ ಅಥವಾ ಆಡಳಿತಾತ್ಮಕವಾಗಿ ಇದ್ದರಷ್ಟೇ ಸಾಲುವುದಿಲ್ಲ. ಶಿಕ್ಷಣದಲ್ಲಿ ಪ್ರಮುಖ ಪಾತ್ರ ವಹಿಸುವ ಪಾಲಕರು, ಶಿಕ್ಷಕರು ಮತ್ತು ಶೈಕ್ಷಣಿಕ ಆಡಳಿತದ ಮನೋಧರ್ಮದಲ್ಲೇ ಉನ್ನತೀಕರಣ ಆಗಬೇಕಾಗುತ್ತದೆ. ಸಮಾನತೆಯು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವ ಸಾಮರ್ಥ್ಯದ ವ್ಯತ್ಯಾಸವನ್ನು ನಿರಾಕರಿಸಲು ಬರುವುದಿಲ್ಲ. ಇದನ್ನು ಶಿಕ್ಷಣ ನೀತಿಯೂ ಗಮನಿಸಿದ್ದು, ಸಾಮರ್ಥ್ಯ ಆಧಾರಿತವಾದ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಒತ್ತು ಕೊಟ್ಟಿದೆ. ಈಗಿನ ಪರೀಕ್ಷಾ ಕ್ರಮದ ದೋಷವನ್ನು ಗುರುತಿಸಿದ್ದು, ರೂಪಣಾತ್ಮಕವಾದ ಮೌಲ್ಯಮಾಪನವನ್ನು ಜಾರಿಗೆ ತರಲು ಬಯಸಿದೆ.

ಆದರೆ, ತಾತ್ವಿಕವಾಗಿ ಹೇಗೇ ವಿವರಿಸಿಕೊಂಡರೂ ಸರ್ವ ಶಿಕ್ಷಣ ಅಭಿಯಾನ ಬಂದ ನಂತರ ಪರೀಕ್ಷೆಯು ಅದಕ್ಕಿಂತ ಹಿಂದೆ ಇದ್ದ ಪರಿಸ್ಥಿತಿಗಿಂತ ಬಲಿಷ್ಠವಾಗಿದ್ದು, ಅಂಕ ಗಳಿಕೆಗೆ ಬಹಳ ಮಹತ್ವ ಬಂದಿದೆ. ಸರ್ವ ಶಿಕ್ಷಣ ಅಭಿಯಾನಕ್ಕಿಂತ ಮೊದಲು, ಪರೀಕ್ಷೆಯಲ್ಲಿ ಒಂದೆರಡು ಅಂಕಗಳು ಕಡಿಮೆಯಾದರೂ, ಅದು ಬಹಳ ಅವಮಾನಕಾರಿ ಎಂಬ ಸಾಮಾಜಿಕ ಮನೋಭಾವವಾಗಲಿ, ಜಿಲ್ಲಾವಾರು ಫಲಿತಾಂಶದ ಏರುಪೇರಿಗೆ ಇಡೀ ಜಿಲ್ಲೆಯನ್ನೇ ಮೂದಲಿಸುವ ಪರಿಪಾಟವಾಗಲಿ ಇರಲಿಲ್ಲ. ಪಠ್ಯಪುಸ್ತಕದ ಅಭ್ಯಾಸ ಮಾಡಬೇಕಾಗಿತ್ತು. ತರಗತಿಗೆ 'ಗೈಡ್'ಗಳನ್ನು ಕೊಂಡೊಯ್ಯಬಾರದೆಂಬ ನಿಯಮವಿತ್ತು. ಪರೀಕ್ಷೆಗಳು ವಿದ್ಯಾರ್ಥಿಗಳ ವಿಕಾಸಕ್ಕೆ ಸೂಕ್ತವಾಗಿಲ್ಲ ಎಂದು ಶಿಕ್ಷಣ ನೀತಿಯಲ್ಲಿ ಗುರುತಿಸಲ್ಪಟ್ಟ ನಂತರ ಶಿಕ್ಷಣ ನೀತಿಗೆ ತದ್ವಿರುದ್ಧವಾಗಿ ಪರೀಕ್ಷೆಗೆ ಅತಿಯಾದ ಮಹತ್ವ ಬಂದಿದೆ. ಪಠ್ಯಗಳ ಪ್ರಾಮುಖ್ಯ ಕಡಿಮೆಯಾಗಿ ಗೈಡ್‌ಗಳು, ಪ್ರಶ್ನೋತ್ತರಗಳು, ಪ್ರಶ್ನೆಕೋಠಿಗಳಂತಹ ಕೋಚಿಂಗ್‌ನ ರೀತಿಯ ಸಾಧನಗಳೇ ಶಿಕ್ಷಣವನ್ನು ಆಳುತ್ತಿವೆ ಮತ್ತು ಈ ಪದ್ಧತಿಯನ್ನು ಇಡೀ ವ್ಯವಸ್ಥೆ ಒಪ್ಪಿಕೊಂಡುಬಿಟ್ಟದೆ!

ಶಿಕ್ಷಣ ನೀತಿಯು ಕೋಚಿಂಗ್‌ನಂತಹ ಪದ್ಧತಿಗಳನ್ನು ತೊಡೆದುಹಾಕಲು, ಪರೀಕ್ಷೆಗಳ ಮಹತ್ವವನ್ನು ಕುಗ್ಗಿಸಿ ವಿದ್ಯಾರ್ಥಿಗಳ ಸಾಮರ್ಥ್ಯ ವರ್ಧನೆಗೆ ಸಹಾಯಕವಾದ ರೂಪಣಾತ್ಮಕ ಮೌಲ್ಯಮಾಪನಕ್ಕೆ ಮಹತ್ವ ಕೊಟ್ಟಿದೆ. ಹಾಗಿರುವಾಗ ಇಡೀ ವ್ಯವಸ್ಥೆಯನ್ನು ರೂಪಣಾತ್ಮಕ ಮೌಲ್ಯಮಾಪನವನ್ನು ಸ್ವೀಕರಿಸುವ ಮನಃಸ್ಥಿತಿಗೆ ಸಜ್ಜುಗೊಳಿಸಬೇಕು. ಕಲಿಕೆಯಲ್ಲಿ ಅಂಕಗಳಿಗಿಂತ ಕಲಿಕೆಯಲ್ಲಿ ತೊಡಗುವ ಪ್ರಕ್ರಿಯೆಯಲ್ಲಿ ತೋರಿಸುವ ದಕ್ಷತೆ ಮುಖ್ಯವಾಗಿದೆ ಎನ್ನುವುದನ್ನು ಅರ್ಥ ಮಾಡಿಸುವುದು ಸುಲಭದ ವಿಷಯವಲ್ಲ.


ಎರಡನೆಯದಾಗಿ, ರೂಪಣಾತ್ಮಕ ಮೌಲ್ಯಮಾಪನದಲ್ಲಿ ಶಿಕ್ಷಕರ ವೈಯಕ್ತಿಕ ಸಾಮರ್ಥ್ಯ, ದಕ್ಷತೆ, ದೃಷ್ಟಿಕೋನ, ವಿದ್ಯಾರ್ಥಿಯನ್ನು ಅರ್ಥ ಮಾಡಿಕೊಳ್ಳುವ ರೀತಿಗಳೆಲ್ಲವೂ ಮಹತ್ವ ಪಡೆಯುತ್ತವೆ. ಇಲ್ಲಿ ಸಾರ್ವತ್ರಿಕ ಮಾನದಂಡದಲ್ಲಿ ಮೌಲ್ಯಮಾಪನ ನಡೆಯುವುದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಯ ವೈಯಕ್ತಿಕತೆಯನ್ನು ಗಮನದಲ್ಲಿ ಇರಿಸಿಕೊಂಡೇ ಮೌಲ್ಯಮಾಪನವನ್ನು ಮಾಡಬೇಕು. ಈ ಪದ್ಧತಿಗೆ ಶಿಕ್ಷಕರು ಸಿದ್ಧಗೊಳ್ಳಬೇಕು. ಅಷ್ಟು ಮಾತ್ರ ಅಲ್ಲ, ಈ ಪದ್ಧತಿ ಯಶಸ್ವಿಯಾಗಬೇಕಾದರೆ ಶಿಕ್ಷಕರಿಗೆ ಬಹಳಷ್ಟು ನಿರಾಳತೆ ಇರಬೇಕು. ಕಲಿಕಾ ಪ್ರಕ್ರಿಯೆಯಲ್ಲೇ ಶಿಕ್ಷಕರು ಪೂರ್ಣವಾಗಿ ತೊಡಗಿಕೊಳ್ಳುವಂತೆ ಆಗಬೇಕು. ಎಂಟು ಶಿಕ್ಷಕರು ಇರಬೇಕಾದ ಶಾಲೆಗೆ ನಾಲ್ವರು ಶಿಕ್ಷಕರನ್ನು ಇರಿಸಿಕೊಂಡು, ಆಡಳಿತಾತ್ಮಕ ಕೆಲಸಗಳನ್ನೆಲ್ಲ ಶಿಕ್ಷಕರ ತಲೆಗೆ ಹೊರಿಸಿ ರೂಪಣಾತ್ಮಕ ಮೌಲ್ಯಮಾಪನದ ಯಶಸ್ಸನ್ನು ಬಯಸಿದರೆ, ಏನನ್ನೂ ಮಾಡದೆಯೇ ದಾಖಲೆಯನ್ನು ಒದಗಿಸುವುದು ಕೂಡ ಈ ಬಗೆಯ ಮೌಲ್ಯಮಾಪನದಲ್ಲಿ ಸುಲಭವಾಗುತ್ತದೆ. ಶಿಕ್ಷಕರಿಗೆ ಜ್ಞಾನ ಇರಬೇಕು. ಕೆಲಸ ಮಾಡುವ ಮನಸ್ಸು, ಬೇಕಾದ ಔದ್ಯೋಗಿಕ ಪರಿಸರ, ಕೆಲಸ ಮಾಡಲು ಬೇಕಾದಷ್ಟು ಸಮಯ ಮೂರೂ ಇದ್ದಾಗ ಸಾಮರ್ಥ್ಯ ಆಧಾರಿತ ಕಲಿಕೆ ಯಶಸ್ಸು ಪಡೆಯುತ್ತದೆ. ಇದಕ್ಕೆ ಸೂಕ್ತವಾಗುವಂತೆ ಶಿಕ್ಷಣ ವ್ಯವಸ್ಥೆಯನ್ನು ಸನ್ನದ್ಧಗೊಳಿಸಬೇಕು.

ಹೊಸ ಶಿಕ್ಷಣ ನೀತಿಯು ಮಗುವಿಗೆ ಮೂರು ವರ್ಷವಾಗುವಾಗ ಪೂರ್ವ ಪ್ರಾಥಮಿಕ ಹಂತವನ್ನು ಪ್ರಾರಂಭಿಸುತ್ತದೆ. ಅಂದರೆ ಅಂಗನವಾಡಿಯ ಮೂಲ ಸೌಕರ್ಯಗಳು, ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ, ಸೌಲಭ್ಯ, ಮಕ್ಕಳ ನಿರ್ವಹಣಾ ಜ್ಞಾನದ ಮಟ್ಟ ಮೂರನ್ನೂ ಉನ್ನತೀಕರಿಸಬೇಕಾಗುತ್ತದೆ. ಒಂದು ವಾರದ ತರಬೇತಿಯಲ್ಲಿ ಇದೆಲ್ಲ ಆಗುವುದಿಲ್ಲ. ಎರಡು-ಮೂರು ವರ್ಷಗಳ ಆಡಳಿತಾತ್ಮಕ, ಭೌತಿಕ ಮತ್ತು ಬೌದ್ಧಿಕ ಸಿದ್ಧತೆ ಆಗಬೇಕಾಗುತ್ತದೆ.

ತಂತ್ರಜ್ಞಾನದ ಅಳವಡಿಸುವಿಕೆ ಮತ್ತು ಸಂವಹನ ಸಾಮರ್ಥ್ಯದ ದಕ್ಷತೆಯ ಹೆಚ್ಚಳ ವ್ಯಾಪಕವಾಗಿ ಆಗಬೇಕು ಎನ್ನುತ್ತದೆ ಶಿಕ್ಷಣ ನೀತಿ. ಇಂದಿನ ದಿನಗಳಲ್ಲಿ ತಂತ್ರಜ್ಞಾನವೂ ಒಂದು ಪ್ರಭಾವಶಾಲಿ ಸಂವಹನ ಪದ್ಧತಿಯಾಗಿದೆ. ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸುವುದನ್ನು ಸಿಬ್ಬಂದಿಗೆ ಮತ್ತು ವಿದ್ಯಾರ್ಥಿಗಳಿಗೆ ಕಲಿಸುವ ಸಿಬ್ಬಂದಿ ಬೇಕಾಗುತ್ತದೆ. ಸಂವಹನ ಸಾಮರ್ಥ್ಯದ ದಕ್ಷತೆಯ ಹೆಚ್ಚಳವು ಬಲು ಸೂಕ್ಷ್ಮವಾದ ಅನೇಕ ಶೈಕ್ಷಣಿಕ ಅಂಶಗಳನ್ನು ಹೊಂದಿದೆ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಕೆಲವು ಅಂಕಗಳು ಕಡಿಮೆ ಬಂದರೆ ಅಥವಾ ಅನುತ್ತೀರ್ಣಗೊಂಡರೆ ಅದು ವಿದ್ಯಾರ್ಥಿಯ ವಿಷಯ ಜ್ಞಾನದ ಕೊರತೆಯನ್ನು ಸೂಚಿಸುವುದಿಲ್ಲ. ಇರುವ ಜ್ಞಾನವನ್ನು, ಪ್ರಶ್ನೆಯು ಬಯಸುವ ರೀತಿಯಲ್ಲಿ ಅಕ್ಷರಗಳ ಸಂಕೇತದ ಮೂಲಕ ಹೇಳಲು ಸಾಧ್ಯವಾಗಲಿಲ್ಲ ಎನ್ನುವುದನ್ನಷ್ಟೇ ಸೂಚಿಸುತ್ತದೆ. ಅಂದರೆ ಅಲ್ಲಿ ಸಮಸ್ಯೆ ಇರುವುದು ಭಾಷೆಯನ್ನು ಬರಹ ರೂಪದಲ್ಲಿ ಅಭಿವ್ಯಕ್ತಪಡಿಸುವ ವಿಚಾರ ಮಾತ್ರ. ಜ್ಞಾನದ ಸಮಸ್ಯೆ ಅಲ್ಲ.

ಸಂವಹನ ಸಾಮರ್ಥ್ಯ ಎಂದಾಗ ಭಾಷೆ, ತಂತ್ರಜ್ಞಾನ, ಧ್ವನಿ, ಆಂಗಿಕ ಅಭಿವ್ಯಕ್ತಿ, ಭಾವಾಭಿವ್ಯಕ್ತಿ- ಹೀಗೆ ಹಲವು ಸಂಗತಿಗಳು ಒಳಗೊಳ್ಳುತ್ತವೆ. ಭವಿಷ್ಯದ ಭಾರತವನ್ನು ಜಾಗತಿಕ ಮಟ್ಟದಲ್ಲಿ ಸನ್ನದ್ಧಗೊಳಿಸಬೇಕಾದರೆ ಸರ್ವಾಂಗೀಣ ಸಂವಹನ ಸಾಮರ್ಥ್ಯ ಇರಬೇಕಾದ್ದನ್ನು ಶಿಕ್ಷಣ ನೀತಿಯು ಸಮರ್ಪಕವಾಗಿಯೇ ಅರ್ಥ ಮಾಡಿಕೊಂಡಿದೆ. ಆದರೆ ಅದು ಅನುಷ್ಠಾನಕ್ಕೆ ಬರಬೇಕಾದರೆ, ಭಾಷಾ ಪಠ್ಯದ ಪಠ್ಯಕ್ರಮ, ಪಠ್ಯವಸ್ತು, ಬೋಧನಾ ಪದ್ಧತಿ, ಮೌಲ್ಯಮಾಪನ ವಿಧಾನಗಳೆಲ್ಲದರಲ್ಲೂ ಪರಿಷ್ಕರಣೆ ಆಗಬೇಕಾಗುತ್ತದೆ. ಪಾಠ ಪುಸ್ತಕದ ಬಣ್ಣ ಯಾವುದಿರಬೇಕು ಎನ್ನುವ ಶೈಲಿಯ ವ್ಯರ್ಥಾಲಾಪದ ಚರ್ಚೆಗಳು ಶಿಕ್ಷಣಕ್ಕೆ ಯಾವ ಕೊಡುಗೆಯನ್ನೂ ಕೊಡುವುದಿಲ್ಲ. ಕನಿಷ್ಠಪಕ್ಷ ಶಿಕ್ಷಣದ ಕುರಿತ ಸರಿಯಾದ ದಿಕ್ಕಿನ ಸಾರ್ವಜನಿಕ ಚರ್ಚೆಯನ್ನಾದರೂ ಹುಟ್ಟು ಹಾಕಬೇಕಾದದ್ದು ಇಂದಿನ ತುರ್ತು ಅಗತ್ಯವಾಗಿದೆ.

2020ರ ಶಿಕ್ಷಣ ನೀತಿಯನ್ನು ಪದವಿ ಹಂತದಲ್ಲಿ ಜಾರಿಗೊಳಿಸಿದ್ದರ ಪರಿಣಾಮವಾಗಿ ಹುಟ್ಟಿಕೊಂಡಿರುವ ಸಮಸ್ಯೆ ಮತ್ತು ಸವಾಲುಗಳನ್ನು ನಿರ್ವಹಿಸಲು ಬೇಕಾದ ವ್ಯವಸ್ಥೆಯನ್ನೇ ಇನ್ನೂ ರೂಪಿಸಲು ಸಾಧ್ಯವಾಗಿಲ್ಲ. ಪದವಿಯ ವಿದ್ಯಾರ್ಥಿಗಳು ಯುವಕ ಯುವತಿಯರು. ಅವರೇ ಒಂದಷ್ಟು ನಿಭಾಯಿಸಿಕೊಳ್ಳಬಲ್ಲರು. ಆದರೆ ಮೂರು ವರ್ಷದ ಮಕ್ಕಳ ವಿಚಾರ ಹಾಗಲ್ಲ. ತಕ್ಕಷ್ಟು ಸಿದ್ಧತೆಗಳಾಗದೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತಂದರೆ ಇದ್ದದ್ದೂ ಇಲ್ಲದ ಹಾಗಾಗುವ ಸಾಧ್ಯತೆಯಿದೆ. ಆದ್ದರಿಂದ ಈ ದಿಸೆಯಲ್ಲಿ ಸಶಕ್ತ ಸಾರ್ವಜನಿಕ ಚರ್ಚೆ ವ್ಯಾಪಕವಾಗಿ ನಡೆದು ಅದರ ಆಧಾರದಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸಿದ್ಧತೆಗಳು ಆಗಬೇಕಾದ ಅಗತ್ಯವಿದೆ.



ಚುರುಮುರಿ



ಹೊಸ ತಿದ್ದುಪಡಿ

• ಸುಮಂಗಲಾ

'ಉಪ್ಪಾ ತಿಂದ ಮ್ಯಾಲೆ ನೀರಾ ಕುಡಿಯಲೇಬೇಕು ಲಂಚ ತಿಂದ ಮ್ಯಾಗೆ ಜೈಲಿಗೆ ಹೋಗಲೇಬೇಕು'.

ಬೆಕ್ಕಣ್ಣ ಹಳೆಯ 'ಕಾಲೇಜು ರಂಗ' ಸಿನಿಮಾದ ಹಾಡನ್ನು ರಾಗವಾಗಿ ಹಾಡುತ್ತಲೇ ಪೇಪರು ತೋರಿಸಿತು. ತಹಶೀಲ್ದಾರರೊಬ್ಬರು ಲಂಚ ತಿನ್ನುವಾಗ ಸಿಕ್ಕಿಬಿದ್ದು, ಮುಖ ಮುಚ್ಚಿಕೊಂಡು ಜೈಲಿಗೆ ಹೋದ ಸುದ್ದಿ ಇತ್ತು.

'ಜೈಲಿಗೆ ಹೋದ ಮ್ಯಾಲೆ ಮಸಾಜು ಮಾಡಿಸಿಕೋಬೇಕು, ಖುಷಿಯಾಗಿ ತಿಂದುಂಡು ಕಾಲ ಕಳಿಬೇಕು' ಎನ್ನುತ್ತ ನಾನು ದೆಹಲಿಯ ಎಎಪಿ ಮಂತ್ರಿಯೊಬ್ಬರು ತಿಹಾರ್ ಜೈಲಿನಲ್ಲಿಯೇ ಸಕಲೆಂಟು ಸವಲತ್ತು ಪಡೆಯುತ್ತ ಸುಖವಾಗಿರುವ ಸುದ್ದಿ ತೋರಿಸಿದೆ.

ಬೆಕ್ಕಣ್ಣ 'ಬರೋಬ್ಬರಿ ಅದ... ಅಂವಾ ಜೈಲೊಳಗ ಹೆಂಗ ಖುಷಿಯಾಗಿರಬಕು ಅಂತ ಹ್ಯಾಪಿ ಪಠ್ಯಕ್ರಮ ಬರೀಲಾಕಹತ್ಯಾನ' ಎಂದಿತು.

'ಎಲ್ಲಾರೂ ಹೊಸ ಪಠ್ಯಕ್ರಮ ಬರೀಯೋದ್ರಾಗೆ ಬಿಜಿಯಾಗ್ಯಾರಲೇ. ನೋಡಿಲ್ಲಿ ನಿಮ್ಮ ಶಾಣೇ ಅಂಕಲ್ಲು ಇತಿಹಾಸ ಪಾಠ ತಿದ್ದಿ ಬರೀತೀವಿ ಅಂದಾನ' ಎಂದೆ.

'ಹಿಂದಿನವರು ಇತಿಹಾಸ ತಿರುಚಿ ಬರೆದಿದ್ದನ್ನು ನಾವು ಪೂರಾ ಬಲಕ್ಕೆ ತಿರುಚಿ ತಿದ್ದುಪಡಿ ಮಾಡತೀವಿ ಅಂದಾನ ಅಂವ. ಕರೆಕ್ಟ್ ಅದ ಮತ್ತ... ಸೀದಾ ನೋಡೂದು ಯಾರಿಗೆ ಬೇಕಾಗೈತಿ?' ಬೆಕ್ಕಣ್ಣ ವಾದಿಸಿತು.

'ಅತ್ತ ಕಡೆ ಮಹಾಮರಾಠಿಗರು ಬರೀ ಇತಿಹಾಸ ಪಾಠ ಅಷ್ಟೇ ಅಲ್ಲ, ಭೂಗೋಳ ಪಾಠನೂ ತಿದ್ದುತೀವಿ, ಬೆಳಗಾವಿ, ನಿಪ್ಪಾಣಿ ಎಲ್ಲಾ ಸೇರಿಕೆಂಡು ಹೊಸ ಗಡಿರೇಖೆ ಎಳಿತೀವಿ ಅಂತ ಸಡ್ಡು ಹೊಡೆದಾರ. ಅಲ್ಲಿ ಶಿಂದೆ ಕಮಲ, ಇಲ್ಲಿ ಬೊಮ್ಮಾಯಿ ಕಮಲ, ದಿಲ್ಲಿವಳಗ ಮೋಶಾ ಕಮಲ, ಹಿಂಗ ತ್ರಿಬಲ್ ಎಂಜಿನ್ ಇದ್ದು ಏನುಪಯೋಗ, ಗಡಿ ಬೆಂಕಿ ಉರಿಯೂದು ತಪ್ಪಲಿಲ್ಲ'.

'ರಾಜ್ಯ- ಕೇಂದ್ರದ ವಿಚಾರದಾಗೆ ಮಾತ್ರ ಡಬಲ್ ಎಂಜಿನ್ ಕೆಲಸ ಮಾಡತೈತಿ. ಗಡಿ ವಿಚಾರದಾಗೆ ತ್ರಿಬಲ್ ಎಂಜಿನ್ ಲೆಕ್ಕಕ್ಕೇ ಬರಂಗಿಲ್ಲ. ಅವಗಾವಾಗ ಕೆಂಡ ಕೆದರಿ, ಗಡಿ ಬೆಂಕಿ ಉರಿಸಿ, ತಮ್ಮ ತಮ್ಮ ಬೇಳೆ ಬೇಯಿಸಿಕೊಂಡ್ರೇನೆ ಎಲ್ಲಾ ಪಕ್ಷಗಳಿಗೂ ಸಮಾಧಾನ' ಎನ್ನುತ್ತ ಬೆಕ್ಕಣ್ಣ ಪಕಪಕನೆ ನಕ್ಕಿತು.

ಸಂಗತ

ಪುಸ್ತಕದಿಂದ ಬಂದೀತೇ ಸಂವಿಧಾನದ ಅರಿವು?!

ಸಂವಿಧಾನದ ಪ್ರತಿಗಳನ್ನು ಗ್ರಂಥಾಲಯಗಳಿಗೆ ತಲುಪಿಸಿದ ಮಾತ್ರಕ್ಕೆ ಜನರಲ್ಲಿ ಸಂವಿಧಾನದ ಕುರಿತು ಜಾಗೃತಿ ಮೂಡುತ್ತದೆ ಎನ್ನಲಾಗದು

• ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ


'ಸಂವಿಧಾನದ ಕುರಿತು ಗ್ರಾಮೀಣ ಪ್ರದೇಶಗಳಲ್ಲಿಯೂ ಅರಿವು ಮೂಡಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳಿಗೆ ಸಂವಿಧಾನದ ಪ್ರತಿಗಳನ್ನು ಪೂರೈಸಲಾಗುವುದು' ಎಂದಿದ್ದಾರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ವಿಧಾನಸೌಧದ ಆವರಣದಲ್ಲಿ ಇದೇ 26ರಂದು ನಡೆದ 'ರಾಷ್ಟ್ರೀಯ ಸಂವಿಧಾನ ದಿನ'ದ ಆಚರಣೆಯ ಸಂದರ್ಭದಲ್ಲಿ ಅವರು ನಮ್ಮ ಸಂವಿಧಾನದ ಶ್ರೇಷ್ಠತೆಯ ಗುಣಗಾನ ಮಾಡಿದ್ದಾರೆ.

ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜನಜೀವನದ ಪ್ರತಿಯೊಂದು ಆಯಾಮವನ್ನೂ ರೂಪಿಸುವ, ಕಾಯುವ ಮತ್ತು ಆ ಕಾರಣಕ್ಕಾಗಿ ಪ್ರತಿಯೊಬ್ಬರೂ ಮೂಲಭೂತ ಅಂಶಗಳನ್ನಾದರೂ ತಿಳಿದಿರಬೇಕಾದ ಸಂವಿಧಾನದ ಪ್ರತಿಗಳು ಎಲ್ಲಿಯೂ ಲಭ್ಯವಿಲ್ಲ. ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವಾಲಯದ ನೆರವಿನೊಂದಿಗೆ 'ಭಾರತದ ಸಂವಿಧಾನ' ಇಂಗ್ಲಿಷ್- ಕನ್ನಡ ದ್ವಿಭಾಷಾ ಆವೃತ್ತಿಯು (14 ಜನವರಿ 2019ರಂದು ಇದ್ದಂತೆ) ಇತ್ತೀಚೆಗೆ ಪ್ರಕಟವಾಗಿದೆ. ಎ4 ಅಳತೆಯಲ್ಲಿರುವ 716 ಪುಟಗಳ ಈ ಬೃಹತ್ ಹೊತ್ತಿಗೆಯ ಎಷ್ಟು ಪ್ರತಿಗಳನ್ನು ಮುದ್ರಿಸಲಾಗಿದೆ, ಮಾರಾಟದ ಬೆಲೆ ಎಷ್ಟು, ಎಲ್ಲಿ ಲಭ್ಯ ಎಂಬಂಥ ಯಾವುದೇ ಮಾಹಿತಿ ಲಭ್ಯವಿಲ್ಲ. ಹೀಗಾಗಿ ನಾವು ಕೇಳಿದರೂ ಪುಸ್ತಕ ಮಾರಾಟಗಾರರು ಇದನ್ನು ತರಿಸಿ, ಮಾರುವ ಸಾಹಸಕ್ಕೆ ಕೈಹಾಕುವುದಿಲ್ಲ.

ನಾಗಾಭರಣ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ, ಸರ್ವ ಸದಸ್ಯರ ಸಭೆಯೊಂದರಲ್ಲಿ ಒಬ್ಬ ಸದಸ್ಯರು ಈ ಆವೃತ್ತಿಯ ಕನ್ನಡ ಪಠ್ಯವನ್ನು ಮಾತ್ರ ಪ್ರತ್ಯೇಕಿಸಿ, ಪ್ರಕಟಿಸಿ ಕಡಿಮೆ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಮಾಡಿದ ಪ್ರಸ್ತಾಪವನ್ನು ಇಡೀ ಸಭೆ ಸ್ವಾಗತಿಸಿತು. ಆದರೆ, ಅದನ್ನು ಕಾರ್ಯಗತಗೊಳಿಸುವುದು ಪ್ರಾಧಿಕಾರದ ಆದ್ಯತೆ ಆಗಲೇ ಇಲ್ಲ. ಇದೇ ರೀತಿ, ಸಂವಿಧಾನದ 'ಪ್ರಸ್ತಾವನೆ'ಯ ಕನ್ನಡ ಆವೃತ್ತಿಯ ಫೋಟೊವನ್ನು ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಹಾಕಿಸಬೇಕು, ಆ ಕಾರ್ಯ ವಿಧಾನಸೌಧದಿಂದಲೇ ಆರಂಭವಾಗಬೇಕು ಎಂದು ಶಿಫಾರಸು ಮಾಡಬೇಕೆಂದು ಇದೇ ಸದಸ್ಯರು ನೀಡಿದ್ದ ಪ್ರಸ್ತಾವವೂ ಅನುಮೋದನೆಗೊಂಡಿತು. ಆದರೂ, ವಿಧಾನಸೌಧದ ಕಚೇರಿಗಳ ಗೋಡೆಗಳಲ್ಲಿ ಸಂವಿಧಾನದ ಪ್ರಸ್ತಾವನೆಗೆ ಮಾತ್ರ ಈಗಲೂ ಜಾಗ ಸಿಕ್ಕಿಲ್ಲ.

ಸಂವಿಧಾನ ದಿನಾಚರಣೆಯ ಒಂದು ಭಾಗ ಎಂಬಂತೆ ನಡೆದ ಕಾರ್ಯಕ್ರಮದಲ್ಲಿ 'ಸಂವಿಧಾನದ ಪ್ರಕಾರವೇ ನಡೆದುಕೊಳ್ಳುವುದಾಗಿ' ಸಚಿವರು, ಅಧಿಕಾರಿಗಳು ಪ್ರಮಾಣವಚನ ಸ್ವೀಕರಿಸಿದರು ಎಂಬ ಸುದ್ದಿ ಇದೆ. ನಮ್ಮ ಜನಪ್ರತಿನಿಧಿಗಳು ಮತ್ತು ಅವರ ಅನುಯಾಯಿಗಳು ದೇಶದಲ್ಲಿ ನಡೆದುಕೊಳ್ಳುತ್ತಿರುವ ರೀತಿಯನ್ನು ಗಮನಿಸಿದರೆ, ಈ ತರಹದ ಸೋಗಿನ ಪ್ರಮಾಣವಚನಕ್ಕೆ ಏನಾದರೂ ಬೆಲೆಯಿದೆಯೇ ಎಂಬ ಅನುಮಾನ ಬರುತ್ತದೆ. ನಿಜವಾಗಿಯೂ ಸಂವಿಧಾನದ ಮೌಲ್ಯಗಳ ಅರಿವಿನ ತೀವ್ರ ಅಗತ್ಯವಿರುವುದು ಇವರಿಗೇ.

ಇನ್ನು, ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಸಂವಿಧಾನದ ಪ್ರತಿಗಳನ್ನು ಉಚಿತವಾಗಿ ಹಂಚುವುದರಿಂದ ಇನ್ನೊಂದಷ್ಟು ಕೋಟಿ ಹಣವನ್ನು ಸರ್ಕಾರ ವ್ಯರ್ಥ ಮಾಡಿದಂತೆಯೇ ಸರಿ. ಸಂವಿಧಾನದ ಮೂಲ ಪ್ರತಿಯನ್ನು ಓದಿದ್ದ ಯಾರಿಗಾದರೂ ಗೊತ್ತಾಗುತ್ತದೆ, ಕನ್ನಡದ ಆವೃತ್ತಿಯಲ್ಲಿಯೂ ಕನ್ನಡದವರಿಗೇ ಅದು ಓದಿಸಿಕೊಂಡು ಹೋಗುವಂತೆ ಇಲ್ಲ ಎಂಬುದು. ಅದರ ಅಡಿಟಿಪ್ಪಣಿಗಳು ಹಿಂದಿ ಆವೃತ್ತಿಯ ಯಥಾವತ್ ಅನುವಾದವಾಗಿರುವುದರಿಂದ ಎದ್ದು ಕಾಣುವ ಕೃತ್ರಿಮತೆ ಓದಿಗೆ ಅಡ್ಡಿಯನ್ನು ಉಂಟುಮಾಡುತ್ತದೆ. ಇದನ್ನು ಗಮನಿಸಿದ ಲಡಾಯಿ ಪ್ರಕಾಶನವು ಇದೀಗ 'ಸರಳ ಓದಿಗಾಗಿ ಸಂವಿಧಾನ' ಎಂಬ ಆವೃತ್ತಿಯನ್ನು ಪ್ರಕಟಿಸಿದೆ. ಕೊನೆಯ ಪಕ್ಷ ಇದಾದರೂ ಅಂಗಡಿಗಳಲ್ಲಿ ಲಭ್ಯವಾಗುತ್ತದೆ. ಹೀಗಾಗಿ, ಸರ್ಕಾರವು ಸಾಮಾನ್ಯ ಸುಶಿಕ್ಷಿತರೂ ಸುಗಮವಾಗಿ ಓದಿ ಅರ್ಥ ಮಾಡಿಕೊಳ್ಳಲು ಕಷ್ಟವಾಗುವ ಸಂವಿಧಾನದ ಪ್ರತಿಗಳು ಯಾರೂ ಓದದೇ ಕೊಳೆಯುವಂತೆ ಮಾಡುವ ಬದಲಿಗೆ, ಸಂವಿಧಾನದ ಮೂಲ ಆಶಯವಿರುವ ಪ್ರಸ್ತಾವನೆ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ಮತದಾನದ ಹಕ್ಕು, ಚುನಾವಣೆಗಳ ಮಹತ್ವದಂಥ, ಸಾರ್ವಜನಿಕರಿಗೆ ನೇರವಾಗಿ ಸಂಬಂಧಪಟ್ಟ ಭಾಗಗಳನ್ನು ಮಾತ್ರ ವಿವರಿಸಿ, ಉಳಿದ ಭಾಗಗಳ ಶೀರ್ಷಿಕೆ ಮತ್ತು ಸಾರಾಂಶವನ್ನಷ್ಟೇ ಕೊಡುವಂಥ ಅಧಿಕೃತ ಜನಪ್ರಿಯ ಆವೃತ್ತಿಗಳನ್ನು ಕಡಿಮೆ ಬೆಲೆಗೆ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಹೆಚ್ಚು ಉಪಯುಕ್ತವಾದೀತು.



ಸಂವಿಧಾನದ ಪ್ರತಿಗಳು ಲಭ್ಯವಿದ್ದ ಕೂಡಲೇ ಜನರಲ್ಲಿ ಸಂವಿಧಾನದ ಕುರಿತು ಜಾಗೃತಿ ಮೂಡುತ್ತದೆ ಎನ್ನುವುದೂ ತಪ್ಪುಗ್ರಹಿಕೆಯಾಗುತ್ತದೆ. ಮಹಾತ್ಮರು, ಸಾಧಕರ ಬಾನೆತ್ತರದ ಪ್ರತಿಮೆಗಳನ್ನು ನಿಲ್ಲಿಸುವ ಮೂಲಕ ಜನರಲ್ಲಿ ಅವರ ಗುಣಗಳು, ಬೋಧನೆಗಳು, ಮೌಲ್ಯಗಳು ಮೈಗೂಡುತ್ತವೆ ಎಂದು ಭಾವಿಸುವಂತೆಯೇ ಇದೂ ಆಗಿಬಿಡುತ್ತದೆ. ಬದಲಿಗೆ, ಜನಸಮುದಾಯಕ್ಕೆ ಸಂಗತವಾಗುವ ಹಾಗೆ ಸಂವಿಧಾನದ ಮೂಲ ಸಂದೇಶಗಳು, ಮೌಲ್ಯಗಳು, ಬಾಧ್ಯತೆಗಳು, ಕರ್ತವ್ಯಗಳ ಕುರಿತು ಮತ್ತು ಈ ಸಾಕ್ಷರತೆಯಿಂದ ಸಬಲಗೊಂಡು ಸರ್ಕಾರದಲ್ಲಿ, ಸಾರ್ವಜನಿಕ ಜೀವನದಲ್ಲಿ, ಕುಟುಂಬದಲ್ಲಿ ಹೇಗೆ ಸಾಂವಿಧಾನಿಕ ಮೌಲ್ಯಗಳ ಅರಿವು ಮತ್ತು ವರ್ತನೆಗಳನ್ನು ಅನುಷ್ಠಾನಕ್ಕೆ ತರಬೇಕು ಎನ್ನುವ ರೀತಿಯ ಸಹಭಾಗಿ ಕಾರ್ಯಶಿಬಿರಗಳನ್ನು, ಸಂವಹನಕಾರರ ಸಬಲೀಕರಣ ಶಿಬಿರಗಳನ್ನು ನಡೆಸಬೇಕು.

ಈ ಜವಾಬ್ದಾರಿಯನ್ನು ಯಾವುದೇ ರಾಜಕೀಯ ಪಕ್ಷದ ಸಂಸ್ಥೆಗಳಿಗೆ ನೀಡದೆ ಮತಧರ್ಮ, ಪಂಥ, ಪಕ್ಷ ನಿರಪೇಕ್ಷರಾದ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದ ಕಾರ್ಯಪಡೆಗೆ ನೀಡಬೇಕು. ನಮ್ಮ ಮುಖ್ಯಮಂತ್ರಿಯವರು ಇದನ್ನು ಮಾಡಿ ತೋರಿಸಲಿ ಎಂಬುದು ನಮ್ಮ ಆಶಯ.

ವಾಚಕರ ವಾಣಿ

ಟಿಪ್ಪು: ಪುಸ್ತಕ, ನಾಟಕ...

ಬಿಡುಗಡೆಯಾದ ಹತ್ತು ದಿನಗಳೊಳಗೇ 'ಟಿಪ್ಪು ನಿಜಕನಸುಗಳು' ಕೃತಿಗೆ ತಡೆಯಾಜ್ಞೆ ಎದುರಾಗಿದೆ. ನಾಟಕವು ಪೊಲೀಸ್ ಬಂದೋಬಸ್ತ್ ನಡುವೆ ಪ್ರದರ್ಶಿಸಲ್ಪಟ್ಟಿದೆ. ಒಂದು ಮುಖ್ಯ ಪ್ರಶ್ನೆಯೆಂದರೆ- ವೈಯಕ್ತಿಕ ಅಜೆಂಡಾಗೆ ಸಂಸ್ಥೆಗಳನ್ನು ಬಳಸಿರುವುದು ಸರಿಯೇ? ಕನಸು ಎಂಬುದರಲ್ಲಿ ಹೇಗೆ ಕಲ್ಪನೆ ಇರುತ್ತದೋ ಹಾಗೆಯೇ ಪುಸ್ತಕದಲ್ಲಿ ಕಾಲ್ಪನಿಕ ಸತ್ಯ ಅಭಿಪ್ರಾಯಸಹಿತ ಇರಬಹುದು. ಒಬ್ಬ ರಾಜನಾಗಿ ಟಿಪ್ಪುವಿನ ಬಗೆಗೆ ವಿವಿಧ ಚಿತ್ರಣಗಳಿವೆ. ತಮಿಳುನಾಡು, ಕೇರಳದಲ್ಲಿ ನಕಾರಾತ್ಮಕ ದಾಖಲೆಗಳಿವೆ. ಇಲ್ಲಿ 'ಮೈಸೂರಿನ ಹುಲಿ', ಶೃಂಗೇರಿ- ನಂಜನಗೂಡು ಕತೆಗಳಿವೆ. ತೋಟಗಾರಿಕೆ, ರೇಷ್ಮೆ ಉದ್ಯಮಗಳ ಸಂಬಂಧದಲ್ಲೂ ಆತನ ಹೆಸರನ್ನು ಉಲ್ಲೇಖಿಸಲಾಗುತ್ತದೆ. ಒಟ್ಟಾರೆ ಬ್ರಿಟಿಷರಿಗೆ ಫೈಟ್ ಕೊಟ್ಟವರಲ್ಲಿ ಒಬ್ಬ ಎಂಬುದನ್ನು ಯಾರೂ ನಿರಾಕರಿಸಲಾರರು.

ಸಮಸ್ಯೆಯೆಂದರೆ, ಎಸ್.ಎಲ್.ಭೈರಪ್ಪ ಅವರಂತಹವರು 'ಅವನ ನಿಜಸ್ವರೂಪ ಎಲ್ಲರಿಗೂ ತಿಳಿಸಬೇಕು' ಎನ್ನುವಾಗಲೂ ಟಿಪ್ಪುವಿನ ದೋಷಗಳನ್ನೇ ಹೆಚ್ಚಾಗಿ ಹೇಳುತ್ತಾರೆ. ಇನ್ನೊಂದು ತುದಿಯಲ್ಲಿ ಕೆಲವರು ಟಿಪ್ಪುವನ್ನು ತಮ್ಮ 'ಸೆಕ್ಯುಲರ್' ಉದ್ದೇಶಕ್ಕಾಗಿ ವೈಭವೀಕರಿಸುತ್ತಾರೆ. ಮೊಘಲರನ್ನು ಹಿಮ್ಮೆಟ್ಟಿಸಿದ ಅಸ್ಸಾಮಿನ ಸೇನಾಧಿಪತಿಯೊಬ್ಬರನ್ನು ಈಗ ಹಾಡಿಹೊಗಳುವಾಗ, ಇಡೀ ಈಶಾನ್ಯ ಪ್ರದೇಶ ಬ್ರಿಟಿಷ್ ಪೂರ್ವ ಅವಧಿಯಲ್ಲಿ ಬೇರೆ ಬೇರೆ ಒತ್ತಡಕ್ಕೆ ಒಳಗಾಗಿ ಭಾರತದ ಮೇನ್‌ಲ್ಯಾಂಡ್‌ಗೆ ಸೇರಿರಲಿಲ್ಲ ಎಂಬ ಅಂಶವನ್ನು ಅನುಕೂಲಕ್ಕೆಂದು ಮರೆಮಾಚುವುದೂ ನಡೆಯುತ್ತಿದೆ. 'ಸರ್ಫೈಘಾಟ್' ಹಲವು ನಾಟಕಗಳಲ್ಲಿ ಪ್ರತಿಮಾತ್ಮಕವಾಗಿ ಬಳಸಲ್ಪಟ್ಟಿದೆ. ಬೇರೆ ಪುರಾವೆ ಸಿಗುವವರೆಗೆ ಇತಿಹಾಸ ನಿಜ. ನಾಟಕ ಇನ್ನಿತರ ಕೃತಿಗಳಲ್ಲಿ ದೃಷ್ಟಿಕೋನ, ವ್ಯಾಖ್ಯಾನಗಳು ಸೇರಿಕೊಳ್ಳುತ್ತವೆ. ಆದ್ದರಿಂದ ಇಂತಹ ವಿಷಯಗಳಲ್ಲಿ ವಿವಾದಗಳನ್ನು ಬೆಳೆಸುತ್ತಾ ಹೋಗುವುದು ಸರಿಯಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಗಹನ ವಿಚಾರ ಅಪೂರ್ಣಗೊಂಡಿತೇ?

ಸಾಂವಿಧಾನಿಕ ಗುರಿಗೆ ದೂರವೇ ಉಳಿದುಹೋದ, ಇಂದು ರಾಜಕಾರಣದ ಆಡುಂಬೊಲವಾದ ಮೀಸಲಾತಿಯ ವಿಷಯವು ಮರು ಚರ್ಚೆಗೆ, ಮರು ವಿಶ್ಲೇಷಣೆಗೆ ಅರ್ಹ ಎಂಬ ಗಹನ ವಿಚಾರವನ್ನು ಚಂದ್ರಕಾಂತ ವಡ್ಡು ಪ್ರತಿಪಾದಿಸಿದ್ದಾರೆ (ಪ್ರ.ವಾ., ನ. 26). ಆದರೆ ಲೇಖನದ ಕೊನೆಯಲ್ಲಿ, 'ಸಾಮಾಜಿಕ ನ್ಯಾಯ ಪರಿಕಲ್ಪನೆಯೇ ಅಪ್ರಸ್ತುತ ಎಂಬ ಭ್ರಮೆ ಹುಟ್ಟಿಸುವ ಅಪಾಯಕಾರಿ ಘಟ್ಟದಲ್ಲಿ ನಿಂತಿದ್ದೇವೆ' ಎಂದು ಹೇಳುವ ಮೂಲಕ ಅವರು ಲೇಖನವನ್ನು ಅಪೂರ್ಣವಾಗಿಸಿದರೇ ಎಂಬ ಪ್ರಶ್ನೆ ಮೂಡುತ್ತದೆ.

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

ಪೋಷಣೆ– ವಹಿವಾಟು ಒಬ್ಬರಿಗೇ ಇರಲಿ

'ಪುಣ್ಯಕೋಟಿ ದತ್ತು ಯೋಜನೆ'ಗೆ ದೇಣಿಗೆ ನೀಡುವ ಅಧಿಕಾರಿಗಳಿಗೆ ತೆರಿಗೆ ವಿನಾಯಿತಿ ಪಡೆಯಲು ಅವಕಾಶ ಇದೆಯೆಂದು ಸರ್ಕಾರ ತಿಳಿಸಿದೆ (ಪ್ರ.ವಾ., ನ. 26). ಮೊದಲಿಗೆ, ಈ ಯೋಜನೆಗೆ ಏನು ಅರ್ಥ ಇದೆ? ಒಂದು ಕಡೆ, ದನದ ಮಾಂಸದ ವಹಿವಾಟಿನಲ್ಲಿ ದೇಶವು ಜಗತ್ತನ್ನೇ ಮೀರಿಸಿ ನಂಬರ್ ಒನ್ ಆಗಿದೆ. ಇನ್ನೊಂದು ಕಡೆ, ಪುಣ್ಯಕೋಟಿ ದತ್ತು ಯೋಜನೆ ಬಗ್ಗೆ ಸರ್ಕಾರ ಜನರ ಗಮನವನ್ನು ಸೆಳೆಯುತ್ತಿದೆ. ಈ ವಹಿವಾಟು ಮತ್ತು ಯೋಜನೆಗಳ ನಡುವೆ ಏನಾದರೂ ಹೊಂದಾಣಿಕೆ ಇದೆಯೇ?

ಬೀಡಾಡಿ ದನಗಳ ಸಂರಕ್ಷಣೆಗಾಗಿ ಒಮ್ಮೆ ಸರ್ಕಾರಿ ನೌಕರರಿಂದ ಮತ್ತೊಮ್ಮೆ ಇನ್ಯಾರಿಂದಲೋ ದಾನ ಪಡೆದು ಕೋಟಿ ಪುಣ್ಯ ಸಂಪಾದಿಸುವ ಬದಲು, ದನದ ಮಾಂಸ ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಿರುವ ಆ ವ್ಯಾಪಾರದ ಕಂಪನಿಗಳಿಂದಲೇ ಯೋಜನೆಗೆ ಹಣ ಪಡೆಯಲು ಸರ್ಕಾರ ಏಕೆ ಯೋಚಿಸಬಾರದು? ಇದರಿಂದ, ಪೋಷಿಸಿ ನಂತರ ವಹಿವಾಟು ಮಾಡುವ ಸಂಪೂರ್ಣ ಹೊಣೆಯನ್ನು ಒಬ್ಬರಿಗೇ ನೀಡಿದಂತೆ ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಇಡಬ್ಲ್ಯುಎಸ್: ಬಯಲಿಗೆ ಬಂದ ಕಾರ್ಯಸೂಚಿ

ಇಡಬ್ಲ್ಯುಎಸ್ (ಆರ್ಥಿಕವಾಗಿ ದುರ್ಬಲ ವರ್ಗದವರಿಗೆ) ಎನ್ನುವುದರಲ್ಲಿಯೇ ಅದರ ಅಪಾರ್ಥ ಅಡಕವಾಗಿದೆ. ಮುಂದುವರಿದ ಜಾತಿಗಳಲ್ಲಿನ ಹಿಂದುಳಿದ ವರ್ಗಕ್ಕೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಎಂಬುದು ಸಂವಿಧಾನದಲ್ಲಿ ಮೀಸಲಾತಿಯನ್ನು ಪರಿಭಾವಿಸಿಕೊಂಡಿರುವ ಕ್ರಮಕ್ಕೆ ವಿರುದ್ಧವಾಗಿದೆ. 'ಸಂವಿಧಾನವನ್ನು ಬದಲಾಯಿಸುವುದಕ್ಕೇ ನಾವು ಅಧಿಕಾರಕ್ಕೆ ಬಂದಿದ್ದೇವೆ' ಎಂದು ರಾಜ್ಯದ ಸಂಸದರೊಬ್ಬರು ಹೇಳುತ್ತಿದ್ದರು. ಈಗಾಗಲೇ ಬದಲಾಯಿಸುವ ಕಾರ್ಯ ನಡೆಯುತ್ತಿದೆ ಎಂಬುದು ಇಡಬ್ಲ್ಯುಎಸ್‌ನಿಂದ ಖಚಿತವಾಗಿದೆ.

ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಪ್ರಾತಿನಿಧ್ಯದಲ್ಲಿ ಅತ್ಯಂತ ಉನ್ನತ ಸ್ಥಾನದಲ್ಲಿರುವ ಜಾತಿಗಳಿಗೆ (ತ್ರೈವರ್ಣೀಯರಿಗೆ) ಮೀಸಲಾತಿ ನೀಡುವುದು ಡಾ. ಬಿ.ಆರ್.ಅಂಬೇಡ್ಕರ್ ಅವರು ಪ್ರತಿಪಾದಿಸಿದ ಮೀಸಲಾತಿ ಸಿದ್ಧಾಂತದ ವಿಕೃತಿಯಾಗಿದೆ. 'ಮುಂದುವರಿದ' ಜಾತಿಗಳನ್ನು 'ಹಿಂದುಳಿದವು' ಎಂದು ಪರಿಭಾವಿಸಿಕೊಳ್ಳುವುದರಲ್ಲಿನ ವೈರುಧ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಗಡಿ ಸಮಸ್ಯೆ ಮತ್ತು ಮೂರು ಎಂಜಿನ್ ಸರ್ಕಾರ

ಮಹಾರಾಷ್ಟ್ರವೇ ಆಗಲಿ ಕರ್ನಾಟಕವೇ ಆಗಿರಲಿ ಗಡಿ ಗಲಾಟೆ ಜೋರಾಗಿ ಸದ್ದು ಮಾಡುವುದು ಚುನಾವಣೆ ಸಮಯದಲ್ಲಿಯೇ ಅನ್ನಿಸುತ್ತದೆ. ಸದ್ಯಕ್ಕೆ ಮಹಾರಾಷ್ಟ್ರ ಇದೀಗ ಮತ್ತೆ ಗಡಿ ಖ್ಯಾತೆ ತೆಗೆದಿದೆ. ಇದಕ್ಕೆ ಪ್ರತ್ಯುತ್ತರ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸರ್ವ ಪಕ್ಷ ಸಭೆ ಕರೆದು ಈ ಬಾರಿ ಸರಿಯಾದ ಖಡಕ್ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ. ಆದರೆ ಈ ಹೇಳಿಕೆ ನೋಡಿದರೆ, ಇದು ಪೇಪರ್ ಹುಲಿ, ಬಟ್ಟೆ ಹಾವಿನಂತೆ ಕಾಣುತ್ತಿದೆ. ಏಕೆಂದರೆ ಮಹಾರಾಷ್ಟ್ರ ಮತ್ತು ಕರ್ನಾಟಕ ಎರಡೂ ಕಡೆ ಇರುವುದು ಬಿಜೆಪಿ ನೇತೃತ್ವದ ಸರ್ಕಾರಗಳು. ಜೊತೆಗೆ ಕೇಂದ್ರದಲ್ಲಿಯೂ ಬಿಜೆಪಿ ನೇತೃತ್ವದ ಸರ್ಕಾರವೇ ಇರುವುದರಿಂದ ಟ್ರಿಪಲ್ ಎಂಜಿನ್ ಸರ್ಕಾರ ಎನ್ನಬಹುದು. ಹೀಗಾಗಿ, ಗಡಿ ಸಮಸ್ಯೆ ಬಗೆಹರಿಯಲು ಇದು ಸುಕಾಲ.


ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಪ್ರಧಾನಿ ಮನಸ್ಸು ಮಾಡಿದರೆ ಸಮಸ್ಯೆ ಕ್ಷಣಾರ್ಧದಲ್ಲಿ ಒಂದೇ ಸಭೆಯಲ್ಲಿ ಮುಗಿಯುತ್ತದೆ. ಒಂದು ವೇಳೆ ಮೂರೂ ಕಡೆ ಒಂದೇ ಪಕ್ಷದ ನೇತೃತ್ವದ ಸರ್ಕಾರ ಇದ್ದರೂ ಗಡಿ ವಿವಾದ ಬಗೆಹರಿಯುತ್ತಿಲ್ಲ, ಸಮಸ್ಯೆ ಮತ್ತೆ ಮತ್ತೆ ಸದ್ದು ಮಾಡುತ್ತ ಕಗ್ಗಂಟಾಗುತ್ತಿದೆ ಎಂದಾದರೆ ಅದು ಇನ್ನೆಂದಿಗೂ ಬಗೆಹರಿಯಲಾರದು.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ದತ್ತಾಂಶ ರಕ್ಷಣಾ ಕರಡು ಮಸೂದೆ ಸರ್ಕಾರಕ್ಕೆ ಪರಮಾಧಿಕಾರ

ವೈಯಕ್ತಿಕ ದತ್ತಾಂಶ ರಕ್ಷಣಾ ಮಸೂದೆ 2019 ಅನ್ನು ಸರ್ಕಾರವು ಹಿಂದಕ್ಕೆ ಪಡೆದಿದೆ. ಇದರಲ್ಲಿದ್ದ ಹಲವು ಅಂಶಗಳ ಕುರಿತು ದೊಡ್ಡ ದೊಡ್ಡ ತಂತ್ರಜ್ಞಾನ ಕಂಪನಿಗಳು ಮತ್ತು ನವೋದ್ಯಮಗಳು ಆಕ್ಷೇಪ ವ್ಯಕ್ತಪಡಿಸಿದ್ದು ಇದಕ್ಕೆ ಕಾರಣ. ಈ ಮಸೂದೆಯ ಬದಲಿಗೆ ಡಿಜಿಟಲ್ ದತ್ತಾಂಶ ಸಂರಕ್ಷಣಾ ಮಸೂದೆ 2022 ಅನ್ನು ಸರ್ಕಾರವು ರೂಪಿಸಿದೆ. ಪರಿಷ್ಕೃತ ಮಸೂದೆಯು ಮೊದಲಿನ ಮಸೂದೆಗಿಂತ ದುರ್ಬಲವಾಗಿದೆ, ಸರ್ಕಾರಕ್ಕೆ ಅತೀ ಹೆಚ್ಚು ಅಧಿಕಾರ ನೀಡುತ್ತದೆ ಎಂಬ ಆಕ್ಷೇಪ ಪರಿಣತರಿಂದ ವ್ಯಕ್ತವಾಗಿದೆ. ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಯ ಕರಡನ್ನು ಕೇಂದ್ರ ಸರ್ಕಾರವು ಪ್ರಕಟಿಸಿದೆ. ಜನರು ಡಿಸೆಂಬರ್ 17ರೊಳಗೆ ಪ್ರತಿಕ್ರಿಯೆಗಳನ್ನು ಸಲ್ಲಿಸಬಹುದು



ಕಳವಳಕಾರಿ ಅಂಶಗಳು

- ದೇಶದ ಸಾರ್ವಭೌಮತೆ ಮತ್ತು ಏಕತೆ ಹಾಗೂ ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಯಾವುದೇ ದತ್ತಾಂಶವನ್ನು ಸರ್ಕಾರವು ಪಡೆದುಕೊಳ್ಳಬಹುದು. ಸ್ನೇಹ ಸಂಬಂಧ ಇರುವ ದೇಶಗಳ ಹಿತಾಸಕ್ತಿ ರಕ್ಷಣೆ, ಸಾರ್ವಜನಿಕ ಸುವ್ಯವಸ್ಥೆ ಕಾಯ್ದುಕೊಳ್ಳುವುದು, ಯಾವುದೇ ಅಪರಾಧ ಕೃತ್ಯಕ್ಕೆ ಕುಮ್ಮಕ್ಕು ನೀಡುವುದಕ್ಕೆ ತಡೆ, ಸುಳ್ಳು ಹರಡುವುದಕ್ಕೆ ತಡೆ ಒಡ್ಡುವುದಕ್ಕಾಗಿಯೂ ಸರ್ಕಾರ ದತ್ತಾಂಶಗಳನ್ನು ಪಡೆದುಕೊಳ್ಳಬಹುದು. ಇಂತಹ ವ್ಯಾಪಕ ಅವಕಾಶವು ದತ್ತಾಂಶ ದುರ್ಬಳಕೆಗೆ ಅವಕಾಶ ಕೊಡಬಹುದು ಎಂಬ ಆಕ್ಷೇಪ ಕೇಳಿ ಬಂದಿದೆ
- ಸರಳಗೊಳಿಸಬೇಕು ಎಂಬ ಕಾರಣಕ್ಕೆ ಮಸೂದೆಯಲ್ಲಿ 30 ಭಾಗಗಳು ಇವೆ. ಆದರೆ, ಹೀಗೆ ಸಂಕ್ಷಿಪ್ತಗೊಳಿಸಲಾದ ಕಾರಣ ಖಾಸಗಿತನ ಸಂರಕ್ಷಣೆಯ ವಿಚಾರದಲ್ಲಿ ಸ್ಪಷ್ಟತೆಯ ಕೊರತೆ ಇದೆ
- ವ್ಯಕ್ತಿಗಳ ದತ್ತಾಂಶವು ಕಳವಾದರೆ, ದುರ್ಬಳಕೆಯಾದರೆ ಅದಕ್ಕೆ ಪರಿಹಾರ ನೀಡುವ ಪ್ರಸ್ತಾವ ಇಲ್ಲ
- ಸ್ವಯಂಚಾಲಿತ ನಿರ್ಧಾರ ಕೈಗೊಳ್ಳುವಿಕೆಯ ಹಿಂದೆ ಇರುವ ತರ್ಕ ಏನು ಎಂಬುದನ್ನು ವೆಬ್‌ಸೈಟ್‌ಗಳು ಬಹಿರಂಗಪಡಿಸುವುದು ಕಡ್ಡಾಯವಲ್ಲ. ಹೀಗಾಗಿ, ಸ್ವಯಂಚಾಲಿತ ನಿರ್ಧಾರ ಕೈಗೊಳ್ಳುವಿಕೆಯು ತಾರತಮ್ಯಕ್ಕೆ ಕಾರಣ ಆಗಬಹುದು
- ವಿದೇಶಗಳಲ್ಲಿ ದತ್ತಾಂಶ ಸಂಗ್ರಹಿಸಿ ಇರಿಸುವುದಕ್ಕೆ ಸಂಬಂಧಿಸಿ ಮೂಲ ಮಸೂದೆಯಲ್ಲಿ ಇದ್ದ ಅಂಶಗಳನ್ನು ಪರಿಷ್ಕೃತ ಮಸೂದೆಯಲ್ಲಿ ಕೈಬಿಡಲಾಗಿದೆ. ದೊಡ್ಡ ತಂತ್ರಜ್ಞಾನ ಕಂಪನಿಗಳು ಇವನ್ನು ವಿರೋಧಿಸಿದ್ದವು
- ವೈಯಕ್ತಿಕ ದತ್ತಾಂಶಗಳನ್ನು ಸ್ವಯಂಚಾಲಿತವಲ್ಲದೆ ಬಳಸಿಕೊಳ್ಳುವುದು, ಆಫ್‌ಲೈನ್ ದತ್ತಾಂಶ ಬಳಕೆ, ವ್ಯಕ್ತಿಯೊಬ್ಬರು ವೈಯಕ್ತಿಕ ಅಥವಾ ಕೌಟುಂಬಿಕ ಉದ್ದೇಶಕ್ಕಾಗಿ ದತ್ತಾಂಶ ಬಳಸಿಕೊಳ್ಳುವುದಕ್ಕೆ ಈ ಮಸೂದೆಯು ಅನ್ವಯ ಆಗುವುದಿಲ್ಲ

ರಕ್ಷಣೆಯ ಹಕ್ಕು ನಿರ್ಬಂಧಿತ

ವ್ಯಕ್ತಿಯ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳನ್ನು ರಕ್ಷಿಸುವುದಕ್ಕಾಗಿ ಈ ಮಸೂದೆ ರೂಪಿಸಲಾಗಿದೆ ಎಂದು ಕರಡು ಮಸೂದೆಯಲ್ಲಿ ವಿವರಿಸಲಾಗಿದೆ. ಆದರೆ, ವ್ಯಕ್ತಿಯ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳ ರಕ್ಷಣೆಯು ಅನಿರ್ಬಂಧಿತ ಅಲ್ಲ. ಕಾನೂನು ಕ್ರಮದ ಸಂದಂರ್ಭದಲ್ಲಿ ಮತ್ತು ನ್ಯಾಯಾಂಗದ ವಿಚಾರಣೆ ಸಂದರ್ಭದಲ್ಲಿ ಈ ಹಕ್ಕುಗಳು ರದ್ದಾಗುತ್ತವೆ. ಆದರೆ, ಒಂದೇ ಒಂದು ಅಧಿಸೂಚನೆ ಹೊರಡಿಸುವ ಮೂಲಕ ಈ ಹಕ್ಕುಗಳನ್ನು ಮೊಟಕುಗೊಳಿಸುವ ಅಧಿಕಾರವನ್ನು ಈ ಮಸೂದೆಯು ಸರ್ಕಾರಕ್ಕೆ ನೀಡುತ್ತದೆ. ಹೀಗಾಗಿ, ಈ ಕರಡು ಮಸೂದೆಯು ಮೇಲ್ನೋಟಕ್ಕೆ ಕಾಣುತ್ತಿರುವಂತೆ ಸರಳವಾಗಿಲ್ಲ. ಬದಲಿಗೆ, ಯಾವುದೇ ವ್ಯಕ್ತಿಯ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸುವ ಮತ್ತು ತನಗೆ ಬೇಕಾದಂತೆ ಅದನ್ನು ಬಳಸಿಕೊಳ್ಳುವ ಅತಿ ಅಧಿಕಾರವನ್ನು ಸರ್ಕಾರಕ್ಕೆ ಈ ಕರಡು ಮಸೂದೆ ನೀಡುತ್ತದೆ.

ವ್ಯಕ್ತಿಯ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳಿಗೆ ನೀಡಿರುವ ರಕ್ಷಣೆಯನ್ನು ಈ ಕರಡು ಮಸೂದೆಯ 18ನೇ ಸೆಕ್ಷನ್‌ನ ಅಡಿ ತೆಗೆದುಹಾಕಲಾಗಿದೆ. ರಾಷ್ಟ್ರೀಯ ಭದ್ರತೆ, ಸಾರ್ವಭೌಮತೆ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಮಿತ್ರ ರಾಷ್ಟ್ರಗಳೊಂದಿಗಿನ ಸಂಬಂಧಕ್ಕೆ ಧಕ್ಕೆಯಾಗುತ್ತಿದೆ ಎಂದು ಸರ್ಕಾರಕ್ಕೆ ಭಾಸವಾದರೆ, ಒಂದು ಅಧಿಸೂಚನೆ ಹೊರಡಿಸುವ ಮೂಲಕ 18ನೇ ಸೆಕ್ಷನ್ ಅನ್ನು ಜಾರಿಗೆ ತರಬಹುದು. ಆಗ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶ ರಕ್ಷಣೆಯ ಹಕ್ಕುಗಳೆಲ್ಲವೂ ಮೊಟಕಾಗುತ್ತವೆ.

- ವ್ಯಕ್ತಿಯು ತಾನು ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗೆ ನೀಡಿರುವ ಮಾಹಿತಿ ಮತ್ತು ದತ್ತಾಂಶಗಳನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದರ ಬಗ್ಗೆ ಮಾಹಿತಿ ಪಡೆಯುವ ಹಕ್ಕನ್ನು ಈ ಕರಡು ಮಸೂದೆಯ 12 (3) ಮತ್ತು 12ನೇ (4) ಸೆಕ್ಷನ್‌ಗಳು ನೀಡುತ್ತವೆ. ಈ ದತ್ತಾಂಶಗಳನ್ನು ಮೂರನೇ ವ್ಯಕ್ತಿ/ಸಂಸ್ಥೆಯ ಜತೆಗೆ ಹಂಚಿಕೊಳ್ಳಲಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವ ಹಕ್ಕನ್ನೂ ಈ ಸೆಕ್ಷನ್‌ಗಳು ನೀಡುತ್ತವೆ. ಆದರೆ, 18ನೇ ಸೆಕ್ಷನ್ ಅನ್ನು ಅನ್ವಯ ಮಾಡಿದರೆ, ಈ ಹಕ್ಕುಗಳು ರದ್ದಾಗುತ್ತವೆ. ವ್ಯಕ್ತಿಯು ತನ್ನ ದತ್ತಾಂಶಗಳು ಹೇಗೆ ಬಳಕೆಯಾಗುತ್ತಿವೆ ಮತ್ತು ಯಾರಿಗೆಲ್ಲಾ ಹಂಚಿಕೆಯಾಗಿವೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಾನೆ
- ವ್ಯಕ್ತಿಯು ತನ್ನ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶವನ್ನು ಯಾವ ಉದ್ದೇಶಕ್ಕೆ ನೀಡಿದ್ದನೋ, ಆ ಉದ್ದೇಶ ಈಡೇರಿದ ನಂತರ ಸಂಬಂಧಿತ ಸಂಸ್ಥೆಯು ಆ ದತ್ತಾಂಶವನ್ನು ಸಂಪೂರ್ಣವಾಗಿ ಅಳಿಸಿ ಹಾಕಬೇಕು. ಈ ಮೂಲಕ ವ್ಯಕ್ತಿಯ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಕ್ಕೆ ರಕ್ಷಣೆ ನೀಡಲಾಗಿದೆ. ಆದರೆ 18ನೇ ಸೆಕ್ಷನ್ ಅನ್ವಯ ಮಾಡಿದರೆ, ಉದ್ದೇಶ ಮತ್ತು ಕಾರ್ಯ ಈಡೇರಿದ್ದರೂ ದತ್ತಾಂಶಗಳನ್ನು ಅಳಿಸಿಹಾಕಬೇಕಿಲ್ಲ. ಸರ್ಕಾರ ಕೇಳಿದರೆ, ಆ ದತ್ತಾಂಶವನ್ನು ಸರ್ಕಾರಕ್ಕೆ ಹಸ್ತಾಂತರ ಮಾಡಬೇಕಾಗುತ್ತದೆ
- ವೈಯಕ್ತಿಕ ದತ್ತಾಂಶ ಮತ್ತು ಮಾಹಿತಿ ಸಂಗ್ರಹಕ್ಕೂ ಮುನ್ನ ಸಂಬಂಧಿತ ವ್ಯಕ್ತಿಗೆ ಸಂಬಂಧಿತ ಸಂಸ್ಥೆಯು ಪೂರ್ವಭಾವಿಯಾಗಿ ನೋಟಿಸ್ ನೀಡಬೇಕು. ವ್ಯಕ್ತಿಯ ಒಪ್ಪಿಗೆಯ ನಂತರವೇ ಮಾಹಿತಿ ಮತ್ತು ದತ್ತಾಂಶವನ್ನು ಸಂಗ್ರಹಿಸಬೇಕು. ಆದರೆ 18ನೇ ಸೆಕ್ಷನ್ ಅನ್ವಯವಾದರೆ, ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶ ಸಂಗ್ರಹಕ್ಕೆ ಪೂರ್ವಭಾವಿಯಾಗಿ ನೋಟಿಸ್ ನೀಡುವ ಮತ್ತು ಒಪ್ಪಿಗೆ ಪಡೆಯುವ ಅವಶ್ಯಕತೆ ಇರುವುದಿಲ್ಲ. ವ್ಯಕ್ತಿಗೆ ತನ್ನ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ
- ‘ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ ಕಾಯ್ದೆಯಲ್ಲಿ (ನೋ ಯುವರ್ ಕಸ್ಟಮರ್–ಕೆವೈಸಿ)’ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಕ್ಕೆ ನೀಡಲಾಗಿರುವ ರಕ್ಷಣೆಯನ್ನು ಈ ಕರಡು ಮಸೂದೆಯು ರದ್ದು ಮಾಡುತ್ತದೆ. ಕೆವೈಸಿ ಕಾಯ್ದೆಯ ಪ್ರಕಾರ ಯಾವುದೇ ವ್ಯಕ್ತಿಯು ಯಾವುದೇ ಸಂಸ್ಥೆಯೊಂದಿಗೆ ತನ್ನ ವ್ಯಾವಹಾರಿಕ ಸಂಬಂಧ ಕಡಿದುಕೊಂಡರೆ, ಆತನಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಮತ್ತು ದತ್ತಾಂಶವನ್ನು ಆ ಸಂಸ್ಥೆಯು ಅಳಿಸಿ ಹಾಕಬೇಕು. ವ್ಯಾವಹಾರಿಕ ಸಂಬಂಧ ಕಡಿದುಕೊಂಡ ನಂತರದ ಆರು ತಿಂಗಳ ಒಳಗೆ ಅಳಿಸಿಹಾಕುವ ಪ್ರಕ್ರಿಯೆ ಪೂರ್ಣಗೊಳ್ಳಬೇಕು. ಆದರೆ, ಈ ಷರತ್ತನ್ನು ಈ ನೂತನ ಕರಡು ಮಸೂದೆಯು ಅಮಾನ್ಯ ಮಾಡುತ್ತದೆ. ಆರು ತಿಂಗಳ ನಂತರವೂ ಅಂತಹ ಮಾಹಿತಿಯನ್ನು ಸಂಗ್ರಹಿಸಿ ಇಟ್ಟುಕೊಳ್ಳಬಹುದು ಎಂದು ಕರಡು ಮಸೂದೆಯಲ್ಲಿ ವಿವರಿಸಲಾಗಿದೆ

ನಿಯಮ ರಚಿಸುವ ಅಧಿಕಾರ ದುರ್ಬಳಕೆ ಸಾಧ್ಯತೆ?

ಕೇಂದ್ರ ಸರ್ಕಾರವು ಈ ಮಸೂದೆಯು ಕಾಯ್ದೆಯಾದ ನಂತರ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆ ಮೂಲಕ ಪ್ರಕಟಿಸಬಹುದು ಎಂದು ಕರಡು ಮಸೂದೆಯ 26ನೇ ಸೆಕ್ಷನ್ ಉಲ್ಲೇಖಿಸುತ್ತದೆ. ಭಾರತದ ಶಾಸಕಾಂಗ ಪರಿಭಾಷೆಯಲ್ಲಿ ನಿಯಮಾವಳಿಗಳು ಕಾಯ್ದೆಯ ವಿಸ್ತೃತ ರೂಪಗಳಾಗಿದ್ದು, ಕಾಯ್ದೆಯಲ್ಲಿನ ಅಂಶಗಳಿಗೆ ಪೂರಕವಾಗಿರುತ್ತವೆ. ಕಾಯ್ದೆಯಲ್ಲಿ ಹೇಳಲಾಗಿರುವ ಅಂಶಗಳ ಅನುಷ್ಠಾನದ ವಿಧಾನವನ್ನು ಅವು ತಿಳಿಸುತ್ತವೆ.

ಈ ಪ್ರಕಾರ, ಸಂಸತ್ತಿನ ಎರಡೂ ಸದನಗಳ ಮುಂದೆ ನಿಯಮಾವಳಿಗಳನ್ನು ಮಂಡಿಸಲಾಗುತ್ತದೆ. ಸಂಸತ್ತಿನಲ್ಲಿ ಇರಿಸಿದ ಬಳಿಕ ಅವು ಜಾರಿಗೊಳ್ಳುತ್ತವೆ. ಸಂಸತ್ತಿನಲ್ಲಿ ಮಂಡನೆಯಾದ ಸಮಯದಲ್ಲಿ, ಅವುಗಳಿಗೆ ಬದಲಾವಣೆ ತರಲು ಅವಕಾಶವಿರುತ್ತದೆ. ಸಂಸತ್ತಿನ ಎರಡೂ ಸದನಗಳು ಈ ನಿಮಯಗಳಿಗೆ ಒಪ್ಪಿಗೆ ಸೂಚಿಸಬಹುದು ಅಥವಾ ಸೂಚಿಸದೆಯೂ ಇರಬಹುದು. ಮಸೂದೆಗಳ ಹಾಗೆ, ನಿಯಮಾವಳಿಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯಬೇಕು ಎಂದೇನೂ ಇಲ್ಲ. ಒಂದು ವೇಳೆ ಬದಲಾವಣೆಗೆ ಒಳಪಟ್ಟಲ್ಲಿ, ಅದೇ ಸ್ವರೂಪದಲ್ಲಿ ನಿಯಮಗಳು ಜಾರಿಯಾಗುತ್ತವೆ. ಪ್ರತೀ ಸದನದಲ್ಲಿ ಮಂಡಿಸಿದ 30 ದಿನಗಳ ಬಳಿಕ ಅವು ಜಾರಿಗೆ ಬರುತ್ತವೆ ಎಂದು ಕರಡು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

ಯಾವುದಾದರೂ ನಿಯಮಗಳನ್ನು ಹೊಸದಾಗಿ ರೂಪಿಸಬೇಕಾದ ಪ್ರಸಂಗ ಬಂದರೆ, ಸರ್ಕಾರವು ಎಷ್ಟು ಬೇಕಾದರೂ ನಿಯಮಗಳನ್ನು ಪ್ರಕಟಿಸಲು ಅವಕಾಶವಿದೆ. ‘ಕಳೆದ ಕೆಲವು ವರ್ಷಗಳಿಂದ ಕೇಂದ್ರ ಸರ್ಕಾರವು ನಿಯಮಗಳನ್ನು ರೂಪಿಸುವ ಅಧಿಕಾರವನ್ನು ತನ್ನ ಅಧಿಕಾರ ವ್ಯಾಪ್ತಿ ವಿಸ್ತರಿಸಿಕೊಳ್ಳಲು ಬಳಸುತ್ತಿದೆ’ ಎಂದು ಡಿಜಿಟಲ್ ಖಾಸಗಿತನ ಸೇವೆ ಒದಗಿಸುವ ವರ್ಚ್ಯು ಸಂಸ್ಥೆಯ ಉಪಾಧ್ಯಕ್ಷೆ ಮಿಶಿ ಚೌಧರಿ ಅವರು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ಇಂತಹ ಕಾಯ್ದೆಗಳಿಗೆ ನಿಯಮಗಳನ್ನು ರೂಪಿಸುವ ಮೂಲಕ ಎಲ್ಲ ಅಧಿಕಾರವನ್ನೂ ಸರ್ಕಾರ ತನ್ನಲ್ಲಿ ಕೇಂದ್ರೀಕರಿಸಿಕೊಳ್ಳಲು ಯತ್ನಿಸುತ್ತದೆ ಎಂದು ಅವರು ವಿಶ್ಲೇಷಿಸಿದ್ದಾರೆ.

‘ಪ್ರಾಯೋಗಿಕ ಎನಿಸುವ ನಿಯಮಾವಳಿಗಳನ್ನು ಹಾಗೂ ಶಿಫಾರಸುಗಳನ್ನು ಮುಂದಿಡುವ ಕೆಲಸವನ್ನು ಯುರೋಪಿಯನ್ ಡಾಟಾ ಪ್ರೊಟೆಕ್ಷನ್ ಬೋರ್ಡ್ (ಇಡಿಪಿಬಿ) ಈಗಲೂ ಮುಂದುವರಿಸುತ್ತಿದೆ. ಇದೇ ರೀತಿ, ಕಾಯ್ದೆಗೆ ಪೂರಕವಾದ ಹಾಗೂ ಪರಿಣಾಮಕಾರಿ ನಿಯಮಾವಳಿಗಳನ್ನು ಪ್ರಾಧಿಕಾರಗಳು ಶಿಫಾರಸು ಮಾಡಿದಾಗ ಮಾತ್ರ, ಜಾರಿಯಲ್ಲಿರುವ ಕಾಯ್ದೆಯು ಪರಿಣಾಮಕಾರಿಯಾಗಿ ಜಾರಿಗೊಳ್ಳಲು ಸಾಧ್ಯವಾಗುತ್ತದೆ’ ಎಂದು ಡೆಲಾಯ್ಟ್ ನಿರ್ವಹಣಾ ಸಂಸ್ಥೆಯ ಮನೀಶ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಮಾಹಿತಿ ನೀಡದಿದ್ದರೆ ಸೇವೆ ಇಲ್ಲ

ಪ್ರತಿ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಯ ಯಾವುದೇ ಸೇವೆ ಬೇಕೆಂದರೆ, ಆ ಸಂಸ್ಥೆಯು ಕೇಳುವ ಎಲ್ಲಾ ಮಾಹಿತಿಗಳನ್ನು ವ್ಯಕ್ತಿಯು ನೀಡಬೇಕು ಎಂದು ಈ ಕರಡು ಮಸೂದೆಯು ಹೇಳುತ್ತದೆ. ಅಂತಹ ಸೇವೆ ಬೇಕು ಎಂದರೆ, ಮಾಹಿತಿಯನ್ನು ನೀಡಬೇಕು ಮತ್ತು ಅದನ್ನು ಬಳಸಲು ಒಪ್ಪಿಗೆ ನೀಡಬೇಕು ಎಂದು ಕರಡು ಮಸೂದೆಯಲ್ಲಿ ವಿವರಿಸಲಾಗಿದೆ. ಇದಕ್ಕೆ ಒಪ್ಪಿಗೆ ನೀಡದೇ ಇದ್ದರೆ, ಸಂಸ್ಥೆಯು ತಾನು ನೀಡುತ್ತಿರುವ ಸೇವೆಯನ್ನು ತಕ್ಷಣವೇ ಸ್ಥಗಿತಗೊಳಿಸಬಹುದು ಎಂದು ಕರಡು ಮಸೂದೆಯಲ್ಲಿ ಹೇಳಲಾಗಿದೆ.

ವ್ಯಕ್ತಿಯು ತನ್ನ ವೈಯಕ್ತಿಕ ಮಾಹಿತಿ ಮತ್ತು ದತ್ತಾಂಶಗಳ ಸಂಗ್ರಹ ಹಾಗೂ ಬಳಕೆಗೆ ಅನುಮತಿ ನೀಡಿದ್ದು, ಬಳಕೆಗೆ ನೀಡಿದ್ದ ಒಪ್ಪಿಗೆಯನ್ನು ನಂತರದ ದಿನಗಳಲ್ಲಿ ಹಿಂಪಡೆಯಬಹುದು. ಹೀಗೆ ಒಪ್ಪಿಗೆ ಹಿಂಪಡೆದ ತಕ್ಷಣ ಆತನಿಗೆ ನೀಡಲಾಗುತ್ತಿದ್ದ ಸೇವೆಯನ್ನು ಸ್ಥಗಿತಗೊಳಿಸಬೇಕು ಎಂದು ಕರಡು ಮಸೂದೆಯು ಹೇಳುತ್ತದೆ.

ಮಾಹಿತಿ ತಪ್ಪಾಗಿದ್ದರೆ ದಂಡ: ವ್ಯಕ್ತಿಯು ಯಾವುದೇ ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗೆ ನೀಡಿರುವ ಮಾಹಿತಿಯು ತಪ್ಪಾಗಿದ್ದರೆ, ಅಂತಹ ವ್ಯಕ್ತಿಗೆ ಗರಿಷ್ಠ ₹ 10 ಸಾವಿರ ದಂಡ ವಿಧಿಸಲು ಅವಕಾಶವಿದೆ.

ಆಧಾರ: ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಯ ಕರಡು–2022



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 286

ಪತಿಯ ಆಜ್ಞೆ ಪಾಲಿಸಬೇಕು

ಪತಿ ಊಟಮಾಡಿದ ನಂತರವೇ ಪತ್ನಿಯಾದವಳು ಊಟ ಮಾಡಬೇಕು. ಗಂಡ ಊಟ ಮಾಡಿ ಉಳಿದುದನ್ನು ಪತ್ನಿಯಾದವಳು ಇದೇ ಮಹಾಪ್ರಸಾದವೆಂದು ತಿಳಿದು ಸೇವಿಸಬೇಕು. ದೇವತೆಗಳಿಗೂ ಪಿತೃಗಳಿಗೂ ಅತಿಥಿಗಳಿಗೂ ಗಂಡನಿಗೆ ಬಡಿಸಿದಂತೆ ಮೊದಲು ಬಡಿಸಬೇಕು. ಗೋವುಗಳಿಗೆ, ಪರಿಚಾರಕವರ್ಗದವರಿಗೆ, ಭಿಕ್ಷುಕರಿಗೆ ಕೊಡದೆ ಊಟಮಾಡಕೂಡದು. ಪತಿವ್ರತೆಯಾದವಳು ಗೃಹಕಾರ್ಯದಲ್ಲಿ ದಕ್ಷಳಾಗಿರಬೇಕು. ಪತಿಯ ಅಪ್ಪಣೆಯಿಲ್ಲದೆ ಉಪವಾಸ, ವ್ರತ, ಮುಂತಾದವುಗಳನ್ನು ಮಾಡಬಾರದು. ಯಾವುದೇ ಕೆಲಸ ಮಾಡಬೇಕಾದರೂ ಪತಿಯ ಅಪ್ಪಣೆ ಪಡೆಯುವುದು ಸೂಕ್ತವಾದುದು. ಸುಖವಾಗಿ ಕುಳಿತಿರುವ ಮತ್ತು ರಸವಿಲಾಸದಲ್ಲಿ ಪ್ರವೃತ್ತನಾಗಿರುವ ಪತಿಯನ್ನು ಯಾವ ಪತ್ನಿಯೂ ಕಾರ್ಯಾಂತರ ಮಾಡಿ ಎಬ್ಬಿಸಬಾರದು. ತನ್ನ ಪತಿಯು ನಪುಂಸಕನಾಗಲೀ ದರಿದ್ರನಾಗಲೀ ರೋಗಿಯಾಗಲೀ ವೃದ್ಧನಾಗಲೀ ಸುಖಿಯಾಗಲೀ ದುಃಖಿಯಾಗಲೀ, ಹೇಗಿದ್ದರೂ ಅಂತಹವನನ್ನು ತಿರಸ್ಕರಿಸಬಾರದು. ಪತಿವ್ರತೆಯಾದವಳು ಅರಿಶಿನ, ಕುಂಕುಮ, ಚಂದನ, ಕಪ್ಪುರವಿಕೆ, ತಾಂಬೂಲ, ಮಂಗಳದ್ರವ್ಯಗಳು, ತಲೆಯನ್ನು ಬಾಚಿ ಗಂಟುಹಾಕಿಕೊಳ್ಳುವುದು, ಬಳೆಗಳು, ಓಲೆ ಮುಂತಾದ ಮುತ್ತೈದೆ ಅಲಂಕಾರವನ್ನು ಮಾಡಿಕೊಳ್ಳಬೇಕು. ಹಾಗಿಲ್ಲದಿದ್ದರೆ, ಪತಿಯ ಆಯುಸ್ಸು ಕ್ಷೀಣವಾಗುವುದು.

ಪತಿವ್ರತೆಯಾದವಳು ಜಾರಿಣೀ, ಕೆಟ್ಟಕೆಲಸದಲ್ಲಿ ಪ್ರವೃತ್ತಳಾದವಳು ಮತ್ತಿತರ ಕೆಟ್ಟ ಹೆಂಗಸರೊಡನೆ ಎಂದಿಗೂ ಸ್ನೇಹ ಬೆಳೆಸಬಾರದು. ಪತಿಯನ್ನು ದ್ವೇಷಿಸುವ ಹೆಂಗಸನ್ನು ಯಾವತ್ತೂ ಮಾತನಾಡಿಸಬಾರದು. ಒಬ್ಬಳೇ ಬೇರೆ ಸ್ಥಳದಲ್ಲಿ ಕುಳಿತುಕೊಳ್ಳಬಾರದು. ನಗ್ನಳಾಗಿ ಸ್ನಾನ ಮಾಡಕೂಡದು. ಒರಳುಕಲ್ಲು, ಒನಕೆ, ಬೀಸುವಕಲ್ಲು, ಯಂತ್ರ, ಹೊಸಲುಗಳ ಮೇಲೆ ಕುಳಿತುಕೊಳ್ಳಬಾರದು. ರಸಸಮಯವನ್ನು ಬಿಟ್ಟು ಬೇರೆ ಸಮಯದಲ್ಲಿ ಧಾರ್ಷ್ಟ್ಯದಿಂದಿರಬಾರದು. ಮುಖ್ಯವಾಗಿ ಪತಿಯ ಮನಸ್ಸಿಗೆ ಸಂತೋಷವಾಗುವಂತೆ ನಡೆದುಕೊಳ್ಳಬೇಕು.

ಪತಿಯು ಸಂತೋಷಗೊಂಡಿದ್ದರೆ ತಾನೂ ಸಂತೋಷಪಡಬೇಕು. ಪತಿಯು ದುಃಖಿಸುತ್ತಿದ್ದರೆ ತಾನು ದುಃಖಿಸಬೇಕು. ಸುಖದುಃಖಗಳಲ್ಲಿ ಸಮಭಾಗಿಯಾಗಿ ಯಾವಾಗಲೂ ಅವನ ಹಿತವನ್ನೇ ಕೋರುತ್ತಾ ಇರಬೇಕು. ತುಪ್ಪ, ಉಪ್ಪು, ಎಣ್ಣೆ ಮುಂತಾದವುಗಳು ಮುಗಿದುಹೋದರೆ ಪತಿವ್ರತೆಯಾದವಳು ‘ಮುಗಿದು ಹೋಗಿವೆ’ ಎಂದು ನಿಷ್ಠುರವಾಗಿ ನುಡಿದು ಪತಿಗೆ ಬೇಸರವನ್ನುಂಟುಮಾಡಬಾರದು. ಆಯಾಸಕರ ಕೆಲಸಗಳಲ್ಲಿ ನಿಯೋಜಿಸಬಾರದು. ಪತಿಯು, ಬ್ರಹ್ಮ, ವಿಷ್ಣು, ಮಹೇಶ್ವರರೆಲ್ಲರುಗಳಿಗಿಂತಲೂ ಶ್ರೇಷ್ಠ. ಆದ್ದರಿಂದ ಎಲೈ ಪಾರ್ವತಿಯೇ, ಪತಿಯು ಪರಶಿವನೇ ಹೊರತು ಬೇರೆ ಅಲ್ಲ.

ಪತಿಯ ಮಾತನ್ನು ಮೀರಿ ವ್ರತಗಳನ್ನಾಗಲೀ, ಉಪವಾಸ ಮುಂತಾದವುಗಳನ್ನಾಗಲೀ ಮಾಡಿದರೆ ಪತಿಯ ಆಯುಷ್ಯವು ಕ್ಷೀಣವಾಗುವುದು. ಗಂಡನ ಮಾತು ಮೀರಿ ನಡೆವ ಸತಿಯು ಸತ್ತ ನಂತರ ನರಕಕ್ಕೆ ಹೋಗುವಳು. ಯಾವ ಸ್ತ್ರೀಯು ಕೋಪಗೊಂಡು ಪತಿಯನ್ನು ಎದುರು ವಾದಿಸುವಳೋ, ಅವಳು ಮರುಜನ್ಮದಲ್ಲಿ ಹೆಣ್ಣುನಾಯಿಯಾಗಿಯೋ, ಹೆಣ್ಣುನರಿಯಾಗಿಯೋ ಹುಟ್ಟುವಳು. ಪತಿವ್ರತೆಯಾದವಳು ಪತಿಗೆ ಭಯವನ್ನುಂಟುಮಾಡುವ ಮಾತುಗಳನ್ನಾಗಲೀ, ಪತಿಗೆ ಅಪವಾದ ಬರುವಂತಹ ವಾಕ್ಯಗಳನ್ನಾಗಲೀ ನುಡಿಯಬಾರದು. ಪತಿಯೊಡನೆ ಕಲಹವಾಡಬಾರದು. ಹಿರಿಯರ ಹತ್ತಿರ ಗಟ್ಟಿಯಾಗಿ ಮಾತನ್ನಾಗಲೀ ಆಡಕೂಡದು. ಗಟ್ಟಿಯಾಗಿ ನಗಲೂ ಬಾರದು. ಪತಿಯು ಹೊರಗಡೆಯಿಂದ ಮನೆಗೆ ಬಂದೊಡನೆಯೇ ಜಾಗ್ರತೆಯಾಗಿ ಊಟಮಾಡಿಸಿ, ತಾಂಬೂಲವನ್ನು ಕೊಟ್ಟು ಚೆನ್ನಾಗಿ ಉಪಚರಿಸಬೇಕು. ಪಲ್ಲಂಗದ ಮೇಲೆ ಪತಿ ವಿಶ್ರಮಿಸುವ ವ್ಯವಸ್ಥೆ ಮಾಡಬೇಕು. ನಂತರ ಪತಿಯ ಪಾದಸೇವೆಯನ್ನು ಮಾಡಬೇಕು. ಮೃದುವಾಗಿ ಪತಿಯ ಕಾಲನ್ನು ಒತ್ತುತ್ತಾ, ಸವಿನಯವಾಗಿ ಹಿತವಾದ ಮಾತನಾಡುತ್ತಾ ಅವನ ಶ್ರಮವನ್ನೆಲ್ಲಾ ಹೋಗಲಾಡಿಸಬೇಕು – ಹೀಗೆ ಪಾರ್ವತಿಗೆ ಪಾತಿವ್ರತ್ಯಧರ್ಮವನ್ನು ಆ ವೃದ್ಧೆ ತಿಳಿಸಿಕೊಡುತ್ತಾಳೆ.

ಮಂಡಳಿ ಸ್ವಾಯತ್ತೆ ಕುರಿತು ಪ್ರಶ್ನೆ

ಬಳಕೆದಾರರ ಕುಂದು ಕೊರತೆಗಳಿಗೆ ಉತ್ತರಿಸಲು ಮಂಡಳಿಯೊಂದನ್ನು ಸ್ಥಾಪಿಸುವ ಉದ್ದೇಶದ ಬಗ್ಗೆ ಮಸೂದೆಯ 19ನೇ ಸೆಕ್ಷನ್‌ನಲ್ಲಿ ಉಲ್ಲೇಖಿಸಲಾಗಿದೆ. ಮಂಡಳಿಯ ರಚನೆ, ನಿಯಮಾವಳಿಗಳು, ಸದಸ್ಯರ ನೇಮಕ ಹಾಗೂ ವಜಾ ಮೊದಲಾದ ವಿಚಾರಗಳು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಒಳಪಡಲಿವೆ. ಇದು ಮಂಡಳಿಯ ಸ್ವಾಯತ್ತೆ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಆದರೆ, ಮಂಡಳಿಯ ಕಾರ್ಯಾಚರಣೆಯು ಸ್ವತಂತ್ರವಾಗಿ ಇರಲಿದೆ ಎಂದು ಕರಡು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಇದಕ್ಕೆ ಪೂರಕವಾದ ಯಾವ ಅಂಶಗಳೂ ಇದರಲ್ಲಿ ಇಲ್ಲ. ಸರ್ಕಾರ ವಾಪಸ್ ಪಡೆದಿರುವ 2019ರ ಮಸೂದೆಯಲ್ಲಿ, ಮಂಡಳಿಯು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ನೆರವಾಗುವ ಅಂಶಗಳಿದ್ದವು. ಆದರೆ, ಈ ಬಾರಿ ಅಂತಹ ಅಂಶಗಳನ್ನು ಕೈಬಿಡಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿನಲ್ಲಿ ಬಲಿಷ್ಠ ಅರ್ಜೆಂಟೀನಾ ತಂಡವನ್ನು ಸೋಲಿಸಿದ ಸೌದಿ ಅರೇಬಿಯಾ ತಂಡಕ್ಕೆ ಭಾರಿ ಪ್ರಶಂಸೆ ವ್ಯಕ್ತವಾಗಿದೆ. ಅಪೂರ್ವ ಗೆಲುವು ತಂದಿತ್ತ ತಂಡದ ಪ್ರತಿಯೊಬ್ಬ ಸದಸ್ಯನಿಗೆ ದುಬಾರಿ ರೋಲ್ಸ್ ರಾಯ್ಸ್ ಕಾರನ್ನು ಉಡುಗೊರೆಯಾಗಿ ನೀಡಲು ಸೌದಿ ದೊರೆ ಸಲ್ಮಾನ್ ಅವರು ನಿರ್ಧರಿಸಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಾಧ್ಯಮಗಳಲ್ಲಿ ಈ ವರದಿ ಪ್ರಕಟವಾಗಿದೆ. ಆದರೆ ಇದು ಸತ್ಯಕ್ಕೆ ದೂರವಾದುದು.



ಸೌದಿ ದೊರೆ ಸಲ್ಮಾನ್ ಅವರು ತಂಡದ ಸದಸ್ಯರಿಗೆ ಐಷಾರಾಮಿ ಕಾರು ನೀಡಲಿದ್ದಾರೆ ಎಂಬ ವಿಚಾರದಲ್ಲಿ ಯಾವುದೇ ಸತ್ಯಾಂಶ ಇಲ್ಲ ಎಂದು ‘ಆಲ್ಟ್ ನ್ಯೂಸ್’ ವರದಿ ಮಾಡಿದೆ. ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಸೌದಿ ಫುಟ್ಬಾಲ್ ಆಟಗಾರ ಸಾಲೇಹ್ ಅಲ್ ಶೆಹರಿ ಅವರು ಕಾರಿನ ಉಡುಗೊರೆ ವಿಚಾರವನ್ನು ಅಲ್ಲಗಳೆದಿದ್ದಾರೆ. ತಂಡದ ಮ್ಯಾನೇಜರ್ ಹರ್ವ್ ರೆನಾರ್ಡ್ ಅವರೂ ಈ ಸುದ್ದಿಯನ್ನು ತಳ್ಳಿಹಾಕಿದ್ದಾರೆ. ‘ಈ ಸುದ್ದಿಯಲ್ಲಿ ಸತ್ಯಾಂಶವಿಲ್ಲ. ಟೂರ್ನಿಯ ಈ ಹಂತದಲ್ಲಿ ಏನನ್ನಾದರೂ ಪಡೆಯುವುದು ಸರಿಯಲ್ಲ. ನಾವು ಟೂರ್ನಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ನಿಗದಿಯಾಗಿರುವ ಮಹತ್ವದ ಪಂದ್ಯಗಳನ್ನು ಆಡುವತ್ತ ನಮ್ಮ ಗಮನವಿದೆ’ ಎಂದು ಅವರು ಹೇಳಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಹಜ ಸರ್ವಾರ್ಪಣದ ಶಬರಿ

ತನ್ನ ರುಚಿ ರಾಮರುಚಿ, ತನ ಸಂತುಷ್ಟಿ ಪರಿ - |
ಪೂರ್ಣವಪ್ಪುದು ರಾಮಸಂತುಷ್ಟಿಯಿಂದೆ ||
ಎನ್ನುವಾ ಸಾಜದಾ ದೈವಾತ್ಮಭಾವದಲಿ |
ಧನ್ಯಳಾದಳು ಶಬರಿ – ಮಂಕುತಿಮ್ಮ || 765 ||

ಪದ-ಅರ್ಥ: ಪರಿಪೂರ್ಣವಪ್ಪುದು = ಪರಿಪೂರ್ಣವಾಗುವುದು, ರಾಮಸಂತುಷ್ಟಿಯಿಂದೆ = ರಾಮ + ಸಂತುಷ್ಟಿ(ತೃಪ್ತಿ) + ಇಂದೆ, ಸಾಜದಾ = ಸಹಜವಾದ.

ವಾಚ್ಯಾರ್ಥ: ರಾಮನ ರುಚಿಯೇ ತನ್ನ ರುಚಿ, ತನಗೆ ಸಂಪೂರ್ಣ ತೃಪ್ತಿ ದೊರಕುವುದು ರಾಮನ ಸಂತೃಪ್ತಿಯಿಂದ ಎನ್ನುವ ಸಹಜವಾದ ದೈವಾತ್ಮಭಾವವನ್ನು ಹೊಂದಿ ಶಬರಿ ಧನ್ಯಳಾದಳು.

ವಿವರಣೆ: ನಮ್ಮ ದಾರ್ಶನಿಕರು ಕಂಡುಕೊಂಡ ಭಕ್ತಿಯ ವಿಧಾನಗಳಲ್ಲಿ ಒಂಭತ್ತು ವಿಧ. ಅವುಗಳಲ್ಲಿ ಅತ್ಯಂತ ಎತ್ತರದ್ದು ಆತ್ಮನಿವೇದನೆ. ಅದು ಸಂಪೂರ್ಣ ಸರ್ವಾರ್ಪಣ ಬುದ್ಧಿ. ಗೋಪಿಯರು ಕೃಷ್ಣನಿಗೆ ತೋರಿದುದು ಅದೇ ಸರ್ವಾರ್ಪಣ. ಅವನ ದರ್ಶನವಿಲ್ಲದೆ ಒಂದು ಕ್ಷಣವೂ ಇರಲಾರರು. ಅವನ ಕೊಳಲ ದನಿ ಕೇಳಿ ತಮ್ಮ ಪರಿವಾರವನ್ನೆಲ್ಲ ತೊರೆದು ಬಂದವರವರು. ಕನಕದಾಸರದೂ ಅದೇ ಪ್ರಶ್ನೆ, “ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ?”. ಇಲ್ಲಿ ದ್ವಂದ್ವವಿಲ್ಲ. ಲೋಕದ ಬೆರಗು ಅವರನ್ನು ಸೆಳೆಯಲಿಲ್ಲ, ಭಗವಂತ ಕೊಟ್ಟ ಅನುಗ್ರಹವೇ ನಮಗೆ ದೊರೆತ ಜ್ಞಾನ ಮತ್ತು ಭಾಗ್ಯ. ನಮ್ಮ ಜೀವನದ ಉಸಿರೇ ಅವನ ಕೃಪೆ. ಅವನಿಲ್ಲದೆ ಜೀವನ ಸಾಧ್ಯವೇ? ಇದನ್ನು ತಮ್ಮ ಬದುಕಿನಲ್ಲಿ ತೋರಿಸಿದವರು ಗೋಪಿಯರು, ಬಲಿ ಮಹಾರಾಜ, ಲಕ್ಷ್ಮಣ, ಭರತ, ಹನುಮಂತ ಇವರೆಲ್ಲ. ಮಹಾದೇವಿಯಕ್ಕನ ಸರ್ವಾರ್ಪಣ, ಶರಣಾಗತಿ ಅದ್ಭುತ.

ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು, ಕನಸಿನಲ್ಲಿ ಕಳವಳಿಸಿ, ಆನು ಬೆರಗಾದೆ. ಆವಿಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ.

ಆಪತ್ತಿಗೆ ಸಖಿಯರನಾರನೂ ಕಾಣೆ. ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ, ಎನಗೆ ನೀ ಕರುಣಿಸಾ, ಚೆನ್ನ ಮಲ್ಲಿಕಾರ್ಜುನಾ.

ತನ್ನ ಬದುಕನ್ನು ಸಮರ್ಪಿಸಿ ಧನ್ಯತೆಯನ್ನು ಪಡೆದವಳು ಅಕ್ಕ. ಈ ಕಗ್ಗ ಮತ್ತೊಬ್ಬ ಅಂಥ ಆತ್ಮನಿವೇದನೆ ಮಾಡಿದ ಚೈತನ್ಯದ ಬಗ್ಗೆ ತಿಳಿಸುತ್ತದೆ. ಎಲ್ಲೋ ಕಿಷ್ಕಿಂಧೆಯ ಕಾಡಿನಲ್ಲಿದ್ದವಳು ಶಬರಿ. ಆಕೆಯ ಪ್ರಾರ್ಥನೆ ದೂರದ ಅಯೋಧ್ಯೆಯ ರಾಜಕುಮಾರ ರಾಮನಿಗೆ. ಆದರೆ ಅವಳ ಭಕ್ತಿಯ ಸೆಳೆತ ಆ ಸುಕುಮಾರ ರಾಜಕುಮಾರನನ್ನು ಹೆಡಮುರಿಗೆ ಕಟ್ಟಿ ಕಿಷ್ಕಿಂಧೆಗೆ ಎಳೆದುಕೊಂಡು ಬರುತ್ತದೆ. ಆತ್ಮನಿವೇದನದ ಶಕ್ತಿಯನ್ನು ಪ್ರಸಿದ್ಧಗೊಳಿಸುತ್ತದೆ. ರಾಮನ ರುಚಿಯೇ ತನಗೆ ರುಚಿ. ಅವನ ಸಂತುಷ್ಟಿಯೇ ತನ್ನ ತೃಪ್ತಿ ಎಂದು ತನ್ನ ಇಡೀ ಬದುಕನ್ನು ರಾಮದರ್ಶನಕ್ಕೆ ಮುಡಿಪಿಟ್ಟವಳು ಶಬರಿ. ಅವಳದು ಸಹಜವಾದ ದೈವಭಕ್ತಿ. ಅದಕ್ಕೆ ಅಪೇಕ್ಷೆ ಇಲ್ಲ. ನಿರಪೇಕ್ಷವಾದ ಭಕ್ತಿ ಸದಾ ಮಂಗಳವನ್ನೇ ಮಾಡುತ್ತದೆ. ಅದಕ್ಕೇ ಶಬರಿ ರಾಮದರ್ಶನವಾದ ಮೇಲೆ ಇನ್ನು ಭೌತಿಕ ದೇಹಕ್ಕೆ ಯಾವ ಬೆಲೆಯೂ ಇಲ್ಲ ಎಂಬಂತೆ ದೇಹ ತೊರೆದು ಹೋಗಿ ಬಿಟ್ಟಳು, ಶಾಶ್ವತಳಾದಳು. ನಿರಪೇಕ್ಷ, ಸರ್ವಾರ್ಪಣ ಬಹುದೊಡ್ಡ ಸಾಧನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಪಂಚಮಿ ಗಂ. 13-36 ನಕ್ಷತ್ರ: ಉತ್ತರಾಷಾಢ ಗಂ. 10-29 ಯೋಗ: ವೃದ್ಧಿ ಗಂ. 18-04, ಕರಣ: ಬಾಲವ ಗಂ. 13-36, ವೃಶ್ಚಿಕ ಮಾಸದ 11 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30-09-00
ಸೂರ್ಯೋದಯ: 06-40 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 03 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ: 1, 6

ಮೇಷ: ಕೆಲಸ ಕಾರ್ಯಗಳಲ್ಲಿ ಅಡಚಣೆ ಇರದು, ಸುಲಭದಲ್ಲಿ ನೆರವೇರುವುದು. ಪ್ರಾಚೀನ ವಸ್ತುಗಳ ಸಂಗ್ರಹದಂತಹ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ಹಿರಿಯರ ಮಾತಿನ ಬಗ್ಗೆ ಗಮನವಿರಲಿ.

ವೃಷಭ: ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ. ಸ್ವಾದಿಷ್ಟ ಭೋಜನದ ಯೋಗ ಪ್ರಾಪ್ತವಾಗುವುದು.

ಮಿಥುನ: ಈ ದಿನ ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಬಹಳ ಉಪಯೋಗವಾಗಲಿದೆ. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಸ್ವಲ್ಪ ಮಟ್ಟಿನ ಅನುಕೂಲಕರ ಬದಲಾವಣೆ ಕಾಣುವರು

ಕರ್ಕಾಟಕ: ಕೆಲಸದಲ್ಲಿ ನಿಮ್ಮ ಗಮನಕ್ಕೆ ಬರುವ ತಪ್ಪುಗಳನ್ನು ಪುನರಾವರ್ತನೆಯಾಗದಂತೆ ಗಮನಿಸಿದರೆ ಯಶಸ್ಸಿನ ದಾರಿ ಕಾಣಬಹುದು. ಸಿದ್ಧಿವಿನಾಯಕನ ಆರಾಧನೆ ಶುಭ ಉಂಟುಮಾಡುತ್ತದೆ.

ಸಿಂಹ: ಕಿರಿಯ ಸೋದರ ನೆರವಿಗೆ ಬರಲಿದ್ದಾನೆ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನಪ್ರಗತಿ ಸಾಧಿಸುವಿರಿ. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿ ಬರುವುದು.

ಕನ್ಯಾ: ಶತ್ರುಗಳ ಬಾಧೆ ದೂರಾಗಿ ಯೋಜನೆಗಳು ಈಡೇರಲಿದೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ. ಆದಾಯ ವೆಚ್ಚಗಳು ಸರಿ ಸಮವಾಗಿರುವುದು. ದೂರ ಪ್ರಯಾಣ ಮಾಡಬೇಕಾದ ಸಂದರ್ಭ ಬರಲಿದೆ.

ತುಲಾ: ತಂತ್ರಜ್ಞರಿಗೆ ಮತ್ತು ಕುಶಲ ಕಾರ್ಮಿಕರಿಗೆ ಬೇಡಿಕೆಗಳು ಹೆಚ್ಚುವುದು. ಮಗಳ ಮನೆಯಿಂದ ವಿಶೇಷ ಸುದ್ದಿ ಕೇಳುವಿರಿ. ಆಪ್ತರ ಸಕಾಲಿಕ ಸಹಾಯಕ್ಕೆ ಧನ್ಯವಾದ ತಿಳಿಸಿ. ಅವರ ಸಂಪರ್ಕವನ್ನು ಭದ್ರ ಮಾಡಿಕೊಳ್ಳಿ.

ವೃಶ್ಚಿಕ: ತಮ್ಮನ ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು ದಿನವಿಡೀ ಓಡಾಟ ನಡೆಸುವಿರಿ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ. ವಿವಾಹದ ವಿಷಯದ ಚರ್ಚೆ.

ಧನು: ಷೇರು ಮಾರಾಟದಿಂದ ಅಧಿಕ ಲಾಭವನ್ನು ಹೊಂದಬಹುದು. ದಿನದ ಅಂತ್ಯದಲ್ಲಿ ನಾಳೆಯ ದಿನದ ಅಧಿಕವಾದ ಕೆಲಸಗಳ ಬಗ್ಗೆ ಗಮನ ಹರಿಸುವುದು ಉತ್ತಮ. ಮಹಾವಿಷ್ಣುವಿನ ಸೇವೆಯಿಂದ ದೈವಾನುಕೂಲ ಒದಗಿ ಬರುವುದು.

ಮಕರ: ಇಂದು ನ್ಯಾಯಮೂರ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಸತ್ಫಲಗಳು ಸಿಗಲಿವೆ. ಸತ್ಕಾರ್ಯಗಳಿಂದ ಮನೆಯಲ್ಲಿ ಸಡಗರವಿರುವುದು ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ.

ಕುಂಭ: ಅತಿಯಾಗಿ ನಂಬಿಕೆ ಇಟ್ಟಿರುವ ವ್ಯಕ್ತಿಗಳಿಂದ ಅಥವಾ ನಿಮ್ಮವರಿಂದಲೇ ನಿಮಗೆ ತೊಂದರೆಗಳು ಆಗಲಿದೆ. ದೇಹದಲ್ಲಿ ಪಿತ್ತಾಧಿಕ್ಯದಿಂದ ಅಥವಾ ನಿದ್ದೆಯ ಅಭಾವದಿಂದ ಅನಾರೋಗ್ಯ ಉಂಟಾಗಬಹುದು.


ಮೀನ: ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಹಿಡಿತ ಸಿಗುವಂತಾಗುವುದು. ಧಾರ್ಮಿಕ ಕ್ಷೇತ್ರಗಳಿಗೆಭೇಟಿ ಮಾಡುವ ಆಲೋಚನೆ ಕಾರ್ಯರೂಪಕ್ಕೆ ತನ್ನಿರಿ. ಸ್ವಯಂ ಉದ್ಯೋಗಸ್ಥರಿಗೆ ಇನ್ನೊಬ್ಬರ ಸಹಾಯ ಅನಿವಾರ್ಯ.

ಪದಬಂಧ 5152

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಂಬಾಕು ಕತ್ತರಿಸಲು ಬಳಸಿದ ಕಿರುಗತ್ತಿ (2)
3.ತರಾತುರಿಯಿಂದ ಓಡುತ್ತಿರುವ ಅಶ್ವ (3)
5.ಕೆಸರಿನಲ್ಲಿ ಅರಳುವ ಹೂ (3)
7.ಸಸ್ಯಗಳಿಂದ ತೆಗೆದ ಜಿಡ್ಡು (4)
9.ಬದಿಯಲ್ಲಿರುವ ಜೈನ ದೇವಾಲಯ (3)
10.ಸ್ಪರ್ಧೆಗೆ ಕರೆಯುವುದು (3)
11.ಬಟ್ಟೆಗಳ ಮಡಿಕೆಗಳು ಮುರಿಯದೇ ಇರುವುದು (4)
13.ಮದುವೆ ಗಂಡು ತೋರಿದ ವ್ಯಾಯಾಮದ ಪಟ್ಟು (3)
15.ತಪ್ಪಿಗಾಗಿ ತೆರಬೇಕಾದ ಹಣ (3)
16.ಅಗೆದು ಮಾಡಿದ ಗುಣಿ (2)

ಮೇಲಿಂದ ಕೆಳಕ್ಕೆ
2.ಅಪಹಾಸ್ಯ ಅಥವಾ ವಂಚನೆ (3)
3.ಮನಸ್ಸಿನ ಗೊಂದಲ (3)
4.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
8.ಮನಸ್ಸಿಗೆ ಬಂದಂತೆ ನಡೆಯುವುದು (3)
9.ಉತ್ತರ ದಿಕ್ಕಿದು (3)
10.ಕೊನೆಗೆ ಬೆಲೆಯುಳ್ಳ ಸಲಿಗೆ (3)
12.ರೀತಿಯೊಡಗೂಡುವ ಪದ್ಧತಿ (3)
13.ಬಣ್ಣ ಹಚ್ಚಿರುವ ವಿಸ್ತಾರ ನಿರೂಪಣೆ (3)
14.ಸೀರೆಯ ಹೊದೆಯುವ ಭಾಗ (3)



5151ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಲಿಪಶು 3.ಅಂಗಡಿ
4.ಕಶೇರುಕ 6.ವಾರ
7.ಅಕಳಂಕ 8.ಕಾವಡಿ
9.ಪರದಾಡು 12.ಜಿರಾ
13.ಗರಗಸ 15.ಜಹಜು
16.ವಿನಿಮಯ

ಮೇಲಿಂದ ಕೆಳಕ್ಕೆ:
1.ಬಡಿವಾರ 2.ಶುಕ
3.ಅಂಗುಟ್ಟ 5.ಕಣಕ
7.ಅಡಿ 8.ಕಾಡು
9.ಪರಾಗ 10.ಪರಾಜಯ
11.ಬುರುಜು 14.ಸವಿ

ಸುಡೊಕು 5538

8		2		4		1		5
			8		9		6	
9		6			7	2		4
			1	6				
	2			7	3	8		6
				8				
		8		9	2	5		1
1	9	5	7				4	
2		3		5	1	9		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5537 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

2022ರಲ್ಲಿ ಈವರೆಗೆ ₹1.37 ಲಕ್ಷ ಕೋಟಿ ಹೊರಹರಿವು

ಎಫ್‌ಪಿಐ: ₹ 31,630 ಕೋಟಿ ಹೂಡಿಕೆ



ಮುಖ್ಯಾಂಶಗಳು
- ಸಾಲಪತ್ರ ಮಾರುಕಟ್ಟೆಯಿಂದ ₹2,300 ಕೋಟಿ ಹಿಂತೆಗೆತ
- ಅಲ್ಪಾವಧಿಯಲ್ಲಿ ಬಂಡವಾಳ ಒಳಹರಿವು ಅಸ್ಥಿರವಾಗಿರುವ ಸಾಧ್ಯತೆ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ನವೆಂಬರ್ 1ರಿಂದ 25ರವರೆಗೆ ದೇಶದ ಬಂಡವಾಳ ಮಾರುಕಟ್ಟೆಗಳ ಮೂಲಕ ₹ 31,630 ಕೋಟಿ ಹೂಡಿಕೆ ಮಾಡಿದ್ದಾರೆ.

ಬಡ್ಡಿ ದರವನ್ನು ಹೆಚ್ಚಿನ ಪ್ರಮಾಣದಲ್ಲಿ ಜಾಸ್ತಿ ಮಾಡುವ ಪ್ರಕ್ರಿಯೆಗೆ ತಡೆ ಬೀಳುವ ನಿರೀಕ್ಷೆ ಮತ್ತು ಆರ್ಥಿಕ ಚಟುವಟಿಕೆಗಳ ಕುರಿತು ಸಕಾರಾತ್ಮಕ ಭಾವನೆಯಿಂದಾಗಿ ಇಷ್ಟು ಮೊತ್ತ ಹೂಡಿಕೆ ಮಾಡಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ನ್ಯಾಷನಲ್ ಸೆಕ್ಯುರಿಟಿ ಡಿಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಅಕ್ಟೋಬರ್‌ನಲ್ಲಿ ₹ 8 ಕೋಟಿ ಹಾಗೂ ಸೆಪ್ಟೆಂಬರ್‌ನಲ್ಲಿ ₹ 7,624 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು. ನವೆಂಬರ್‌ನಲ್ಲಿ ಮತ್ತೆ ಹೂಡಿಕೆಗೆ ಗಮನ ನೀಡಿದ್ದಾರೆ. ಈ ವರ್ಷದಲ್ಲಿ ಈವರೆಗೆ ಒಟ್ಟು ₹ 1.37 ಲಕ್ಷ ಕೋಟಿ ಬಂಡವಾಳ ಹೊರಹರಿವು ಆಗಿದೆ.

ಜಾಗತಿಕ ಮಟ್ಟದ ರಾಜಕೀಯ ವಿದ್ಯಮಾನಗಳಿಂದಾಗಿ ಅಲ್ಪಾವಧಿಯಲ್ಲಿ ಎಫ್‌ಪಿಐ ಒಳಹರಿವು ಅಸ್ಥಿರವಾಗಿರುವ ನಿರೀಕ್ಷೆ ಇದೆ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಭಾರತದ ಷೇರುಪೇಟೆಗಳಲ್ಲಿ ನಡೆಯುತ್ತಿರುವ ಉತ್ತಮ ವಹಿವಾಟಿನಿಂದಾಗಿ ನವೆಂಬರ್‌ನಲ್ಲಿ ಬಂಡವಾಳ ಒಳಹರಿವು ಕಂಡುಬಂದಿದೆ. ಜಾಗತಿಕ ಮಟ್ಟದಲ್ಲಿ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದ ಆರ್ಥಿಕತೆಯು ಸ್ಥಿರವಾಗಿರುವುದು ಮತ್ತು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸ್ಥಿರತೆ ಕಂಡುಕೊಳ್ಳುತ್ತಿರುವುದು ಸಹ ಬಂಡವಾಳ ಒಳಹರಿವಿನ ಮೇಲೆ ಪ್ರಭಾವ ಬೀರಿವೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ಚಿನ್ನದ ಆಮದು ಶೇ 17ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಚಿನ್ನದ ಆಮದು ಮೌಲ್ಯವು ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ₹ 1.96 ಲಕ್ಷ ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 17.38ರಷ್ಟು ಇಳಿಕೆ ಆಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಹೇಳಿದೆ.

2021–22ರ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಆಮದು ಮೌಲ್ಯ ₹ 2.36 ಲಕ್ಷ ಕೋಟಿ ಇತ್ತು. 2022ರ ಅಕ್ಟೋಬರ್ ತಿಂಗಳೊಂದರಲ್ಲಿಯೇ ಚಿನ್ನದ ಆಮದು ಶೇ 27.47ರಷ್ಟು ಇಳಿಕೆ ಕಂಡಿದ್ದು, ₹ 30,217 ಕೋಟಿಗೆ ತಲುಪಿದೆ.

ಬೆಳ್ಳಿ ಆಮದು ಮೌಲ್ಯವು ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ₹ 12,413 ಕೋಟಿಯಿಂದ ₹ 39,201ಕೋಟಿಗೆ ಏರಿಕೆ ಆಗಿದೆ.

ಹರಳು ಮತ್ತು ಆಭರಣ ರಫ್ತು 2022ರ ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಶೇ 1.81ರಷ್ಟು ಏರಿಕೆ ಕಂಡು ₹ 1.96 ಲಕ್ಷ ಕೋಟಿಗೆ ತಲುಪಿದೆ ಎಂದು ಸಚಿವಾಲಯವು ತಿಳಿಸಿದೆ.

ಭಾರತವು ಅತಿ ಹೆಚ್ಚಿನ ಪ್ರಮಾಣದಲ್ಲಿ ಚಿನ್ನವನ್ನು ಆಮದು ಮಾಡಿಕೊಳ್ಳುವ ದೇಶವಾಗಿದೆ. ವಾರ್ಷಿಕವಾಗಿ 800 ರಿಂದ 900 ಟನ್ ಆಮದು ಮಾಡಿಕೊಳ್ಳಲಾಗುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಸಾಲ ಪಡೆಯುವಾಗಿನ ಐದು ತಪ್ಪುಗಳು



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಸಾಲ ಪಡೆಯುವಾಗ ಸಿಹಿ, ಹಿಂದಿರುಗಿಸುವಾಗ ಕಹಿ. ಈ ಕಾರಣಕ್ಕಾಗಿಯೇ ಸಾಲ ಪಡೆಯುವಾಗ ಸಾಕಷ್ಟು ಎಚ್ಚರಿಕೆಯಿಂದ ಮುನ್ನಡೆಯಬೇಕು. ಆಲೋಚನೆ ಮಾಡದೆ ಸಾಲ ಪಡೆದರೆ, ಸಾಲದ ಶೂಲಕ್ಕೆ ಸಿಲುಕಬಹುದು. ಸಾಲ ಪಡೆಯುವಾಗ ಯಾವ ತಪ್ಪುಗಳನ್ನು ಮಾಡಬಾರದು ಅನ್ನುವ ಬಗ್ಗೆ ವಿವರವಾಗಿ ತಿಳಿಯೋಣ.

1. ಎಲ್ಲ ಸಾಲಗಳನ್ನು ಒಂದೇ ಎಂದು ಭಾವಿಸುವುದು: ಸಾಲ ಎಂದಾಕ್ಷಣ ಎಲ್ಲ ಸಾಲಗಳೂ ಒಂದೇ ಎಂದು ಭಾವಿಸುತ್ತೇವೆ. ಆದರೆ ಸಾಲಗಳಲ್ಲಿ ಅನೇಕ ವಿಧಗಳಿವೆ. ಸಾಲಕ್ಕೆ ಅನುಗುಣವಾಗಿ ನಿಯಮಗಳು ಬದಲಾಗುತ್ತವೆ. ಸಾಲಗಳನ್ನು ನಾವು ಎರಡು ರೀತಿಯಾಗಿ ವಿಂಗಡಿಸಬಹುದು. ಒಂದು, ಉತ್ಪಾದಕ ಸಾಲ. ಮತ್ತೊಂದು. ಅನುತ್ಪಾದಕ ಸಾಲ. ಮನೆ ಖರೀದಿ, ಉನ್ನತ ವಿದ್ಯಾಭ್ಯಾಸಕ್ಕಾಗಿ ಮಾಡುವ ಸಾಲವನ್ನು ಉತ್ಪಾದಕ ಸಾಲ ಎಂದು ಪರಿಗಣಿಸಬಹುದು. ಸಾಲ ಮಾಡಿ ಮನೆ ಖರೀದಿಸಿದಾಗ ಸಂಪತ್ತು ಸೃಷ್ಟಿಯಾಗುತ್ತದೆ. ಹಾಗೆಯೇ ಉನ್ನತ ವ್ಯಾಸಂಗಕ್ಕಾಗಿ ಸಾಲ ಮಾಡಿದಾಗ ಓದಿನ ಬಳಿಕ ಒಳ್ಳೆಯ ಕೆಲಸ ದೊರೆತು ಸಂಬಳದ ರೂಪದಲ್ಲಿ ಆದಾಯ ಲಭಿಸುತ್ತದೆ.

ಆದರೆ ತುರ್ತು ಅಗತ್ಯಗಳಿಗೆ ಅಥವಾ ಇನ್ನಾವುದೋ ಕಾರಣಕ್ಕೆ ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್ ಸಾಲ ಪಡೆದಾಗ ಅದು ಅನುತ್ಪಾದಕ ಸಾಲ ಎನಿಸಿಕೊಳ್ಳುತ್ತದೆ. ಅನುತ್ಪಾದಕ ಸಾಲಗಳಿಗೆ ಸಾಮಾನ್ಯವಾಗಿ ಬಡ್ಡಿ ದರ ಜಾಸ್ತಿ ಇರುತ್ತದೆ. ಲೆಕ್ಕಾಚಾರವಿಲ್ಲದೆ ಅನುತ್ಪಾಕದ ಸಾಲಗಳನ್ನು ಮಾಡಿಕೊಂಡರೆ ಆರ್ಥಿಕ ಸ್ಥಿತಿ ಹದಗೆಡುತ್ತದೆ.

2. ಸಾಮರ್ಥ್ಯಕ್ಕಿಂತ ಹೆಚ್ಚು ಸಾಲ ಮಾಡುವುದು: ಎಷ್ಟು ಸಾಲ ಮಾಡುತ್ತೇವೆ ಎನ್ನುವುದು ಸಾಲ ಪಡೆಯುವಾಗ ಪರಿಗಣಿಸಬೇಕಾದ ಅತಿ ಮುಖ್ಯ ಮಾನದಂಡ. ನಮ್ಮ ಆದಾಯದ ಶೇಕಡ 30ರಿಂದ ಶೇ 35ರಷ್ಟು ಮಾತ್ರ ನಮ್ಮ ಸಾಲದ ಮಾಸಿಕ ಕಂತು (ಇಎಂಐ) ಆಗಿರಬೇಕು. ಅದಕ್ಕಿಂತ ಹೆಚ್ಚು ಸಾಲ ಪಡೆದರೆ ಆರ್ಥಿಕ ಸಂಕಷ್ಟ ಎದುರಾಗುತ್ತದೆ. ಕೆಲವರು ಕಾರು, ಮನೆ, ಮೊಬೈಲ್ ಫೋನ್, ಲ್ಯಾಪ್‌ಟಾಪ್, ಇತರೆ ಗೃಹ ಬಳಕೆ ವಸ್ತುಗಳು ಒಳಗೊಂಡಂತೆ ಎಲ್ಲ ವಸ್ತುಗಳನ್ನೂ ಸಾಲದಲ್ಲೇ ಖರೀದಿ ಮಾಡುತ್ತಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚು ಎನ್ನುವ ಹಿತನುಡಿಯನ್ನು ಮರೆಯುತ್ತಾರೆ. ಮೇಲಿಂದ ಮೇಲೆ ತಪ್ಪು ಮಾಡಿ ಸಾಲದ ಸುಳಿಗೆ ಸಿಲುಕುತ್ತಾರೆ.

3. ಕ್ರೆಡಿಟ್ ಸ್ಕೋರ್ ಕಡೆಗಣಿಸುವುದು: ಸ್ಪರ್ಧಾತ್ಮಕ ಬಡ್ಡಿ ದರಕ್ಕೆ ನಿಮಗೆ ಸಾಲ ಸಿಗಬೇಕು ಎಂದಾದರೆ ಉತ್ತಮ ಕ್ರೆಡಿಟ್ ಸ್ಕೋರ್ ಇರಬೇಕು. ನಮಗೆ ಪರೀಕ್ಷೆಯಲ್ಲಿ ಹೇಗೆ ಅಂಕಗಳು ಮಾನದಂಡವೋ ಅದೇ ರೀತಿ ಸಾಲ ಪಡೆಯಲು ಕ್ರೆಡಿಟ್ ಸ್ಕೋರ್ ಮಾನದಂಡವಾಗಿರುತ್ತದೆ. ಯಾರು ಕ್ರೆಡಿಟ್ ಕಾರ್ಡ್ ಬಾಕಿ ಮೊತ್ತ ಪಾವತಿ, ಸಾಲ ಮರುಪಾವತಿಯನ್ನು ನಿಯಮಬದ್ಧವಾಗಿ ನಿರ್ವಹಿಸುತ್ತಾರೋ ಅವರ ಕ್ರೆಡಿಟ್ ಸ್ಕೋರ್ ಉತ್ತಮವಾಗಿರುತ್ತದೆ.

ನಿಮ್ಮ ಕ್ರೆಡಿಟ್ ಸ್ಕೋರ್ 750ರಿಂದ 800ರವರೆಗೆ ಇದ್ದರೆ ನಿಮಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗಾಗಿ ಕ್ರೆಡಿಟ್ ಸ್ಕೋರ್ ಕಡೆಗಣಿಸಬೇಡಿ. ಕ್ರೆಡಿಟ್ ಸ್ಕೋರ್‌ನಲ್ಲಿ ಕೆಲವು ತಪ್ಪುಗಳಾಗುವ ಅಪಾಯ ಇರುತ್ತದೆ. ಹೀಗಾಗಿ, ವರ್ಷಕ್ಕೊಮ್ಮೆ ಕ್ರೆಡಿಟ್ ಸ್ಕೋರ್ ಪರಿಶೀಲಿಸಿಕೊಂಡು ವರದಿಯಲ್ಲಿ ತಪ್ಪು ಕಂಡರೆ ಸರಿಪಡಿಸಿಕೊಳ್ಳಿ.

4. ಅಧ್ಯಯನ ಮಾಡದಿರುವುದು: ಸಾಲ ತೆಗೆದುಕೊಳ್ಳುವಾಗ ತರಾತುರಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ. ಸಾಕಷ್ಟು ಅಧ್ಯಯನ ಮಾಡಿದ ನಂತರ ತೀರ್ಮಾನ ತೆಗೆದುಕೊಳ್ಳಿ. ಯಾವ ಬ್ಯಾಂಕ್‌ನಲ್ಲಿ ಸಾಲಕ್ಕೆ ಬಡ್ಡಿ ಕಡಿಮೆ ಇದೆ, ಸಾಲ ಪಡೆಯಲು ನೀಡಬೇಕಿರುವ ಶುಲ್ಕಗಳೇನು, ಜಂಟಿಯಾಗಿ ಸಾಲ ಪಡೆದರೆ ಹೆಚ್ಚು ಅನುಕೂಲವೇ... ಹೀಗೆ ಎಲ್ಲ ಆಯಾಮಗಳಲ್ಲಿ ಪರಿಶೀಲಿಸಿದ ನಂತರ ನಿರ್ಧಾರಕ್ಕೆ ಬನ್ನಿ. ಎನ್‌ಬಿಎಫ್‌ಸಿ, ಅಂದರೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿ ಸಿಗುವ ಸಾಲಕ್ಕೆ ಕೆಲವೊಮ್ಮೆ ಹೆಚ್ಚು ಬಡ್ಡಿ ಕಟ್ಟಬೇಕಾಗುತ್ತದೆ. ಹೀಗಾಗಿ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದ ಸಾಲ ಪಡೆದುಯುವುದರೆ ಹೆಚ್ಚಿನ ಲಾಭ ಆಗುತ್ತದೆಯೇ ಎಂಬುದನ್ನು ಗಮನಿಸಿ. ಯಾರು ಬೇಗ ಸಾಲ ಕೊಡುತ್ತಾರೆ ಎನ್ನುವುದನ್ನಷ್ಟೇ ಪರಿಗಣಿಸಬೇಡಿ; ಯಾರಿಂದ ಸಾಲ ಪಡೆದರೆ ಹೆಚ್ಚು ಲಾಭ ಎನ್ನುವ ಅಂದಾಜು ಮಾಡಿ ಮುಂದುವರಿಯಿರಿ.

5. ಕ್ರೆಡಿಟ್ ಕಾರ್ಡ್ – ಇರಲಿ ಎಚ್ಚರಿಕೆ: ಶಾಪಿಂಗ್‌ಗೆ ಹೋದರೆ ಕ್ರೆಡಿಟ್ ಕಾರ್ಡ್ ಮೂಲಕ ದುಡ್ಡು ಖರ್ಚಾಗುವುದೇ ತಿಳಿಯುವುದಿಲ್ಲ. ಆದರೆ, ಕ್ರೆಡಿಟ್ ಕಾರ್ಡ್ ಇರುವುದು ಕಷ್ಟದ ಸಂದರ್ಭಗಳಿಗೆ ಎನ್ನುವುದನ್ನು ಮರೆಯಬಾರದು. ಕ್ರೆಡಿಟ್ ಕಾರ್ಡ್‌ನಲ್ಲಿ ಪ್ರತಿ ಬಾರಿಯೂ ಮಿನಿಮಂ ಅಮೌಂಟ್ ಡ್ಯೂ ಪಾವತಿ (ಕನಿಷ್ಠ ಬಾಕಿ ಪಾವತಿ) ಮಾಡುವುದರಿಂದ ನೀವು ಬಡ್ಡಿಯ ವಿಷವರ್ತುಲಕ್ಕೆ ಸಿಲುಕುತ್ತೀರಿ. ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಗೆ ಸ್ಥಾಯಿ ಸೂಚನೆ (Standing Instruction) ಕೊಟ್ಟುಬಿಡಿ. ಇದರಿಂದ ನೀವು ಬಿಲ್ ಪಾವತಿ ವಿಳಂಬಕ್ಕೆ ಕಟ್ಟುವ ದಂಡ ತಡೆಯಬಹುದು. ನಿಮ್ಮ ಕ್ರೆಡಿಟ್ ಕಾರ್ಡ್ ಲಿಮಿಟ್ (ಮಿತಿ) ₹ 30 ಸಾವಿರ ಇದ್ದರೆ ₹ 27 ಸಾವಿರ, ₹ 28 ಸಾವಿರದಷ್ಟು ಖರ್ಚು ಮಾಡಬೇಡಿ. ನಿಮ್ಮ ಕ್ರೆಡಿಟ್ ಲಿಮಿಟ್‌ಗಿಂತ ಬಹಳ ಕಡಿಮೆ ಖರ್ಚು ಮಾಡಿ. ಕ್ರೆಡಿಟ್ ಲಿಮಿಟ್‌ನ ಗರಿಷ್ಠ ಬಳಕೆಯಿಂದ ಕ್ರೆಡಿಟ್ ಸ್ಕೋರ್ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ದಾಖಲೆ ಮಟ್ಟಕ್ಕೆ ಜಿಗಿದ ಷೇರುಪೇಟೆ

ಷೇರುಪೇಟೆ

ಭಾರತೀಯ ಷೇರುಪೇಟೆ ಸೂಚ್ಯಂಕಗಳು ಸರ್ವಕಾಲಿಕ ಮಟ್ಟಕ್ಕೆ ಏರಿಕೆ ಕಂಡಿವೆ. ನವೆಂಬರ್ 25ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ದಾಖಲಿಸಿವೆ. 62,293 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1ರಷ್ಟು ಜಿಗಿದಿದೆ. 18,512 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.12ರಷ್ಟು ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ಬಡ್ಡಿ ದರವನ್ನು ನಿಧಾನಗತಿಯಲ್ಲಿ ಹೆಚ್ಚಳ ಮಾಡುವುದಾಗಿ ಅಮೆರಿಕದ ಫೆಡರಲ್ ಬ್ಯಾಂಕ್ ಹೇಳಿದ್ದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿ ಉತ್ಸಾಹ, ತೈಲ ಬೆಲೆ ಇಳಿಕೆ, ಡಾಲರ್ ಕುಸಿತ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 5.4ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 5ರಷ್ಟು, ಅನಿಲ ಹಾಗೂ ತೈಲ ಸೂಚ್ಯಂಕ ಶೇ 2.5ರಷ್ಟು ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 2.5ರಷ್ಟು ಜಿಗಿದಿವೆ. ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 1ರಷ್ಟು ಇಳಿಕೆ ದಾಖಲಿಸಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ, ಇಂಟರ್ ಗ್ಲೋಬ್ ಏವಿಯೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಟಾಟಾ ಮೋಟರ್ಸ್ – ಡಿವಿಆರ್ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಗಳಿಕೆ ಕಂಡಿವೆ. ಪೇಟಿಎಂ, ಅದಾನಿ ಟ್ರಾನ್ಸ್‌ಮಿಷನ್, ನೈಕಾ ಮತ್ತು ಹಿಂದೂಸ್ಥಾನ್ ಜಿಂಕ್ ಶೇ 8ರಿಂದ ಶೇ 15ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಫ್ಯೂಷನ್ ಮೈಕ್ರೋ ಫೈನಾನ್ಸ್ ಲಿ., ವಲೇಚಾ ಇಂಜಿನಿಯರ್ಸ್ ಲಿ., ವಾನ್ ಬರಿ ಲಿ., ಜೆಸಿಟಿ ಲಿ., ಟ್ರೇಡ್ ವಿಂಗ್ಸ್ ಲಿ., ಧರಣಿ ಫೈನಾನ್ಸ್ ಲಿ., ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶಿ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ನನ್ನ ಹತ್ಯೆ ಯತ್ನದಲ್ಲಿ ಮೂವರು ಭಾಗಿ: ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): 'ವಜೀರಾಬಾದ್‌ನಲ್ಲಿ ನ.3ರಂದು ನನ್ನ ಹತ್ಯೆಗೆ ಯತ್ನಿಸಿದ ಪ್ರಕರಣದಲ್ಲಿ ಮೂವರು ಶೂಟರ್‌ಗಳು ಭಾಗಿಯಾಗಿದ್ದರು' ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಹಾಗೂ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ ಪಕ್ಷದ ಅಧ್ಯಕ್ಷ ಇಮ್ರಾನ್ ಖಾನ್ ಆರೋಪಿಸಿದ್ದಾರೆ.

ಗುಣಮುಖರಾದ ಬಳಿಕ ಅವರು ಮೊದಲ ಬಾರಿಗೆ ರಾವಲ್ಪಿಂಡಿಯ ಗ್ಯಾರಿಸನ್ ಸಿಟಿಯಲ್ಲಿ ಶನಿವಾರ ರಾತ್ರಿ ನಡೆದ ಬೃಹತ್ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು.

'ಮೊದಲು ಬಂಧಿಸಿದ ಇಬ್ಬರು ದಾಳಿಕೋರರಲ್ಲಿ ಒಬ್ಬ ನನ್ನ ಹಾಗೂ ಪಕ್ಷದ ಮುಖಂಡರ ಮೇಲೆ ಗುಂಡು ಹಾರಿಸಿದ. ಮತ್ತೊಬ್ಬ ನಾನಿದ್ದ ವಾಹನದ ಮೇಲೆ ಗುಂಡು ಹಾರಿಸಿದ. ನನ್ನ ಮೇಲೆ ಗುಂಡು ಹಾರಿಸಿದವನನ್ನು ಕೊಲ್ಲಲು ಮೂರನೇ ವ್ಯಕ್ತಿ ನಿಯೋಜಿಸಲಾಗಿತ್ತು' ಎಂದು ಅವರು ದೂರಿದರು.

'ನನ್ನನ್ನು ಕೊಲ್ಲಲು ಬಂದಿದ್ದ ವ್ಯಕ್ತಿಯನ್ನು ಕೊಲ್ಲುವ ಬದಲು ರ‍್ಯಾಲಿಯಲ್ಲಿ ಭಾಗವಹಿಸಿದ್ದವರಲ್ಲಿ ಒಬ್ಬರನ್ನು ಆ ಮೂರನೇ ವ್ಯಕ್ತಿ ಗುಂಡು ಹಾರಿಸಿ ಕೊಂದಿದ್ದಾನೆ' ಎಂದು ಆರೋಪಿಸಿದರು.

'ಚುನಾವಣೆ ಘೋಷಣೆಯಾಗುವವರೆಗೂ ಸರ್ಕಾರದ ವಿರುದ್ಧ ನನ್ನ ಪ್ರತಿಭಟನೆ ಮುಂದುವರಿಯಲಿದೆ' ಎಂದರು.



ಗುಲ್‌ಮಾರ್ಗ್... ಜಮ್ಮು–ಕಾಶ್ಮೀರದ ಪ್ರವಾಸಿ ತಾಣ ಗುಲ್‌ಮಾರ್ಗ್‌ನ ಸ್ಕೀ ರೆಸಾರ್ಟ್ ಬಳಿ ಇರುವ ಗಾಜಿನ ಮನೆಗಳನ್ನು ಪ್ರವಾಸಿಗರು ಶನಿವಾರ ವೀಕ್ಷಿಸಿದರು –ಪಿಟಿಐ ಚಿತ್ರ

'ರಾಮದೇವ್ ದೇಶದ ಜನರ ಕ್ಷಮೆಯಾಚಿಸಲಿ'

ನವದೆಹಲಿ: 'ಮಹಿಳೆಯರು ಸೀರೆ ಉಟ್ಟರೆ ಸುಂದರ, ಸಲ್ವಾರ್ ಕಮೀಜ್ ಧರಿಸಿದರೆ ಅತಿ ಸುಂದರ, ಬಟ್ಟೆಯನ್ನೇ ಧರಿಸದಿದ್ದರೂ ಅಂದವಾಗಿ ಕಾಣಿಸುತ್ತಾರೆ' ಎಂಬ ಯೋಗ ಗುರು ಬಾಬಾ ರಾಮದೇವ್ ಅವರ ಹೇಳಿಕೆಗೆ ನವದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲಿವಾಲ್ ಕಿಡಿಕಾರಿದ್ದಾರೆ.

ರಾಮದೇವ್ ಅವರು ಆಡಿದ ಮಾತಿನ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಹೇಳಿಕೆಯ ವಿಡಿಯೊ ಹಂಚಿಕೊಂಡಿರುವ ಸ್ವಾತಿ ಮಾಲಿವಾಲ್, 'ಮಹಿಳೆಯರ ಬಗ್ಗೆ ಹಗುರ ಹೇಳಿಕೆ ನೀಡಿರುವ ರಾಮದೇವ್ ಕೂಡಲೇ ದೇಶದ ಜನತೆಯ ಕ್ಷಮೆ ಕೇಳಬೇಕು' ಎಂದು ಟ್ವೀಟ್ ಮಾಡಿದ್ದಾರೆ.

'ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಪತ್ನಿ ಮುಂದೆ ಮಹಿಳೆಯರ ಬಗ್ಗೆ ರಾಮದೇವ್ ನೀಡಿದ ಹೇಳಿಕೆಗಳು ಅಸಭ್ಯ ಮತ್ತು ಖಂಡನೀಯ. ಈ ಹೇಳಿಕೆಯಿಂದ ಮಹಿಳೆಯರ ಮನಸ್ಸಿಗೆ ನೋವಾಗಿದೆ' ಎಂದು ಅವರು ಹೇಳಿದ್ದಾರೆ.

ಠಾಣೆಯಲ್ಲಿ ಆಯೋಜಿಸಿದ್ದ ಯೋಗ ಶಿಬಿರದಲ್ಲಿ ರಾಮದೇವ್ ಪಾಲ್ಗೊಂಡಿದ್ದರು. ದೇವೇಂದ್ರ ಫಡಣವೀಸ್ ಪತ್ನಿ ಅಮೃತಾ, ಸಿ.ಎಂ ಏಕನಾಥ್ ಶಿಂದೆ ಅವರ ಮಗ ಮತ್ತು ಸಂಸದ ಶ್ರೀಕಾಂತ್ ಶಿಂದೆ ಕೂಡ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

'ಪ್ರಜೆಗಳ ಖಾಸಗಿತನಕ್ಕೆ ಧಕ್ಕೆ ಇಲ್ಲ'

ನವದೆಹಲಿ: 'ಪ್ರಜೆಗಳ ಖಾಸಗಿತನಕ್ಕೆಧಕ್ಕೆ ತರುವ ಕೆಲಸವನ್ನು ಸರ್ಕಾರ ಮಾಡುವುದಿಲ್ಲ. ಕೆಲ ತುರ್ತು ಸಂದರ್ಭಗಳಲ್ಲಿ ಮಾತ್ರ ಸರ್ಕಾರವು ಪ್ರಜೆಗಳ ವೈಯಕ್ತಿಕ ದತ್ತಾಂಶವನ್ನು ಪಡೆದುಕೊಳ್ಳುತ್ತದೆ' ಎಂದು ಕೇಂದ್ರ ಸರ್ಕಾರ ಹೇಳಿದೆ.

ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಯಲ್ಲಿ ಸರ್ಕಾರಿ ಸಂಸ್ಥೆಗಳಿಗೆ ಸಾಕಷ್ಟು ವಿನಾಯಿತಿ ನೀಡಲಾಗಿದೆ ಎಂದು ಆರೋಪ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೀಗೆ ಹೇಳಿದರು.

ರಾಷ್ಟ್ರೀಯ ಭದ್ರತೆ, ಸಾಂಕ್ರಾಮಿಕ, ಆರೋಗ್ಯಸೇವೆ, ನೈಸರ್ಗಿಕ ವಿಕೋಪದಂಥ ಸಂದರ್ಭಗಳಲ್ಲಿ ಮಾತ್ರ ದೇಶದ ಪ್ರಜೆಗಳ ವೈಯಕ್ತಿಕ ದತ್ತಾಂಶವನ್ನು ಸರ್ಕಾರ ಪಡೆಯಬಹುದು ಎಂದು ಅವರು ಹೇಳಿದರು.

ಮೇಘಾಲಯ: ಪ್ರಯಾಣಕ್ಕೆ ಮುಕ್ತ

ಗುವಾಹಟಿ (ಪಿಟಿಐ): ಅಸ್ಸಾಂ– ಮೇಘಾಲಯ ಗಡಿಯಲ್ಲಿ ನಡೆದ ಗಲಭೆ ಕಾರಣದಿಂದಾಗಿ ಸಾರ್ವಜನಿಕರಿಗೆ ಮೇಘಾಲಯ ಪ್ರಯಾಣವನ್ನು ನಿರ್ಬಂಧಿಸಲಾಗಿತ್ತು. ಘಟನೆ ನಡೆದ ಆರು ದಿನಗಳ ಬಳಿಕ ಈ ನಿರ್ಬಂಧವನ್ನು ಭಾನುವಾರ ತೆರವು ಮಾಡಲಾಗಿದೆ.

ಉಕ್ರೇನ್– ಶೆಲ್ ದಾಳಿ: 32 ಜನರ ಸಾವು

ಕೆರ್ಸಾನ್/ಮಾಸ್ಕೊ (ಎಪಿ): ಉಕ್ರೇನ್‌ನ ಪ್ರಮುಖ ನಗರಗಳಲ್ಲಿನ ವಿದ್ಯುತ್ ಪೂರೈಕೆ, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಸೇರಿ ಪ್ರಮುಖ ಮೂಲಸೌಕರ್ಯಗಳನ್ನು ಕ್ಷಿಪಣಿಗಳ ದಾಳಿ ಮೂಲಕ ಹಾನಿಗೊಳಿಸಿರುವ ರಷ್ಯಾ ಪಡೆಗಳು, ಭಾನುವಾರ ದಕ್ಷಿಣ ಉಕ್ರೇನ್‌ನ ಹಲವು ಪ್ರದೇಶಗಳನ್ನು ಗುರಿಯಾಗಿಸಿ ಕ್ಷಿಪಣಿ ಮತ್ತು ಶೆಲ್ ದಾಳಿ ನಡೆಸಿದವು.

ರಷ್ಯಾ ತನ್ನ ಸೇನೆ ಹಿಂಪಡೆದ ಎರಡು ವಾರಗಳಲ್ಲಿ ಕೆರ್ಸಾನ್ ಮೇಲೆ ನಡೆಸಿರುವ ಶೆಲ್ ದಾಳಿಗೆ ಇದುವರೆಗೆ 32 ನಾಗರಿಕರು ಮೃತಪಟ್ಟಿರುವುದಾಗಿ ಉಕ್ರೇನ್ ಪೊಲೀಸರು ತಿಳಿಸಿದ್ದಾರೆ.

ಭಾರತೀಯ ಮೂಲದವರ ಪ್ರತಿಭಟನೆ

ನ್ಯೂಯಾರ್ಕ್ (ಪಿಟಿಐ): ಮುಂಬೈ ಮೇಲೆ ಭಯೋತ್ಪಾದಕರ ದಾಳಿ ನಡೆದು 14 ವರ್ಷಗಳು ಸಂದಿರುವ ಸಂದರ್ಭದಲ್ಲಿ ಭಾರತೀಯ ವಲಸಿಗರು, ಇಲ್ಲಿರುವ ಪಾಕಿಸ್ತಾನ ಕಾನ್ಸುಲೇಟ್ ಕಚೇರಿ ಹೊರಗೆ ಪ್ರತಿಭಟನೆ ನಡೆಸಿದರು. ಈ ದಾಳಿಯ ದುಷ್ಕರ್ಮಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದರು.

ಡಿ.1ರಿಂದ ಭಾರತಕ್ಕೆ ಭದ್ರತಾ ಮಂಡಳಿಯ ಅಧ್ಯಕ್ಷತೆ

ವಿಶ್ವಸಂಸ್ಥೆ (ಪಿಟಿಐ): ಭಾರತ ಡಿ. 1ರಿಂದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸುತ್ತಿದ್ದು, ಭಯೋತ್ಪಾದನೆ ನಿಗ್ರಹ ಮತ್ತು ಬಹುಪಕ್ಷೀಯ ಸಂಬಂಧಗಳ ಸುಧಾರಣೆಯು ದೇಶದ ಆದ್ಯತೆಯಾಗಿರಲಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ತಿಳಿಸಿದ್ದಾರೆ.

ಭಾರತದ ಒಂದು ತಿಂಗಳ ಅಧಿಕಾರಾವಧಿ ಡಿ.31ಕ್ಕೆ ಮುಕ್ತಾಯವಾಗಲಿದೆ. ಇದಕ್ಕೂ ಮೊದಲು ಕಳೆದ ವರ್ಷ ಆಗಸ್ಟ್‌ನಲ್ಲಿ ಭಾರತ ಮಂಡಳಿಯ ಅಧ್ಯಕ್ಷತೆ ವಹಿಸಿಕೊಂಡಿತ್ತು.

ಭದ್ರತಾ ಮಂಡಳಿಯ ಶಾಶ್ವತವಲ್ಲದ ಸದಸ್ಯ ರಾಷ್ಟ್ರವಾಗಿ ಭಾರತದ ಎರಡು ವರ್ಷದ ಅಧಿಕಾರಾವಧಿಯು ಮುಕ್ತಾಯದ ಹಂತದಲ್ಲಿದೆ.

15 ರಾಷ್ಟ್ರಗಳು ಮಂಡಳಿಯ ಸದಸ್ಯತ್ವ ಹೊಂದಿವೆ. ಇಂಗ್ಲಿಷ್ ವರ್ಣಮಾಲೆಯ ಪ್ರಕಾರ ಆಯಾ ದೇಶಗಳಿಗೆ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿ ಒಂದು ತಿಂಗಳ ಅವಧಿಗೆ ಕಾರ್ಯನಿರ್ವಹಿಸುವ ಅವಕಾಶ ನೀಡಲಾಗುತ್ತದೆ.

ಮಹಾತ್ಮ ಗಾಂಧಿ ಪುತ್ಥಳಿ ಲೋಕಾರ್ಪಣೆ: ಅಧಿಕಾರಾವಧಿ ಸ್ಮರಣಾರ್ಥ ಮಹಾತ್ಮ ಗಾಂಧಿ ಅವರ ಪುತ್ಥಳಿಯನ್ನು ಭಾರತ ವಿಶ್ವಸಂಸ್ಥೆಗೆ ಉಡುಗೊರೆಯಾಗಿ ನೀಡಲಿದೆ. ಡಿ.14ರಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಭೇಟಿಯ ಸಂದರ್ಭದಲ್ಲಿ ಪುತ್ಥಳಿ ಅನಾವರಣಗೊಳ್ಳಲಿದೆ. ಇದು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಸ್ಥಾಪಿಸಲಾಗುತ್ತಿರುವ ಮಹಾತ್ಮ ಅವರ ಮೊದಲ ಶಿಲ್ಪ.

ವಿಶ್ವಸಂಸ್ಥೆಯ ಕೇಂದ್ರ ಕಚೇರಿಯ ವಿಶಾಲವಾದ ಹುಲ್ಲುಹಾಸಿನಲ್ಲಿ ಪುತ್ಥಳಿಯನ್ನು ಇಡಲಾಗುತ್ತದೆ ಎಂದು ರುಚಿರಾ ಅವರು ತಿಳಿಸಿದ್ದಾರೆ. ಗುಜರಾತಿನ 'ಏಕತಾ ಪ್ರತಿಮೆ'ಯ ಶಿಲ್ಪಿ ಪದ್ಮಶ್ರೀ ಪುರಸ್ಕೃತ ರಾಮ್ ಸುತಾರ್ ಅವರು ಈ ಪುತ್ಥಳಿ ನಿರ್ಮಿಸಿದ್ದಾರೆ.

ಗಣರಾಜ್ಯೋತ್ಸವಕ್ಕೆ ಈಜಿಪ್ಟ್ ಅಧ್ಯಕ್ಷ ಮುಖ್ಯ ಅತಿಥಿ

ನವದೆಹಲಿ (ಪಿಟಿಐ): ಜನವರಿ 26ರ ಗಣರಾಜ್ಯೋತ್ಸವಕ್ಕೆ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್–ಸಿಸಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯವು ಭಾನುವಾರ ತಿಳಿಸಿದೆ.

'ಇದೇ ಮೊದಲ ಬಾರಿಗೆ ಈಜಿಪ್ಟ್ ಅಧ್ಯಕ್ಷರು ನಮ್ಮ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಲಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ

'ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಮೂಲಕ ಅಕ್ಟೋಬರ್ 16ರಂದು ಅಬ್ದೆಲ್ ಫತ್ತಾಹ್ ಅಲ್–ಸಿಸಿ ಅವರಿಗೆ ಔಪಚಾರಿಕ ಆಹ್ವಾನ ಕಳುಹಿಸಿ ಕೊಟ್ಟಿದ್ದರು. ಈಜಿಪ್ಟ್ ಮತ್ತು ಭಾರತದ ರಾಜತಾಂತ್ರಿಕ ಸಂಬಂಧಕ್ಕೆ 75 ವರ್ಷಗಳು ಸಂದಿವೆ' ಎಂದು ತಿಳಿಸಿದೆ.

ನೇಪಾಳ: ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದ ಎನ್‌ಸಿಪಿ

ಕಠ್ಮಂಡು (ಪಿಟಿಐ): ನೇಪಾಳ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ನೇತೃತ್ವದ ಆಡಳಿತಾರೂಢ ನೇಪಾಳಿ ಕಾಂಗ್ರೆಸ್ ಪಕ್ಷವು (ಎನ್‌ಸಿಪಿ) 53 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ನೇತೃತ್ವದ ಸಿಪಿಎನ್–ಯುಎಂಎಲ್ 42 ಸ್ಥಾನಗಳಲ್ಲಿ ಗೆಲುವು ಸಾಧಿಸಿ 2ನೇ ಸ್ಥಾನದಲ್ಲಿದ್ದರೆ, 17 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಸಿಪಿಎನ್– ಮಾವೋವಾದಿ ಪಕ್ಷವು 3ನೇ ಸ್ಥಾನದಲ್ಲಿದೆ. ಸಿಪಿಎನ್–ಯುನಿಫೈಯ್ಡ್ ಸೋಷಿಯಲಿಸ್ಟ್ ಪಕ್ಷವು 10 ಸ್ಥಾನದಲ್ಲಿ ಗೆಲುವು ಸಾಧಿಸಿದೆ.

ದೇವುಬಾ ಮತ್ತು ಪ್ರಚಂಡ ಅವರು ಶನಿವಾರ ಬಲುವತಾರ್‌ನಲ್ಲಿರುವ ಪ್ರಧಾನಿ ನಿವಾಸದಲ್ಲಿ ಭೇಟಿಯಾಗಿ ದೇಶದಲ್ಲಿ ಹೊಸ ಬಹುಮತದ ಸರ್ಕಾರ ರಚಿಸಲು ತಮ್ಮ ಆಡಳಿತ ಐದು ಪಕ್ಷಗಳ ಮೈತ್ರಿಯನ್ನು ಮುಂದುವರಿಸಲು ಒಪ್ಪಿಕೊಂಡಿದ್ದಾರೆ. ನೇರ ಮತದಾನದ 165 ಸ್ಥಾನಗಳಲ್ಲಿ 21 ಕ್ಷೇತ್ರಗಳ ಫಲಿತಾಂಶ ಇನ್ನೂ ಬರಬೇಕಿದೆ.

ಮೊರ್ಬಿಯಲ್ಲಿ ಗೆಲುವಿನ 'ದಡ' ಮುಟ್ಟಲು ಹರಸಾಹಸ

• ಮಂಜುನಾಥ ಹೆಬ್ಬಾರ್



ಅಖಾಡದಲ್ಲೊಂದು ಸುತ್ತು

ಮೊರ್ಬಿ (ಗುಜರಾತ್): ಇಲ್ಲಿನ ತೂಗುಸೇತುವೆ ಕುಸಿದು 135 ಜನರನ್ನು ಬಲಿ ಪಡೆದ ಮಚ್ಛೂ ನದಿ ಈಗ ಶಾಂತವಾಗಿದೆ. ಯಾವುದೇ ದುರಂತ ಘಟಿಸಿಯೇ ಇಲ್ಲ ಎಂಬಂತೆ ನೀರು ಪ್ರಶಾಂತವಾಗಿ ಹರಿಯುತ್ತಿದೆ. ಆದರೆ, 135 ಕುಟುಂಬಗಳನ್ನು ಶೋಕದ ಮಡುವಿಗೆ ನೂಕಿರುವ ದುರಂತದ ಬಗ್ಗೆ ಜನರಲ್ಲಿ ಕೋಪ ದಟ್ಟವಾಗಿದೆ. ಇದರಿಂದಾಗಿ, ತನ್ನ ಭದ್ರಕೋಟೆಯಲ್ಲಿ ಮತ್ತೊಮ್ಮೆ ಗೆಲುವಿನ 'ದಡ' ಸೇರಲು ಬಿಜೆಪಿ ಹರಸಾಹಸ ಪಡಬೇಕಿದೆ.

ಮಚ್ಛೂ ನದಿಯ ಮೇಲೆ ಬ್ರಿಟಿಷರು ನಿರ್ಮಿಸಿದ್ದ ಈ ಸೇತುವೆ 145 ವರ್ಷಗಳಷ್ಟು ಹಳೆಯದು. ಬ್ರಿಟಿಷರ ಕಾಲದ ಎಂಜಿನಿಯರಿಂಗ್ ಬೆರಗು ಎಂದು ಗುಜರಾತ್ ಸರ್ಕಾರ ಈ ಸೇತುವೆಯನ್ನು ಬಣ್ಣಿಸಿದೆ. ಇದೀಗ, ಈ ತೂಗುಸೇತುವೆಯೇ ಬಿಜೆಪಿಗೆ ಸಂಕಟ ತಂದೊಡ್ಡಿದೆ.

ರಾಜ್ಯದ ಬೇರೆ ಕ್ಷೇತ್ರಗಳ ಚುನಾವಣಾ ಬ್ಯಾನರ್‌ಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮುಂಚೂಣಿಯಲ್ಲಿ ಇದ್ದರೆ, ಮೊರ್ಬಿ ಕ್ಷೇತ್ರದಲ್ಲಿ ಪಕ್ಷದ ಬ್ಯಾನರ್‌ಗಳಲ್ಲಿ ಪ್ರಮುಖ ಸ್ಥಾನ ಸಿಕ್ಕಿರುವುದು ಪಕ್ಷದ ಅಭ್ಯರ್ಥಿಗೆ. ದುರಂತದ ವೇಳೆ ಹಲವು ಜನರನ್ನು ರಕ್ಷಿಸಿದ ಸಾಹಸಿ ನಮ್ಮ ಅಭ್ಯರ್ಥಿ ಎಂದು ಬಿಜೆಪಿ ಬಿಂಬಿಸುತ್ತಿದೆ.

2016ರಲ್ಲಿ ಕೋಲ್ಕತ್ತದಲ್ಲಿ ಸೇತುವೆಯೊಂದು ಕುಸಿದು 20 ಮಂದಿ ಮೃತಪಟ್ಟಿದ್ದರು. ಬಳಿಕ, ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು. 'ಚುನಾವಣೆಯ ಸಂದರ್ಭದಲ್ಲಿ ನಡೆದಿರುವ ಈ ದುರಂತವು ಮಮತಾ ಬ್ಯಾನರ್ಜಿಯ ದುರಾಡಳಿತಕ್ಕೆ ಸಾಕ್ಷಿ. ಮತದಾರರಿಗೆ ದೇವರು ಸಂದೇಶ ನೀಡಿದ್ದಾನೆ' ಎಂದು ಪ್ರಧಾನಿ ವ್ಯಾಖ್ಯಾನಿಸಿದ್ದರು. ಈ ಮಾತನ್ನು ಆಮ್ ಆದ್ಮಿ ಪಕ್ಷದ ನಾಯಕರು ಪ್ರಚಾರದ ವೇಳೆ ಪ್ರಸ್ತಾಪಿಸಿ, 'ಗುಜರಾತ್ ಬಿಜೆಪಿ ಸರ್ಕಾರದ ದುರಾಡಳಿತಕ್ಕೆ ದೇವರು ಈಗ ಕನ್ನಡಿ ಹಿಡಿದಿದ್ದಾನೆ' ಎಂದು ವ್ಯಂಗ್ಯವಾಗಿ ಬಾಣ ಎಸೆಯುತ್ತಿದ್ದಾರೆ.

'ಪ್ರಜಾವಾಣಿ' ಪ್ರತಿನಿಧಿಗೆ ಮೊರ್ಬಿ ಪಟ್ಟಣದಲ್ಲಿ ಮಾತಿಗೆ ಸಿಕ್ಕ ಖಾಸಗಿ ಕಂಪನಿ ಉದ್ಯೋಗಿ ಜಿತೇಂದ್ರ ಈ ಮಾತನ್ನು ನೆನಪಿಸಿಕೊಂಡರು. 'ಗುಜರಾತ್ ಮಾದರಿ ಅಭಿವೃದ್ಧಿಯನ್ನು ಇಡೀ ದೇಶಕ್ಕೆ ಮಾದರಿ ಎಂಬಂತೆ ದಶಕಗಳಿಂದ ಬಿಂಬಿಸಿ ಜನರ ಮನಸ್ಸಲ್ಲಿ ಅಚ್ಚೊತ್ತುವಂತೆ ಮಾಡಲಾಗಿದೆ. ಅದೊಂದು ಭ್ರಮೆ ಎಂಬುದಕ್ಕೆ ಈ ದುರಂತವೇ ಪ್ರತ್ಯಕ್ಷ ಸಾಕ್ಷಿ. ಪ್ರಧಾನಿಯವರ ತವರು ರಾಜ್ಯದಲ್ಲೇ ಭ್ರಷ್ಟಾಚಾರ ದೊಡ್ಡ ಪ್ರಮಾಣದಲ್ಲಿ ತಾಂಡವವಾಡುತ್ತಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೇ. ಈ ಭ್ರಮೆ ಕಳಚುವ ಕೆಲಸವನ್ನು ವಿರೋಧ ಪಕ್ಷದವರು ಮಾಡುತ್ತಿಲ್ಲ. ವಿರೋಧ ಪಕ್ಷದವರ ಇಂತಹ ಧೋರಣೆಯಿಂದಾಗಿಯೇ ಬಿಜೆಪಿ ಸಲೀಸಾಗಿ ಚುನಾವಣೆ ಗೆಲ್ಲುತ್ತಾ ಬಂದಿದೆ' ಎಂದು ಅವರು ವಿಶ್ಲೇಷಿಸಿದರು.

'ಈ ತೂಗುಸೇತುವೆಯೇ ಭ್ರಷ್ಟಾಚಾರದ ಪ್ರತಿಬಿಂಬ. ಈ ಸೇತುವೆಯನ್ನು ನವೀಕರಣಕ್ಕಾಗಿ ಆರು ತಿಂಗಳು ಮುಚ್ಚಿದರು. ತೆರೆದ ಏಳೇ ದಿನಗಳಲ್ಲಿ ದುರಂತ ಸಂಭವಿಸಿತು. ಗುತ್ತಿಗೆಯ ಬಹುಪಾಲು ಮೊತ್ತವನ್ನು ಲೂಟಿ ಹೊಡೆದಿದ್ದೇ ಇದಕ್ಕೆ ಕಾರಣ. ಇದರ ಬಗ್ಗೆ ಸರ್ಕಾರಕ್ಕೆ ವಿಷಾದ ಇದ್ದಂತಿಲ್ಲ. ಸಣ್ಣ ಮೀನುಗಳನ್ನಷ್ಟೇ ಜೈಲಿಗೆ ಅಟ್ಟಿದ್ದಾರೆ' ಎಂದು ಖಾಸಗಿ ಕಂಪನಿ ಉದ್ಯೋಗಿ ಕರಣ್ ಪಟೇಲ್ ಬೇಸರ ವ್ಯಕ್ತಪಡಿಸಿದರು.

1995ರ ಬಳಿಕ ಮೊದಲ ಬಾರಿಗೆ 2017ರಲ್ಲಿ ಬಿಜೆಪಿ ಕೋಟೆಯನ್ನು ಭೇದಿಸಿದ್ದ ಕಾಂಗ್ರೆಸ್ ಮೊರ್ಬಿ ಕ್ಷೇತ್ರದಲ್ಲಿ ಗೆಲುವಿನ ನಗೆ ಬೀರಿತ್ತು. ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಬ್ರಿಜೇಶ್ ಮೆರ್ಜಾ ಅವರು 2020ರ ರಾಜ್ಯಸಭಾ ಚುನಾವಣೆಗೆ ಮುನ್ನ ಕಮಲ ಪಡೆಗೆ ಜಿಗಿದಿದ್ದರು. ಉಪ ಚುನಾವಣೆಯಲ್ಲಿ 3 ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು. ಬಳಿಕ ಕಾರ್ಮಿಕ ಸಚಿವರೂ ಆಗಿದ್ದರು. ಬಿಜೆಪಿ ಅವರಿಗೆ ಈ ಸಲ ಟಿಕೆಟ್ ನಿರಾಕರಿಸಿದೆ.

'ಮೊರ್ಬಿ ದುರಂತದ ವೇಳೆ ಜನರನ್ನು ರಕ್ಷಿಸಿದ ಸಾಹಸಿ' ಎಂದು ಬಿಂಬಿಸಿಕೊಂಡ ಮಾಜಿ ಶಾಸಕ ಕಾಂತಿಲಾಲ್ ಅಮೃತಿಯಾ ಅವರಿಗೆ ಕೇಸರಿ ಪಡೆ ಮಣೆ ಹಾಕಿದೆ. ಐದು ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದ ಅವರು 2017ರ ಚುನಾವಣೆಯಲ್ಲಿ ಮೆರ್ಜಾ ವಿರುದ್ಧ ಸೋತಿದ್ದರು. ಅಕ್ಟೋಬರ್ 30ರಂದು ತೂಗುಸೇತುವೆ ಕುಸಿದ ವೇಳೆ ಕಾಂತಿಲಾಲ್ ಅವರು ಮಚ್ಛೂ ನದಿಗೆ ಹಾರಿ ಜನರನ್ನು ರಕ್ಷಿಸಿದ ವಿಡಿಯೊಗಳು ಹಾಗೂ ಫೋಟೊಗಳನ್ನು ದೊಡ್ಡ ಪ್ರಮಾಣದಲ್ಲಿ ಹಂಚಿಕೊಳ್ಳಲಾಗಿತ್ತು. ಈ ಹಿರೀಕ ರಾಜಕಾರಣಿ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಬೆಂಬಲಿಗರ ಪಡೆಯನ್ನು ಹೊಂದಿದ್ದಾರೆ. 2017ರ ಸೋಲಿನ ಅನುಕಂಪ 'ಕೈ' ಹಿಡಿಯಲಿದೆ ಎಂಬ ವಿಶ್ವಾಸದಲ್ಲಿ ಆಡಳಿತ ಪಕ್ಷ ಇದೆ.

ಹಿರಿಯ ಮುಖಂಡ ಜಯಂತಿಲಾಲ್ ಜೆರಾಜ್‌ಬಾಯಿ ಪಟೇಲ್ ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಕಾಂಗ್ರೆಸ್ ಮೊರ್ಬಿ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿರುವ ಅವರು, ಐದು ಬಾರಿ (1990ರಿಂದ 2007ರ ಅವಧಿಯಲ್ಲಿ) ಸೋಲು ಅನುಭವಿಸಿದ್ದರು. ನಾಲ್ಕು ಸಲ ಕಾಂತಿಲಾಲ್ ಅವರ ವಿರುದ್ಧವೇ ಪರಾಭವ ಅನುಭವಿಸಿದ್ದರು. ಪಕ್ಷ ಅವರಿಗೆ ಮತ್ತೆ ಟಿಕೆಟ್ ನೀಡಿದ್ದು 2020ರ ಉಪಚುನಾವಣೆಯಲ್ಲಿ. ಅವರು ಆಗ ಬಿಜೆಪಿ ಅಭ್ಯರ್ಥಿಗೆ ಪ್ರಬಲ ಪೈಪೋಟಿ ನೀಡಿದ್ದರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ತಮ್ಮ ಸೋಲುಗಳು ಹಾಗೂ ಅದರ ಕಾರಣಗಳ ಬಗ್ಗೆ ಹೆಚ್ಚು ಮಾತನಾಡಲು ಇಷ್ಟ ಪಡಲಿಲ್ಲ. 'ಹಿಂದಿನ ಚುನಾವಣೆಗಳಲ್ಲಿ ನಾನು ಸೋತಿದ್ದು ಕೆಲವೇ ಸಾವಿರ ಮತಗಳ ಅಂತರದಿಂದ. ಈ ಬಾರಿ ಅನುಕಂಪದ ಅಲೆ ನನ್ನ ಕೈ ಹಿಡಿಯಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸುತ್ತಾರೆ. ಆಮ್ ಆದ್ಮಿ ಪಕ್ಷವು ಯುವ ಮುಂದಾಳು ಪಂಕಜ್ ರಣಸೂರಿಯಾ ಅವರನ್ನು ಕಣಕ್ಕೆ ಇಳಿಸಿದೆ.

ಪ್ರಚಾರ: ಜಡೇಜಾಗೆ ಅಕ್ಕನ ಸವಾಲು



ರವೀಂದ್ರ ಜಡೇಜ ಅವರು ಜಾಮ್‌ನಗರದಲ್ಲಿ ರೋಡ್ ಶೋ ನಡೆಸಿದರು – ಪಿಟಿಐ ಚಿತ್ರ

ಜಾಮ್‌ನಗರ (ಪಿಟಿಐ): ಕ್ರಿಕೆಟಿಗ ರವೀಂದ್ರ ಜಡೇಜಾ ಮತ್ತು ಅವರ ಅಕ್ಕ ನೈನಾ ಜಡೇಜಾ ಅವರು ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಎರಡು ಭಿನ್ನ ಪಕ್ಷಗಳ ಪರವಾಗಿ ಪ್ರಚಾರ ಮಾಡುತ್ತಿದ್ದಾರೆ. ರವೀಂದ್ರ ಜಡೇಜಾ ಅವರು ಜಾಮ್‌ನಗರದಲ್ಲಿ ಇತ್ತೀಚೆಗೆ ರೋಡ್ ಶೋ ನಡೆಸಿದರು. ಅವರ ಹೆಂಡತಿ ರಿವಾ ಜಡೇಜಾ ಅವರು ಇಲ್ಲಿ ಅಭ್ಯರ್ಥಿಯಾಗಿದ್ದಾರೆ. ಆದರೆ, ನೈನಾ ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆಸುತ್ತಿದ್ದಾರೆ.

ಹಾಲಿ ಶಾಸಕ ಧರ್ಮೇಂದ್ರಸಿಂಹ ಜಡೇಜಾ ಅವರನ್ನು ಕೈಬಿಟ್ಟು ರಿವಾ ಅವರಿಗೆ ಬಿಜೆಪಿ ಈ ಬಾರಿ ಟಿಕೆಟ್ ನೀಡಿದೆ. ಕಾಂಗ್ರೆಸ್ ಅಭ್ಯರ್ಥಿ ಬಿಪೇಂದ್ರಸಿಂಹ ಪರವಾಗಿ ನೈನಾ ಅವರು ಪ್ರಚಾರ ಮಾಡಿದ್ದಾರೆ. ಜಾಮ್‌ನಗರ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಲು ನೈನಾ ಅವರು ಆಕಾಂಕ್ಷಿಯಾಗಿದ್ದರು. ಆದರೆ, ಅವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿಲ್ಲ. ಬಿಜೆಪಿ ರಿವಾ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದ ಬಳಿಕ ನೈನಾ ಅವರು ಇಲ್ಲಿ ಮುಖ್ಯ ಪ್ರಚಾರಕಿ ಆಗಿದ್ದಾರೆ.

'ನನಗೆ ನನ್ನದೇ ಸಿದ್ಧಾಂತ ಇದೆ. ನಾನು ಮೆಚ್ಚುವ ಪಕ್ಷದಲ್ಲಿ ಈಗ ಇದ್ದೇನೆ' ಎಂದು ನೈನಾ ಅವರು ಹೇಳಿದ್ದಾರೆ. ಬೆಲೆ ಏರಿಕೆಯ ವಿಚಾರದಲ್ಲಿ ಅವರು ಬಿಜೆಪಿಯನ್ನು ಟೀಕಿಸಿದ್ದಾರೆ. ಬಿಜೆಪಿ ಭರವಸೆಗಳನ್ನು ನೀಡುತ್ತದೆಯೇ ಹೊರತು ಅದನ್ನು ಈಡೇರಿಸುವುದಿಲ್ಲ ಎಂದೂ ಅವರು ಆರೋಪಿಸಿದ್ದಾರೆ.

ಕ್ಷೇತ್ರವು ಬಹುತೇಕ ನಗರ ಪ್ರದೇಶಗಳನ್ನೇ ಒಳಗೊಂಡಿದೆ. ಇಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆ ಹೆಚ್ಚು ಎನ್ನಲಾಗುತ್ತಿದೆ. ಆದರೆ, ಕಾಂಗ್ರೆಸ್ ಅಚ್ಚರಿ ಮೂಡಿಸುವ ಸಾಧ್ಯತೆ ಇದೆ ಎಂಬುದು ಕಾಂಗ್ರೆಸ್‌ನ ಕೆಲವು ಮುಖಂಡರ ನಂಬಿಕೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

139 ಮಹಿಳೆಯರು ಮಾತ್ರ ಕಣದಲ್ಲಿ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭೆಯ 182 ಕ್ಷೇತ್ರಗಳಲ್ಲಿ 1,621 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ. ಆದರೆ, ಅವರಲ್ಲಿ ಮಹಿಳೆಯರ ಸಂಖ್ಯೆ 139 ಮಾತ್ರ. ಆಡಳಿತಾರೂಢ ಬಿಜೆಪಿ 18 ಮಹಿಳೆಯರಿಗೆ ಟಿಕೆಟ್ ನೀಡಿದ್ದರೆ ಕಾಂಗ್ರೆಸ್ 14 ಮಹಿಳೆಯರನ್ನು ಕಣಕ್ಕೆ ಇಳಿಸಿದೆ. 2017ರ ಚುನಾವಣೆಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. 2017ರಲ್ಲಿ ಬಿಜೆಪಿ 12 ಮತ್ತು ಕಾಂಗ್ರೆಸ್ 10 ಮಹಿಳೆಯರಿಗೆ ಟಿಕೆಟ್ ನೀಡಿದ್ದವು. ಎಎಪಿ ಆರು ಮಹಿಳೆಯರಿಗೆ ಟಿಕೆಟ್ ನೀಡಿದೆ. ಅವರಲ್ಲಿ ಮೂವರು ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದಾರೆ.

56 ಮಹಿಳೆಯರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ.

2017ರ ಚುನಾವಣೆಯಲ್ಲಿ 1,828 ಅಭ್ಯರ್ಥಿಗಳು ಕಣದಲ್ಲಿ ಇದ್ದರು. ಅವರಲ್ಲಿ 126 ಮಂದಿ ಮಾತ್ರ ಮಹಿಳೆಯರಿದ್ದರು. ಆ ಚುನಾವಣೆಯಲ್ಲಿ 13 ಮಹಿಳೆಯರು ಗೆದ್ದಿದ್ದರು. ಒಂಬತ್ತು ಮಹಿಳೆಯರು ಬಿಜೆಪಿಯಿಂದ ಮತ್ತು ನಾಲ್ವರು ಕಾಂಗ್ರೆಸ್‌ನಿಂದ ಗೆಲುವು ಕಂಡಿದ್ದರು. 104 ಮಹಿಳೆಯರು ಠೇವಣಿ ಕಳೆದುಕೊಂಡಿದ್ದರು.

ಮೋದಿ ಸುಳ್ಳಿನ ಸರದಾರ: ಖರ್ಗೆ

ಡೆಡಿಯಾಪಾಡಾ (ಗುಜರಾತ್) (ಪಿಟಿಐ): ಮೋದಿ ಸುಳ್ಳಿನ ಸರದಾರ. ಅವರು ತಮ್ಮ ಬಗ್ಗೆ ಅನುಕಂಪ ಹುಟ್ಟಿಸಿಕೊಳ್ಳಲು ಸದಾ ಸುಳ್ಳು ಹೇಳುತ್ತಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆರೋಪಿಸಿದ್ದಾರೆ.

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಅವರು ಇಲ್ಲಿ ಪ್ರಚಾರ ನಡೆಸಿದರು. ಈ ವೇಳೆ, 'ಮೋದಿ ಅವರು ತಾನು ಬಡವರಲ್ಲೇ ಅತಿಬಡವ ಮತ್ತು ಅಸ್ಪೃಶ್ಯ ಎಂದು ಹೇಳಿಕೊಂಡಿದ್ದಾರೆ. ಮೋದಿ ಅವರೇ, ಜನರು ಕನಿಷ್ಠ ನೀವು ಕೊಡುವ ಚಹಾವನ್ನಾದರೂ ಕುಡಿಯುತ್ತಾರೆ. ನಾನು ಕೊಟ್ಟರೆ ಚಹಾ ಸಹ ಕುಡಿಯುವುದಿಲ್ಲ. ಆದರೆ, ತಾನು ಅಸ್ಪೃಶ್ಯ ಎಂದು ನೀವು ಹೇಳಿಕೊಳ್ಳುತ್ತಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

'ಮೋದಿ ಅವರೇ ನೀವು ಸದಾ, ನಾನು ಬಡವ. ನನ್ನನ್ನು ಎಲ್ಲರೂ ಬೈಯುತ್ತಾರೆ, ತುಳಿಯುತ್ತಾರೆ ಎಂದು ಹೇಳುತ್ತೀರಿ. ಆ ಮೂಲಕ ಅನುಕಂಪ ಗಿಟ್ಟಿಸಲು ಯತ್ನಿಸುತ್ತೀರಿ. ಇದನ್ನೆಲ್ಲಾ ಅರ್ಥಮಾಡಿಕೊಳ್ಳುವಷ್ಟು ಜನರು ಬುದ್ಧಿವಂತರಾಗಿದ್ದಾರೆ, ಅವರು ಮೂರ್ಖರಲ್ಲ. ನೀವು ಎಷ್ಟು ಸುಳ್ಳು ಹೇಳುತ್ತೀರಿ? ಒಂದರ ನಂತರ ಒಂದು ಸುಳ್ಳು. ನೀವು ಸುಳ್ಳಿನ ಸರದಾರ' ಎಂದು ಖರ್ಗೆ ಟೀಕಿಸಿದ್ದಾರೆ.

'ದೇಶವನ್ನು ಕಾಂಗ್ರೆಸ್ ಲೂಟಿ ಮಾಡಿದೆ, ಅಭಿವೃದ್ಧಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತೀರಿ. ಈ ರಾಜ್ಯದ ನೆಲ, ಜಲ ಮತ್ತು ಕಾಡನ್ನು ಮಾರಾಟ ಮಾಡುತ್ತಿರುವವರು ಯಾರು? ನೀವು ಮತ್ತು ನಿಮ್ಮ ಶ್ರೀಮಂತ ಗೆಳೆಯರು ಜನರನ್ನು ಲೂಟಿ ಮಾಡುತ್ತಿದ್ದೀರಿ' ಎಂದು ಖರ್ಗೆ ಆರೋಪಿಸಿದ್ದಾರೆ.

ನುಡಿ–ಕಿಡಿ

ಭಯೋತ್ಪಾದನಾ ಕೃತ್ಯಗಳನ್ನೂ ಕಾಂಗ್ರೆಸ್ ಮತಬ್ಯಾಂಕ್‌ನ ಕನ್ನಡಕದಿಂದ ನೋಡುತ್ತದೆ. ಕಾಂಗ್ರೆಸ್ ಮಾತ್ರವಲ್ಲ, ಅದೇ ರೀತಿ ಯೋಚನೆ ಮಾಡುವ ಪಕ್ಷಗಳೆಲ್ಲವೂ ದೊಡ್ಡ–ದೊಡ್ಡ ಭಯೋತ್ಪಾದನಾ ಕೃತ್ಯಗಳ ಬಗ್ಗೆ ಬಾಯಿ ಬಿಡುವುದೇ ಇಲ್ಲ. ಮಾತನಾಡಿದರೆ ತಮ್ಮ ಮತಬ್ಯಾಂಕ್‌ಗಳಿಗೆ ಎಲ್ಲಿ ಧಕ್ಕೆಯಾಗಿಬಿಡುತ್ತದೋ ಎಂದು ಯೋಚಿಸುತ್ತವೆ. ಈ ಎಲ್ಲಾ ಪಕ್ಷಗಳು ಭಯೋತ್ಪಾದನೆಯನ್ನು ತಮ್ಮ ಯಶಸ್ಸಿಗೆ ಹತ್ತಿರದ ದಾರಿ ಎಂದು ಭಾವಿಸಿವೆ

ನರೇಂದ್ರ ಮೋದಿ, ಪ್ರಧಾನಿ

ದೇಶದಲ್ಲಿ ಈವರೆಗೆ ಐದಾರು ಪಕ್ಷಗಳು ಕೇಂದ್ರದಲ್ಲಿ ಸರ್ಕಾರವನ್ನು ರಚಿಸಿವೆ. ಆದರೆ, ಬಿಜೆಪಿಯಂತಹ ನಿರುಂಕುಶಾಧಿಕಾರಿ ಮತ್ತೊಂದು ಪಕ್ಷ ಭಾರತದಲ್ಲಿಲ್ಲ

ಜಿಗ್ನೇಶ್ ಮೇವಾನಿ, ಗುಜರಾತ್ ಕಾಂಗ್ರೆಸ್ ಉಪಾಧ್ಯಕ್ಷ

ಏಕರೂಪ ನಾಗರಿಕ ಸಂಹಿತೆ: ಆಯೋಗದ ವರದಿ ಚರ್ಚೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಇಂದೋರ್ (ಮಧ್ಯಪ್ರದೇಶ): ಚುನಾವಣಾ ಸಮಯದಲ್ಲಿ ಬಿಜೆಪಿ, ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಪ್ರಸ್ತಾಪಿಸಿ ನಂತರ ಅದನ್ನು ಮರೆತು ಬಿಡುತ್ತದೆ ಎಂದು ಆರೋಪಿಸಿರುವ ಕಾಂಗ್ರೆಸ್, ಯುಸಿಸಿ ಅಪೇಕ್ಷಣೀಯವಲ್ಲ ಅಥವಾ ಪ್ರಾಯೋಗಿಕವಲ್ಲ ಎಂದು ಹೇಳುವ ಕಾನೂನು ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಚರ್ಚಿಸಬೇಕೆಂದು ಭಾನುವಾರ ಒತ್ತಾಯಿಸಿದೆ.

ಭಾರತ್ ಜೋಡೊ ಯಾತ್ರೆ ವೇಳೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ಪುರುಷ ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳಿರಬೇಕು, ಯಾವುದೇ ಅಸಮಾನತೆ ಇರಬಾರದು ಎಂದು ಹೇಳಿದರು.

> **ಅಗತ್ಯಬಿದ್ದರೆ ರಾಜಸ್ಥಾನದಲ್ಲಿ ಪಕ್ಷವನ್ನು ಬಲಪಡಿಸಲು 'ಕಠಿಣ ನಿರ್ಧಾರ' ತೆಗೆದುಕೊಳ್ಳಲೂ ಹಿಂಜರಿಯುವುದಿಲ್ಲ**
> **ಜೈರಾಮ್ ರಮೇಶ್,** ಕಾಂಗ್ರೆಸ್ ನಾಯಕ

2018ರಲ್ಲಿ ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ನೇತೃತ್ವದ ಕಾನೂನು ಆಯೋಗದ ವರದಿಯು ಯುಸಿಸಿಗೆ ಒಲವು ತೋರದಿರುವುದನ್ನು ಉಲ್ಲೇಖಿಸಿದ ರಮೇಶ್, ಈ ವರದಿಯ ಬಗ್ಗೆ ಸಂಸತ್ತಿನೊಳಗೆ ಚರ್ಚೆ ನಡೆಸಲು ಕಾಂಗ್ರೆಸ್ ಬಯಸುತ್ತದೆ. ಆದರೆ, ಅದಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡುತ್ತಿಲ್ಲ' ಎಂದು ಅವರು ಹೇಳಿದರು.

ದಿಗ್ವಿಜಯ ಸಿಂಗ್ ಒತ್ತಾಯ: ಇತ್ತೀಚೆಗೆ ಮಧ್ಯಪ್ರದೇಶದಲ್ಲಿ ಭಾರತ್ ಜೋಡೋ ಯಾತ್ರೆಯಲ್ಲಿ ಪಾಕಿಸ್ತಾನದ ಪರ ಘೋಷಣೆಗಳನ್ನು ಕೂಗಲಾಗಿದೆ ಎಂದು ಬಿಜೆಪಿ ಆರೋಪಿಸಿದ್ದು, ಈ ನಕಲಿ ವಿಡಿಯೊ ಮಾಡಿದ ವ್ಯಕ್ತಿಯನ್ನು ಬಂಧಿಸಿ ಶಿಕ್ಷೆ ನೀಡಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ ಸಿಂಗ್ ಒತ್ತಾಯಿಸಿದ್ದಾರೆ.

ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವಿಯಾ ಅವರು ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಕಮಲ್‌ನಾಥ್ ಅವರು ನಡೆದು ಹೋಗುತ್ತಿರುವ ಯಾತ್ರೆಯ ವಿಡಿಯೊ ಅನ್ನು ಶುಕ್ರವಾರ ಪೋಸ್ಟ್ ಮಾಡಿದ್ದಾರೆ. ಈ ಕ್ಲಿಪ್‌ನಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೇಳಿಬಂದಿದೆ. ಈ ಸಮಯದಲ್ಲಿ ಯಾತ್ರೆಯು ಖಾರ್ಗೋನ್ ಜಿಲ್ಲೆಯ ಭನ್ಬರದ್ ಮೂಲಕ ಹಾದು ಹೋಗುತ್ತಿತ್ತು ಎನ್ನಲಾಗಿದೆ.

'ಕಡಿಮೆ ತೀವ್ರತೆ ಜ್ವರಕ್ಕೆ ಪ್ರತಿಜೀವಕಗಳ ಬಳಕೆ ಬೇಡ'

ನವದೆಹಲಿ (ಪಿಟಿಐ): ಕಡಿಮೆ ತೀವ್ರತೆಯ ಜ್ವರ ಹಾಗೂ ಬ್ರಾಂಕೈಟಿಸ್ (ಶ್ವಾಸನಾಳಗಳ ಒಳಪೊರೆಯ ಉರಿಯೂತ) ಸೇರಿದಂತೆ ವಿವಿಧ ಕಾಯಿಲೆ/ಸೋಂಕುಗಳ ಚಿಕಿತ್ಸೆಗೆ ಪ್ರತಿಜೀವಕಗಳನ್ನು ಬಳಸುವ ಬಗ್ಗೆ ಐಸಿಎಂಆರ್ ಎಚ್ಚರಿಕೆ ನೀಡಿದೆ.

ಈ ಕುರಿತು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿರುವ ಐಸಿಎಂಆರ್, ವೈದ್ಯರು ಪ್ರತಿಜೀವಕಗಳನ್ನು ಶಿಫಾರಸು ಮಾಡುವ ಸಂದರ್ಭದಲ್ಲಿ, ಕಾಯಿಲೆ/ಸೋಂಕಿನ ತೀವ್ರತೆಯನ್ನು ಪರಿಗಣಿಸಬೇಕು. ನಿರ್ದಿಷ್ಟ ಅವಧಿ ವರೆಗೆ ಇವುಗಳನ್ನು ತೆಗೆದುಕೊಳ್ಳುವಂತೆ ರೋಗಿಗಳಿಗೆ ಸೂಚಿಸಬೇಕು ಎಂದು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ.

ಅಜ್ಮೇರ್, ಸೋಮನಾಥ ಹೋಲಿಸಿದ ಕಾಂಗ್ರೆಸ್ ಅಭ್ಯರ್ಥಿ

ಅಹಮದಾಬಾದ್ (ಪಿಟಿಐ): ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ರಾಜ್‌ಕೋಟ್ ಪೂರ್ವ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಇಂದ್ರನೀಲ ರಾಜಗುರು ಅವರು ಧಾರ್ಮಿಕ ಸ್ಥಳಗಳಾದ ಅಜ್ಮೇರ್ ಮತ್ತು ಸೋಮನಾಥದ ಕುರಿತು ಸಾರ್ವಜನಿಕ ಸಭೆಯೊಂದರಲ್ಲಿ ನೀಡಿದ್ದಾರೆ ಎನ್ನಲಾದ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಮುಸ್ಲಿಂ ಸಮುದಾಯದ ಜನರು ಹೆಚ್ಚಾಗಿ ಸೇರಿದ್ದ ಸಭೆ ಉದ್ದೇಶಿಸಿ ಶನಿವಾರ ಮಾತನಾಡಿದ ರಾಜಗುರು ಅವರು, 'ಹರಹರ ಮಹಾದೇವ್' ಎಂದು ಪಠಿಸುವಂತೆ ಹೇಳಿದರು. ಜನರು ಅದನ್ನು ಪಾಲಿಸಿದರು. 'ನನ್ನ ಪ್ರಕಾರ, ಮಹಾದೇವ ಮತ್ತು ಅಲ್ಲಾಹು ಸಮಾನರು. ಅಜ್ಮೇರ್‌ನಲ್ಲಿ ಮಹಾದೇವ, ಸೋಮನಾಥದಲ್ಲಿ ಅಲ್ಲಾಹು ನೆಲೆಸಿದ್ದಾರೆ. ದೇವರು ದೊಡ್ಡವನು' ಎಂದು ಹೇಳಿದರು.

'ಸೋಮನಾಥಕ್ಕೆ ಹೋದಾಗ ಎಷ್ಟು ಸಂತಸವಾಗುತ್ತದೆಯೋ, ಅಜ್ಮೇರ್‌ಗೆ ಹೋದಾಗಲೂ ಅಷ್ಟೇ ಆಗುತ್ತದೆ. ನಮ್ಮಲ್ಲಿ ಸುಧಾರಣೆ ಆಗಬೇಕು ಎಂದು ಬಯಸುವವರು ಮೊದಲು ನಾವೆಲ್ಲರೂ ಮನುಷ್ಯರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಅವರು ಹೇಳಿದರು.

ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉದಯ್ ಕಂಗದ್ ಅವರು ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜಗುರು ಅವರ ಮಾತುಗಳು ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವಂತಿವೆ ಎಂದು ಆರೋಪಿಸಿದ್ದಾರೆ. ತಮ್ಮ ಭಾಷಣದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಗ್ಗೆ ಪ್ರತಿಕ್ರಿಯಿಸಿರುವ ರಾಜಗುರು, 'ನಾನು ಅಲ್ಲಾಹು ಅಕ್ಬರ್ ಎಂದಷ್ಟೇ ಹೇಳಿಲ್ಲ. 5 ಸಾವಿರ ಮುಸ್ಲಿಮರು ಹರಹರ ಮಹಾದೇವ್ ಎಂದು ಪಠಿಸಿದ್ದಾರೆ. ಅದನ್ನೂ ಕೇಳಿಸಿಕೊಳ್ಳಿ' ಎಂದು ತಿರುಗೇಟು ನೀಡಿದ್ದಾರೆ.

ಮೀಸಲಾತಿ ಹೆಚ್ಚಳಕ್ಕೆ ಜ.23ರ ಗಡುವು

ಒಂದನೇ ಪುಟದಿಂದ...

'ನಮ್ಮ ಸಮುದಾಯದ ಜನಸಂಖ್ಯೆಯ ಗಣತಿ ಮಾಡಬೇಕು. ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ವರದಿಯಲ್ಲಿ ನಮ್ಮ ಜನಸಂಖ್ಯೆಯನ್ನು ತಿರುಚಲಾಗಿದೆ. ಒಕ್ಕಲಿಗರಿಗೆ ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ ಶೇ 12ರಷ್ಟು ಮೀಸಲಾತಿ ಹೆಚ್ಚಿಸಬೇಕು. ಇದು ಭಿಕ್ಷೆ ಅಲ್ಲ. ನ್ಯಾಯಯುತ ಹಕ್ಕು. ಆರ್ಥಿಕವಾಗಿ ಹಿಂದುಳಿದವರಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಶೇ 10 ಮೀಸಲಾತಿ ನಮ್ಮ ಸಮುದಾಯಕ್ಕೆ ಸಿಗದೇ ಅನ್ಯಾಯ ಆಗಿದೆ. ಡಿಸೆಂಬರ್ 9 ರಿಂದ ಆರಂಭವಾಗಲಿರುವ ಸಂಸತ್ ಅಧಿವೇಶನದಲ್ಲಿ ದೇವೇಗೌಡರ ನೇತೃತ್ವದಲ್ಲಿ, ನಮ್ಮ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸುವಂತೆ ಕೇಂದ್ರದ ಮೇಲೆ ಒತ್ತಡ ಹಾಕುತ್ತೇವೆ' ಎಂದು ಸಂಸದ ಡಿ.ವಿ. ಸದಾನಂದಗೌಡ ಹೇಳಿದರು.

ನಂಜಾವಧೂತ ಸ್ವಾಮೀಜಿ ಮಾತನಾಡಿ, 'ಶೇ 16 ರಷ್ಟಿರುವ ಒಕ್ಕಲಿಗ ಸಮುದಾಯವನ್ನು ಪ್ರವರ್ಗ 3ಎಗೆ ಸೇರಿಸಿರುವ ಸರ್ಕಾರ, ಈ ಪ್ರವರ್ಗಕ್ಕೆ ಹಲವು ಸಮುದಾಯಗಳನ್ನೂ ಸೇರಿಸಿದೆ. ಈ ವರ್ಗಕ್ಕೆ ನೀಡಿರುವ ಮೀಸಲಾತಿ ಕೇವಲ ಶೇ 4ರಷ್ಟು ಮಾತ್ರ. ಇದನ್ನು ಶೇ 15ಕ್ಕೆ ಹೆಚ್ಚಿಸಬೇಕು. ಕೇಂದ್ರ ಮೀಸಲಾತಿ ಪಟ್ಟಿಯಲ್ಲಿ ನಗರ ಪ್ರದೇಶದ ಒಕ್ಕಲಿಗರನ್ನು ಹೊರಗಿಡಲಾಗಿದೆ. ಗ್ರಾಮೀಣ ಪ್ರದೇಶದಿಂದ ವಲಸೆ ಬಂದು ನಗರಗಳಲ್ಲಿ ಕೂಲಿ ಮಾಡುತ್ತಿರುವ ಕುಟುಂಬಗಳಲ್ಲಿನ ಮಕ್ಕಳು ಮೀಸಲಾತಿಯಿಂದ ವಂಚಿತರಾಗುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದವರಿಗಿರುವ ಮೀಸಲಾತಿಯಲ್ಲಿ ನಗರ ಪ್ರದೇಶದ ಒಕ್ಕಲಿಗರಿಗೂ ಅವಕಾಶ ಸಿಗಬೇಕು. ಕೇಂದ್ರ ಕೂಡ ಬಿಟ್ಟು ಹೋಗಿರುವ ಒಕ್ಕಲಿಗ ಉಪ ಜಾತಿಗಳನ್ನು ಒಬಿಸಿ ಪಟ್ಟಿಗೆ ಸೇರಿಸಬೇಕು' ಎಂದು ಆಗ್ರಹಿಸಿದರು.

> **ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದೇವೆ. ಮನವಿಯನ್ನು ಸರ್ಕಾರ ಆದಷ್ಟು ಬೇಗ ಪರಿಗಣಿಸಬೇಕು.**
> **ನಿರ್ಮಲಾನಂದನಾಥ ಸ್ವಾಮೀಜಿ,** ಆದಿಚುಂಚನಗಿರಿ ಮಠ

> **ಇಲ್ಲಿಯವರೆಗೂ ಸಹಿಸಿದ್ದು ಸಾಕು. ಅದನ್ನೇ ದೌರ್ಬಲ್ಯ ಎಂದುಕೊಂಡಿದ್ದರೆ. ಗಡುವಿನೊಳಗೆ ಬೇಡಿಕೆ ಈಡೇರಿಸಿದರೆ ವಿಜಯೋತ್ಸವ. ಇಲ್ಲದಿದ್ದರೆ ಹೋರಾಟದ ಕಿಚ್ಚು**
> **ನಂಜಾವಧೂತ ಸ್ವಾಮೀಜಿ,** ಪಟ್ಟನಾಯಕನಹಳ್ಳಿ ಮಠ

> **ನಮ್ಮ ಸರ್ಕಾರ ಇರುವಾಗಲೇ ನಮ್ಮ ಸಮುದಾಯ ಎದ್ದು ನಿಂತಿದೆ. ಸಮುದಾಯದ ಪರವಾಗಿ ನಾನು ಬಂದಿದ್ದೇನೆ. ಮನವಿ ಸ್ವೀಕರಿಸಿದ್ದು, ಸಿ.ಎಂ ಗಮನಕ್ಕೆ ತರುತ್ತೇನೆ**
> **ಆರ್. ಅಶೋಕ,** ಕಂದಾಯ ಸಚಿವ

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣವನ್ನು ಸರ್ಕಾರ ಹೆಚ್ಚಿಸಿದೆ. ಆ ಮೂಲಕ, ಶೇ 50ರ ಮೀಸಲಾತಿ ಮಿತಿ ಮೀರಲಾಗಿದೆ. ಅದೇ ರೀತಿ ಒಕ್ಕಲಿಗ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಬೇಕಿದೆ. ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ, ಡಬಲ್ ಎಂಜಿನ್ ಸರ್ಕಾರವಿದೆ. ನಮ್ಮ ಎರಡು ಬೇಡಿಕೆಗಳಲ್ಲಿ ಒಂದನ್ನು ಕೇಂದ್ರ ಈಡೇರಿಸಬೇಕು. ಮತ್ತೊಂದನ್ನು ರಾಜ್ಯ ಈಡೇರಿಸಬೇಕು' ಎಂದರು.

ದೇವೇಗೌಡ, ಎಸ್‌ಎಂಕೆಗೆ ಗೌರವ: 'ನಮ್ಮ ಸಮಾಜಕ್ಕೆ ದೇವೇಗೌಡ, ಎಸ್.ಎಂ. ಕೃಷ್ಣ ಅವರ ಕೊಡುಗೆ ಅಪಾರ. ಜ. 23 ರಂದು ಬಾಲಗಂಗಾಧರನಾಥ ಸ್ವಾಮೀಜಿಯ 10ನೇ ಪುಣ್ಯಸ್ಮರಣೆ. ಅಂದು ಅವರಿಬ್ಬರನ್ನು ಗೌರವಿಸುವ ಕಾರ್ಯಕ್ರಮ ನಿಗದಿ ಮಾಡಿದ್ದೇವೆ. ಅಷ್ಟರೊಳಗೆ ನಮ್ಮ ಬೇಡಿಕೆಯನ್ನೂ ಸರ್ಕಾರ ಈಡೇರಿಸಬೇಕು' ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

'ಈ ಸಭೆಯಲ್ಲಿ ದೇವೇಗೌಡ, ಕುಮಾರಸ್ವಾಮಿ ಇಲ್ಲ ಎಂದು ಯಾರೂ ಅಂದುಕೊಳ್ಳಬಾರದು. ಪಂಚರತ್ನ ಯಾತ್ರೆಯಲ್ಲಿರುವ ಕುಮಾರಸ್ವಾಮಿ, ನನ್ನ ಜೊತೆ 3–4 ಬಾರಿ ಮಾತನಾಡಿದ್ದಾರೆ. ದೇವೇಗೌಡರ ಆರೋಗ್ಯ ಇತ್ತೀಚೆಗೆ ಸ್ವಲ್ಪ ಏರುಪೇರಾಗುತ್ತಿದೆ. ಅವರು ಕೂಡಾ ಪತ್ರ ಬರೆದು ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದರು.

ಭಾರತ–ನ್ಯೂಜಿಲೆಂಡ್ 2ನೇ ಏಕದಿನ ಪಂದ್ಯ ರದ್ದು
'ಮೇಲ್ಚಾವಣಿಯ ಅಂಗಣ ಉತ್ತಮ'



ಪಂದ್ಯ ರದ್ದಾದ ಬಳಿಕ ಅಂಗಣ ತೊರೆದ ಸೂರ್ಯಕುಮಾರ್ ಯಾದವ್ ಮತ್ತು ಶುಭಮನ್ ಗಿಲ್ – ಪಿಟಿಐ ಚಿತ್ರ

ಹ್ಯಾಮಿಲ್ಟನ್ (ಪಿಟಿಐ): ಮಳೆಯಿಂದಾಗಿ ಪಂದ್ಯಗಳು ರದ್ದಾಗುವುದು ಆಟಗಾರರಿಗೆ ಮತ್ತು ಟಿಕೆಟ್ ಖರೀದಿಸಿ ನೋಡಲು ಬರುವ ಪ್ರೇಕ್ಷಕರಿಗೆ ಕಿರಿಕಿರಿ ಎನಿಸುತ್ತದೆ. ಹೀಗಾಗಿ ಮೇಲ್ಚಾವಣಿ ಸೌಲಭ್ಯ ಹೊಂದಿರುವ ಕ್ರೀಡಾಂಗಣಗಳು ಉತ್ತಮ ಆಯ್ಕೆಯಾಗಬಹುದು ಎಂದು ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವೆ ಭಾನುವಾರ ಇಲ್ಲಿ ನಡೆಯಬೇಕಿದ್ದ ಎರಡನೇ ಏಕದಿನ ಪಂದ್ಯವು ಮಳೆಯಿಂದಾಗಿ ರದ್ದಾಯಿತು.

ಈ ಕುರಿತು ಶುಭಮನ್ ಮಾತನಾಡಿದರು.

'ಒಳಾಂಗಣ ಕ್ರೀಡಾಂಗಣ ಆಯ್ಕೆಯ ಕುರಿತು ಮಂಡಳಿಗಳು ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಶುಭಮನ್ ಹೇಳಿದರು.

ಪಂದ್ಯ ರದ್ದಾದ ವೇಳೆ ಭಾರತ 12.5 ಓವರ್‌ಗಳಲ್ಲಿ 89 ರನ್ ಗಳಿಸಿತ್ತು. ಶುಭಮನ್ (45) ಮತ್ತು ಸೂರ್ಯಕುಮಾರ್ ಯಾದವ್ (34) ಕ್ರೀಸ್‌ನಲ್ಲಿದ್ದರು. ಶಿಖರ್ ಧವನ್ ಮೂರು ರನ್ ಗಳಿಸಿ ಔಟಾಗಿದ್ದರು.

ಭಾರತದ ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಮಳೆ ಸುರಿಯಲಾರಂಭಿಸಿತು. ನಾಲ್ಕು ತಾಸುಗಳ ಬಳಿಕ ಎರಡೂ ತಂಡಗಳಿಗೆ ತಲಾ 29 ಓವರ್‌ಗಳನ್ನು ಆಡಿಸಲು ನಿರ್ಧರಿಸಲಾಗಿತ್ತು. ಆದರೆ ಏಳು ಓವರ್‌ಗಳ ಬಳಿಕ ಮತ್ತೆ ಮಳೆ ಸುರಿದ ಕಾರಣ ಪಂದ್ಯವನ್ನು ರದ್ದುಗೊಳಿಸಲು ತೀರ್ಮಾನಿಸಲಾಯಿತು.

ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯವು ನವೆಂಬರ್ 30 ರಂದು ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯಲಿದೆ

'ಮೋದಿ ಕ್ರೀಡಾಂಗಣ ಗಿನ್ನಿಸ್ ದಾಖಲೆ'

ನವದೆಹಲಿ (ಪಿಟಿಐ): ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 2022ರ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಗರಿಷ್ಠ ಪ್ರೇಕ್ಷಕರು ಸೇರಿದ್ದು 'ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್' ವಿಶ್ವ ದಾಖಲೆಯಾಗಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಭಾನುವಾರ ಈ ವಿಷಯ ತಿಳಿಸಿದ್ದಾರೆ.

ಈ ಹಿಂದೆ ಈ ಕ್ರೀಡಾಂಗಣವನ್ನು ಗುಜರಾತ್ ಕ್ರಿಕೆಟ್ ಸಂಸ್ಥೆ (ಜಿಸಿಎ) ಕ್ರೀಡಾಂಗಣ ಎಂದು ಕರೆಯಲಾಗುತ್ತಿತ್ತು. ಸದ್ಯ ಇದು 1 ಲಕ್ಷ 10 ಸಾವಿರ ಪ್ರೇಕ್ಷಕರ ಸಾಮರ್ಥ್ಯದ ಅಂಗಣವಾಗಿದೆ. ಅಂದರೆ ಆಸ್ಟ್ರೇಲಿಯಾದ ಮೆಲ್ಬರ್ನ್ ಕ್ರಿಕೆಟ್ ಮೈದಾನದ (ಎಂಸಿಜಿ, 1,00,024) ಸಾಮರ್ಥ್ಯಕ್ಕಿಂತ 10,000ದಷ್ಟು ಹೆಚ್ಚು.

'ಈ ವರ್ಷದ ಮೇ 29ರಂದು ನಡೆದ ಐಪಿಎಲ್ ಫೈನಲ್ ಪಂದ್ಯಕ್ಕೆ 1,01,566 ಜನ ಪ್ರೇಕ್ಷಕರು ಸೇರಿದ್ದರು. ಟಿ20 ಪಂದ್ಯವೊಂದಕ್ಕೆ ಅತಿ ಹೆಚ್ಚು ಪ್ರೇಕ್ಷಕರು ಸಾಕ್ಷಿಯಾಗಿದ್ದು, ಗಿನ್ನಿಸ್ ವಿಶ್ವ ದಾಖಲೆಗೆ ಸೇರಿದೆ' ಎಂದು ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಕೇಜ್ರಿವಾಲ್ ಆಪ್ತರಿಂದಲೇ ವಿಡಿಯೊ ಬಹಿರಂಗ'

ನವದೆಹಲಿ (ಪಿಟಿಐ): ಜೈಲಿನಲ್ಲಿರುವ ಆಮ್ ಆದ್ಮಿ ಪಕ್ಷದ ಸತ್ಯೇಂದರ್ ಜೈನ್ ಅವರ ಕೊಠಡಿಯನ್ನು 10 ಜನರು ಸೇರಿ ಸ್ವಚ್ಛಗೊಳಿಸುತ್ತಿರುವ ವಿಡಿಯೊವನ್ನು ಬಿಜೆಪಿ ಭಾನುವಾರ ಬಿಡುಗಡೆ ಮಾಡಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಆಪ್ತವಾಗಿರುವವರೇ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) 'ಉನ್ನತ ಹುದ್ದೆ'ಯಲ್ಲಿರುವವರೇ ಜೈನ್ ಅವರಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನೀಡುತ್ತಿದ್ದಾರೆ ಎಂದೂ ಬಿಜೆಪಿ ಹೇಳಿದೆ.

ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಅವರು ಭಾನುವಾರ ಸುದ್ದಿಗೋಷ್ಠಿ ನಡೆಸಿ, ವಿಡಿಯೊವನ್ನು ಬಿಡುಗಡೆ ಮಾಡಿದರು. 'ಜೈನ್ ಅವರಿಗೆ ಸಂಬಂಧಿಸಿದ ಈ ಎಲ್ಲಾ ವಿಡಿಯೊಗಳು ಮತ್ತು ಮಾಹಿತಿಗಳು ಕೇಜ್ರಿವಾಲ್ ಅವರಿಗೆ ಹತ್ತಿರವಾಗಿರುವ ಹಾಗೂ ಪಕ್ಷದ 'ಉನ್ನತ ಹುದ್ದೆ'ಯಲ್ಲಿರುವವರೇ ಬಹಿರಂಗ ಮಾಡುತ್ತಿದ್ದಾರೆ' ಎಂದರು.

ಇದಕ್ಕೆ ಪ್ರತಿಯಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಬಿಜೆಪಿಯು ವಿಡಿಯೊ ನಿರ್ಮಾಣ ಕಂಪನಿಯಾಗಿದೆ. ಈ ಬಾರಿ ಚುನಾವಣೆಯಲ್ಲಿ ಜನರು ಅವರಿಗೆ ವಿಡಿಯೊ ನಿರ್ಮಿಸಲು ಉದ್ಯೋಗವನ್ನು ನೀಡಲಿದ್ದಾರೆ' ಎಂದಿದ್ದಾರೆ.

ಸ್ಕೈವಾಕ್ ಕುಸಿತ 12 ಮಂದಿಗೆ ಗಾಯ

ನಾಗಪುರ, ಮಹಾರಾಷ್ಟ್ರ (ಪಿಟಿಐ): ರೈಲ್ವೆ ಹಳಿ ಮೇಲಿನ ಸ್ಕೈ ವಾಕ್ ಕುಸಿದು 48 ವರ್ಷದ ಮಹಿಳೆ ಮೃತಪಟ್ಟಿರುವ ಮತ್ತು 12 ಜನರು ಗಾಯಗೊಂಡಿರುವ ಘಟನೆಯು ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ಬಾಲ್ಹಾರ್‌ಶಾ ರೈಲು ನಿಲ್ದಾಣದಲ್ಲಿ ಭಾನುವಾರ ಸಂಜೆ ಸಂಭವಿಸಿದೆ. ನಾಲ್ವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುಣೆಗೆ ಹೊರಟಿದ್ದ ರೈಲು ಹತ್ತಲು ಜನರು ಸ್ಕೈವಾಕ್ ಬಳಸಿ ಹೋಗುತ್ತಿದ್ದ ವೇಳೆ ದುರಂತ ಸಂಭವಿಸಿದೆ.

'ಜಿ–20 ಅಧ್ಯಕ್ಷ ಸ್ಥಾನ, ಜಾಗತಿಕ ಒಳಿತಿಗೆ ಬಳಕೆ'

ನವದೆಹಲಿ: 'ಪ್ರಬಲ ಜಿ–20 ಗುಂಪಿನ ಅಧ್ಯಕ್ಷ ಸ್ಥಾನವನ್ನು ಭಾರತ ವಹಿಸಿಕೊಳ್ಳುತ್ತಿದೆ. ದೇಶವು ಈ ಅವಧಿಯನ್ನು ಶಾಂತಿ ಸ್ಥಾಪನೆ, ಏಕತೆ, ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿ ಸೇರಿದಂತೆ ಜಗತ್ತಿನ ಒಳಿತಿಗಾಗಿ ಈ ಅವಕಾಶ ಬಳಸಿಕೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಭಾರತ, ಜಿ–20 ಗುಂಪಿನ ಅಧ್ಯಕ್ಷ ಸ್ಥಾನವನ್ನು ಅಧಿಕೃತವಾಗಿ ಡಿಸೆಂಬರ್ 1ರಂದು ವಹಿಸಿಕೊಳ್ಳಲಿದೆ. ಮಾಸಿಕ 'ಮನ್ ಕಿ ಬಾತ್'ನಲ್ಲಿ ಮೋದಿ ಅವರು ಈ ವಿಷಯ ಪ್ರಸ್ತಾಪಿಸಿದರು.

'ವಿಶ್ವ ಕಲ್ಯಾಣದ ಪ್ರತಿಪಾದನೆ'

ಪಟ್ನಾ (ಪಿಟಿಐ): ವಿಭಿನ್ನ ಸಿದ್ಧಾಂತಗಳನ್ನು ಹೊಂದಿರುವ ಜನರು ಸಾಮಾನ್ಯ ಉದ್ದೇಶಕ್ಕಾಗಿ ಹೇಗೆ ಒಗ್ಗೂಡಬಹುದು ಎಂಬುದನ್ನು ಸ್ವಾತಂತ್ರ್ಯ ಹೋರಾಟಗಾರರು ತೋರಿಸಿಕೊಟ್ಟಿದ್ದಾರೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಪ್ರತಿಪಾದಿಸಿದರು.

ಸರನ್ ಜಿಲ್ಲೆಯ ಮಲ್ಖಾಚಕ್ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸ್ಮರಣಾರ್ಥ ನಡೆದ ಸಮಾರಂಭದಲ್ಲಿ ಮಾತನಾಡಿದ ಭಾಗವತ್, 'ವಿಶ್ವಶಕ್ತಿ ಎಂಬ ಕಲ್ಪನೆಯೇ ಸರಿಯಲ್ಲ. ಇಂತಹ ಮಹತ್ವಾಕಾಂಕ್ಷೆ ಫಲವೇ ರಷ್ಯಾ–ಉಕ್ರೇನ್ ಯುದ್ಧ. ಭಾರತದ ಪ್ರಾಚೀನ ನಾಗರಿಕತೆಯು ಎಂದಿಗೂ ವಿಶ್ವ ಕಲ್ಯಾಣವನ್ನೇ ಪ್ರತಿಪಾದಿಸುವುದರಿಂದ, ಅದು ವಿಶ್ವಶಕ್ತಿಯ ಮಹತ್ವಾಕಾಂಕ್ಷೆಯನ್ನು ಹೊಂದಲು ಸಾಧ್ಯವಿಲ್ಲ.' ಎಂದು ಹೇಳಿದರು.



ಚಾಲೆಂಜರ್ಸ್ ಕಪ್ ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಗೆದ್ದ ಜೈನ್ ವಿಶ್ವವಿದ್ಯಾಲಯ ತಂಡ. ಎಡಭಾಗದಿಂದ ನಿಂತವರು– ಶ್ರೀಶ, ಜೇಶುವಾ ಪಿಂಟೋ, ಮಾನ್ಸೂನ್ ಬೇಗ್, ಮುಖ್ಯ ಕೋಚ್ ಜಿಆರ್‌ಎಲ್ ಪ್ರಸಾದ್, ಸಹಾಯಕ ಕೋಚ್ ಬ್ರಿಜೇಶ್ ತಿವಾರಿ, ಶುಭಂಸಿಂಗ್, ಪೀಟರ್, ಗೌತಮ್ ಪಿ. ಎಡಭಾಗದಿಂದ ಕೂತವರು– ಆಶ್ಲೆ ಮೊಂಟೆರಿಯೊ, ಅಕ್ಷಯ್ ಪ್ರಸಾದ್, ನರೇಶ್.ಜಿ, ಪಶುಪತಿ ಪಾಂಡ್ಯನ್, ಪ್ರಥಮ್‌ಶೆಟ್ಟಿ, ಅರ್ಜುನ್ ಯಾದವ್ / ಚಿತ್ರ: ಹಂಪಾ ನಾಗರಾಜ್

ಜೈನ್ ವಿ.ವಿ ತಂಡ ಚಾಂಪಿಯನ್

ಮೈಸೂರು: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡವು ಇಲ್ಲಿನ ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆದ ಚಾಲೆಂಜರ್ಸ್ ಕಪ್ ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಭಾನುವಾರ ಸಂಜೆ ನಡೆದ ರೋಚಕ ಪಂದ್ಯದಲ್ಲಿ ಎದುರಾಳಿ ಚೆನ್ನೈನ ಲೊಯೊಲಾ ಕಾಲೇಜು ತಂಡವನ್ನು 54–37 ಪಾಯಿಂಟ್‌ಗಳಿಂದ ಮಣಿಸಿ, ಚಾಂಪಿಯನ್ ಟ್ರೋಫಿ ಜೊತೆಗೆ ₹50ಸಾವಿರ ಪ್ರಶಸ್ತಿ ತನ್ನದಾಗಿಸಿಕೊಂಡಿತು. ರನ್ನರ್ ಅಪ್ ಆದ ಲೊಯೊಲಾ ತಂಡವು ಟ್ರೋಫಿ ಜೊತೆಗೆ ₹20 ಸಾವಿರ ಪಡೆಯಿತು.

ಮೊದಲ ಸುತ್ತಿನ ಸೆಮಿಫೈನಲ್‌ನಲ್ಲಿ ಮೈಸೂರಿನ ಮೈಕಾ ಕಾಲೇಜು ತಂಡವನ್ನು ಜೈನ್ ಕಾಲೇಜು ತಂಡವು 56–16 ಪಾಯಿಂಟ್‌ಗಳಿಂದ ಸೋಲಿಸಿ ಫೈನಲ್ ಪ್ರವೇಶಿತ್ತು. ಜೈನ್ ಕಾಲೇಜು ತಂಡದ ಪರವಾಗಿ ಗೌತಮ್ (10 ಪಾಯಿಂಟ್) ಮೈಕಾ ಕಾಲೇಜು ತಂಡದ ಪರವಾಗಿ ಧವನ್ (05 ಪಾಯಿಂಟ್) ಅಂಕ ಪಡೆದರು.

ಮತ್ತೊಂದು ಸುತ್ತಿನ ಉಪಾಂತ್ಯದಲ್ಲಿ ಚೆನ್ನೈನ ಲೊಯೊಲಾ ಕಾಲೇಜು ತಂಡವು ಚೆನ್ನೈನ ಸತ್ಯಭಾಮ ತಂಡದವರನ್ನು 70–41 ಪಾಯಿಂಟ್‌ಗಳಿಂದ ಸೋಲಿಸಿ ಅಂತಿಮ ಸುತ್ತು ಪ್ರವೇಶಿಸಿತ್ತು.

ನೈಸ್ ಡಿಚ್ ಕಪ್: ಬಾಷ್‌ಗೆ ಜಯ

ಬೆಂಗಳೂರು: ಅರುಣ್‌ಕುಮಾರ್ ಗಳಿಸಿದ ಆರು ಗೋಲುಗಳ ನೆರವಿನಿಂದ ಬಾಷ್ ತಂಡದವರು ನೈಸ್ ಡಿಎಚ್ ಕಪ್ ಕಾರ್ಪೊರೇಟ್ 'ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ'ಯಲ್ಲಿ ಭರ್ಜರಿ ಗೆಲುವು ಪಡೆದರು.

ಭಾನುವಾರ ನಡೆದ ಪಂದ್ಯದಲ್ಲಿ ಬಾಷ್ 8–0 ಗೋಲುಗಳಿಂದ ಅಡೋಬಿ ತಂಡವನ್ನು ಮಣಿಸಿತು. ಈ ಗೆಲುವಿನ ಮೂಲಕ ಬಾಷ್ ತಂಡ 'ಬಿ' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ದಿನದ ಮೊದಲ ಪಂದ್ಯದಲ್ಲಿ ಟೈಟನ್ 4–2 ರಲ್ಲಿ ಸ್ವಿಸ್ ರೇ ತಂಡವನ್ನು ಸೋಲಿಸಿತು. ಹರಿಪ್ರಸಾದ್ ಮತ್ತು ಶಿವಶಂಕರನ್ ಅವರು ಉತ್ತಮ ಆಟವಾಡಿದರು.

ಇತರ ಪಂದ್ಯಗಳಲ್ಲಿ ಸ್ವಿಸ್ ರೇ 1–0 ರಲ್ಲಿ ಎಪ್ಸಿಲಾನ್ ವಿರುದ್ಧ, ಐಕ್ವಿಯಾ 2–1 ರಲ್ಲಿ ಅಡೋಬಿ ವಿರುದ್ಧ ಗೆಲುವು ಪಡೆದವು. 10 ಪಾಯಿಂಟ್ಸ್ ಹೊಂದಿರುವ ಟೈಟನ್ ತಂಡ 'ಎ' ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

ಹೈದರಾಬಾದ್ ರೇಸ್

ಆರ್ಥರ್ ಗೆಲ್ಲುವ ನಿರೀಕ್ಷೆ

ಓಸ್ಮಾನ್ ಸಾಗರ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆರ್ಥರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಬೆಲ್ಲೊ 3, ಗೋಲ್ಡನ್ ಫೋರ್ಜರ್ 4, ಕಾಸ್ಟೆಲ್ಲೊ 1
2ನೇ ರೇಸ್: ರೈನಿಂಗ್ ಕ್ವೀನ್ 5, ಸೇಂಟ್ ಎಮಿಲಿಯಾನ್ 4, ದಟ್ಸ್ ಮೈ ವೇ 2
3ನೇ ರೇಸ್: ಹ್ಯೂಮಾನಿಟೇರಿಯನ್ 3, ಕ್ವಾಲಿಟಿ ವಾರಿಯರ್ 2, ಡ್ರೀಮ್ ಸ್ಟೇಶನ್ 1
4ನೇ ರೇಸ್: ಬೆಡ್‌ಫೋರ್ಡ್ 2, ಮೈಂಡ್ ರೀಡರ್ 7, ಫೋರ್ ಒನ್ ಫೋರ್ 8
5ನೇ ರೇಸ್: ಸೂಪರ್‌ಸ್ಟೆಲ್ಲಾರ್ 1, ಎಕ್ಸ್‌ಪ್ಲೋಸಿವ್ ಸ್ಪಾರ್ಕ್ 2, ಆರೋ ಟೌನ್ 2
6ನೇ ರೇಸ್: ಆರ್ಥರ್ 2, ಜೂರಾಮೆಂಟೊ 5, ಗಾಲ್ವಾನ್ 3
7ನೇ ರೇಸ್: ಮಲಾಹಟ್ 2, ಸೀ ಆಫ್ ಕ್ಲಾಸ್ 3, ಸಿಲ್ವರ್ ಲೈನಿಂಗ್ 4

ಉತ್ತಮ ಬೆಟ್: ಸೂಪರ್‌ಸ್ಟೆಲ್ಲಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಮೊರೊಕ್ಕೊಗೆ ಮಣಿದ ಬೆಲ್ಜಿಯಂ

ಮತ್ತೊಂದು ಬಲಿಷ್ಠ ತಂಡಕ್ಕೆ ಆಘಾತ; ಸಬೀರಿ, ಝುಕಾರಿಯಾ ಮಿಂಚು



ಮೊರೊಕ್ಕೊ ತಂಡದ ಅಬ್ದೆಲ್‌ಹಮೀದ್ ಸಬಿರಿ (ಬಲ) ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ದೋಹಾ (ರಾಯಿಟರ್ಸ್): ಫುಟ್‌ಬಾಲ್ ಕ್ಷೇತ್ರದ ಬಲಾಢ್ಯ ತಂಡಗಳು ಈ ಬಾರಿಯ ಫಿಫಾ ವಿಶ್ವಕಪ್‌ನಲ್ಲಿ ತಮಗಿಂತಲೂ ಕಡಿಮೆ ಶ್ರೇಯಾಂಕದ ಎದುರಾಳಿಗಳಿಂದ ಸೋಲಿನ ಆಘಾತ ಅನುಭವಿಸುತ್ತಿವೆ.

ಈ ಸಾಲಿಗೆ ಭಾನುವಾರ ಬೆಲ್ಜಿಯಂ ಕೂಡ ಸೇರಿತು. ಎಫ್ ಗುಂಪಿನ ಪಂದ್ಯದಲ್ಲಿ ಬದಲೀ ಆಟಗಾರರಾದ ಅಬ್ದೆಲ್‌ಹಮೀದ್ ಸಬೀರಿ ಹಾಗೂ ಝುಕಾರಿಯಾ ಅಬೂಖಲಾಲ್ ಅವರ ಕಾಲ್ಚಳಕದ ಬಲದಿಂದ ಮೊರೊಕ್ಕೊ ತಂಡವು 2–0ಯಿಂದ ಬೆಲ್ಜಿಯಂ ಬಳಗಕ್ಕೆ ಆಘಾತ ನೀಡಿತು.

ಮೊರೊಕ್ಕೊ ತಂಡಕ್ಕೆ 24 ವರ್ಷಗಳಲ್ಲಿ ವಿಶ್ವಕಪ್ ಟೂರ್ನಿಯಲ್ಲಿ ಒಲಿದ ಮೊದಲ ಜಯ ಇದಾಗಿದೆ. ಮೊರೊಕ್ಕೊ ಅಭಿಮಾನಿಗಳು ಈ ಜಯದಿಂದಾಗಿ ವಿಶ್ವಕಪ್ ಮುಡಿಗೇರಿಸಿಕೊಂಡಂತೆ ಸಂಭ್ರಮಿಸಿದ್ದಾರೆ. 1998ರಲ್ಲಿ ಸ್ಕಾಟ್ಲೆಂಡ್ ವಿರುದ್ಧ ಜಯಿಸಿದ ಮೊರೊಕ್ಕೊ ತಂಡವು ಮತ್ತೆ ಯಶಸ್ವಿಯಾಗಿರಲಿಲ್ಲ. 2018ರ ಟೂರ್ನಿಯಲ್ಲಿ ಕೇವಲ ಒಂದು ಅಂಕ ಪಡೆದು ನಿರ್ಗಮಿಸಿತ್ತು.

'ಸರಿಯಾದ ಸಮಯದಲ್ಲಿ ಗೋಲು ಗಳಿಸಿದೆವು. ಈ ಜಯಕ್ಕೆ ನಮ್ಮ ತಂಡ ಅರ್ಹವಾಗಿದೆ. ಪಂದ್ಯದ 70 ನಿಮಿಷಗಳ ನಂತರ ನಮ್ಮ ಕೆಲವು ಆಟಗಾರರು ಸುಸ್ತಾಗಿದ್ದರು. ಆದರೆ ಅಭಿಮಾನಿಗಳು ನಮ್ಮನ್ನು ಹುರಿದುಂಬಿಸಿದ ರೀತಿಯಿಂದ ಆಟಗಾರರಲ್ಲಿ ಚೈತನ್ಯ ಮೂಡಿತ್ತು. ಅದು ನಮಗೆ ಉಪಯುಕ್ತವಾಯಿತು' ಎಂದು ಪಂದ್ಯದ ಆಟಗಾರ ಹಕೀಮ್ ಝಿಯೆಚ್ ಹೇಳಿದರು.


ಪಂದ್ಯದ 73ನೇ ನಿಮಿಷದಲ್ಲಿ ಸಬೀರಿ ಹಾಗೂ ಇಂಜುರಿ ಸಮಯದಲ್ಲಿ ಝುಕಾರಿಯಾ (90+2) ಗೋಲು ಗಳಿಸಿದರು.

ಬೆಲ್ಜಿಯಂ ತಂಡದ ಆಟಗಾರರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ. ಆದ್ದರಿಂದ ಕೊನೆಯ ಹತ್ತು ನಿಮಿಷಗಳಿದ್ದಾಗ ಬೆಲ್ಜಿಯಂ ತಂಡದ ಮ್ಯಾನೇಜರ್ ರಾಬರ್ಟೊ ಮಾರ್ಟಿನೇಜ್ ಅವರು ಪ್ರಮುಖ ಅಟಗಾರ ರೊಮೆಲು ಲುಕಾಕು ಅವರನ್ನು ಕಣಕ್ಕಿಳಿಸಿದರು. ಸ್ನಾಯುಸೆಳೆತದ ನೋವಿನಿಂದ ಬಸವಳಿದಿದ್ದರೂ ಲುಕಾಕು ಆಡಿದರು.

ಬೆಲ್ಜಿಯಂ ತಂಡವು ತನ್ನ ಮೊದಲ ಪಂದ್ಯದಲ್ಲಿ 1–0ಯಿಂದ ಕೆನಡಾ ವಿರುದ್ಧ ಜಯಿಸಿದೆ. 2018ರಲ್ಲಿ ಮೂರನೇ ಸ್ಥಾನ ಗಳಿಸಿತ್ತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಗಳಿಸಿದೆ. ಆದರೆ ಈ ಪಂದ್ಯದಲ್ಲಿ ಹಿನ್ನಡೆ ಅನುಭವಿಸಿತು. ಮುಂದಿನ ಪಂದ್ಯದಲ್ಲಿ ಕ್ರೊವೇಷ್ಯಾ ವಿರುದ್ಧ ಜಯಿಸಿದರೆ ಮಾತ್ರ ಬೆಲ್ಜಿಯಂ ತಂಡಕ್ಕೆ 16ರ ಘಟ್ಟಕ್ಕೆ ಪ್ರವೇಶ ಸಿಗಲಿದೆ.

ಮೆಕ್ಸಿಕೊ ವಿರುದ್ಧ ಅರ್ಜೆಂಟೀನಾಗೆ 2–0 ಗೋಲುಗಳ ಗೆಲುವು

ಮೆಸ್ಸಿ ಮೋಡಿಯಲ್ಲಿ ಅರಳಿದ ಜಯ



ಲಯೊನೆಲ್ ಮೆಸ್ಸಿ –ಎಎಫ್‌ಪಿ ಚಿತ್ರ

ಲುಸೈಲ್, ಕತಾರ್ (ರಾಯಿಟರ್ಸ್/ಎಎಫ್‌ಪಿ): ಇಲ್ಲಿನ ಕ್ರೀಡಾಂಗಣದಲ್ಲಿ ಸೇರಿದ್ದ ಭಾರಿ ಸಂಖ್ಯೆ ಪ್ರೇಕ್ಷಕರು ಲಯೊನೆಲ್ ಮೆಸ್ಸಿ ಮೋಡಿಗೆ ಸಾಕ್ಷಿಯಾದರು. ಈ ದಿಗ್ಗಜ ಆಟಗಾರನ ನೆರವಿನಿಂದ ಅರ್ಜೆಂಟೀನಾ ತಂಡವು ಶನಿವಾರ ಮೆಕ್ಸಿಕೊಗೆ ಸೋಲುಣಿಸಿ ವಿಶ್ವಕಪ್ ಟೂರ್ನಿಯ ಪ್ರಶಸ್ತಿ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.

ನಾಯಕ ಮೆಸ್ಸಿ ಮತ್ತು ಎಂಜೊ ಫರ್ನಾಂಡಿಸ್ ಗಳಿಸಿದ ಗೋಲುಗಳ ಬಲದಿಂದ 'ಸಿ' ಗುಂಪಿನ ಹಣಾಹಣಿಯಲ್ಲಿ ಅರ್ಜೆಂಟೀನಾ 2–0ರಿಂದ ಗೆದ್ದು ನಾಕೌಟ್ ಪ್ರವೇಶದ ಸ್ಪರ್ಧೆಯಲ್ಲಿ ಉಳಿದುಕೊಂಡಿತು. ಸೌದಿ ಅರೇಬಿಯಾ ಎದುರಿನ ಆರಂಭಿಕ ಪಂದ್ಯದ ಸೋಲಿನಿಂದಾಗಿ, ತೀವ್ರ ನಿರಾಸೆಗೆ ಒಳಗಾಗಿದ್ದ ಮೆಸ್ಸಿ ಅಭಿಮಾನಿಗಳಿಗೆ ಈ ಗೆಲುವು ಸಂತಸ ತಂದಿತ್ತಿದೆ.

ಗೆಲ್ಲಲೇಬೇಕಿದ್ದ ಸೆಣಸಾಟದಲ್ಲಿ ಅರ್ಜೆಂಟೀನಾ ತಂಡವು ಮೆಕ್ಸಿಕೊ ಒತ್ತಡವನ್ನು ಮೆಟ್ಟಿ ನಿಂತಿತು. ಪಂದ್ಯದ ಮೊದಲಾರ್ಧ ಗೋಲುರಹಿತವಾಗಿತ್ತು. 64ನೇ ನಿಮಿಷದಲ್ಲಿ ಮೆಸ್ಸಿ ಗಳಿಸಿದ ಮನಮೋಹಕ ಗೋಲು ಪಂದ್ಯದ ಗತಿ ಪರಿವರ್ತಿಸಿತು. ಏಂಜೆಲ್ ಡಿ ಮರಿಯಾ ನೀಡಿದ ಪಾಸ್‌ನಲ್ಲಿ ಮೆಸ್ಸಿ 25 ಮೀಟರ್ಸ್ ದೂರದಿಂದ ಚೆಂಡನ್ನು ಕೆಳಮಟ್ಟದಲ್ಲಿ ಗೋಲ್‌ಪೋಸ್ಟ್‌ನತ್ತ ಕಿಕ್ ಮಾಡಿದರು.

ಮಿಂಚಿನ ವೇಗದಲ್ಲಿ ಬಂದ ಚೆಂಡು ತಡೆಯುವಲ್ಲಿ ಮೆಕ್ಸಿಕೊ ಗೋಲ್‌ಕೀಪರ್ ವಿಫಲರಾದರು. ಚೆಂಡು ಗುರಿ ಸೇರುತ್ತಲೇ ಮೆಸ್ಸಿ ಭಾವುಕರಾಗಿ ಅಭಿಮಾನಿಗಳತ್ತ ಓಡಿ ಸಿಹಿಮುತ್ತಿನ ಸಂಕೇತ ತೋರಿದರು.

ಬದಲಿ ಆಟಗಾರನಾಗಿ ಬಂದ ಫರ್ನಾಂಡಿಸ್ 87ನೇ ನಿಮಿಷದಲ್ಲಿ ಗೋಲು ದಾಖಲಿಸಿ ಅರ್ಜೆಂಟೀನಾದ ಸಂಭ್ರಮ ಇಮ್ಮಡಿಯಾಗುವಂತೆ ಮಾಡಿದರು.

ಮರಡೋನಾ ಸರಿಗಟ್ಟಿದ ಮೆಸ್ಸಿ: 35 ವರ್ಷದ ಮೆಸ್ಸಿ ಅವರಿಗೆ ವಿಶ್ವಕಪ್ ಟೂರ್ನಿಯಲ್ಲಿ ಇದು ಒಟ್ಟು ಎಂಟನೇ ಗೋಲು ಆಗಿದೆ. ಈ ಆವೃತ್ತಿಯಲ್ಲಿ ಎರಡನೆಯದು. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಮತ್ತು ಅರ್ಜೆಂಟೀನಾದ ದಂತಕತೆ ಡಿಗೊ ಮರಡೋನಾ ಕೂಡ ಎಂಟು ಗೋಲು ದಾಖಲಿಸಿದ್ದಾರೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಅರ್ಜೆಂಟೀನಾ 1–2ರಿಂದ ಸೌದಿ ಅರೇಬಿಯಾಕ್ಕೆ ಮಣಿದಿತ್ತು. ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿರುವ ಮೆಸ್ಸಿ ಬಳಗ ಬುಧವಾರ ಪೋಲೆಂಡ್ ಸವಾಲು ಎದುರಿಸಲಿದೆ. ಪೋಲೆಂಡ್ ಸಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

ಹಾಡು, ನೃತ್ಯ: ಮೆಸ್ಸಿ ಮತ್ತು ಅರ್ಜೆಂಟೀನಾ ತಂಡದ ಆಟಗಾರರು ಪಂದ್ಯದ ಗೆಲುವಿನ ಬಳಿಕ ಡ್ರೆಸ್ಸಿಂಗ್ ಕೊಠಡಿಯಲ್ಲಿ ಹಾಡು, ನೃತ್ಯದ ಮೂಲಕ ಸಂಭ್ರಮಿಸಿದರು.

ಗೋಲು ವಿವರ

ಅರ್ಜೆಂಟೀನಾ 2
ಲಯೊನೆಲ್ ಮೆಸ್ಸಿ (**64**ನೇ ನಿ.)
ಎಂಜೊ ಫರ್ನಾಂಡಿಸ್ (**87**ನೇ ನಿ.)

ಮೆಕ್ಸಿಕೊ 0

ಕೀಶರ್ ಫುಲೆರ್ ಗೋಲು; ಕೋಸ್ಟರಿಕಾ ಗೆಲುವು

ಜಪಾನ್‌ಗೆ ಅನಿರೀಕ್ಷಿತ ಆಘಾತ



ಗೋಲು ಗಳಿಸಿದ ಸಂಭ್ರಮದಲ್ಲಿ ಕೀಶರ್ ಫುಲೆರ್ –ಎಎಫ್‌ಪಿ ಚಿತ್ರ

ಅಲ್ ರಯ್ಯಾನ್, ಕತಾರ್ (ರಾಯಿಟರ್ಸ್): ವಿಶ್ವಕಪ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ಹಾದಿಯಲ್ಲಿದ್ದ ಜಪಾನ್ ತಂಡಕ್ಕೆ ಕೋಸ್ಟರಿಕಾ ಅನಿರೀಕ್ಷಿತ ಆಘಾತ ನೀಡಿತು.

ಭಾನುವಾರ ನಡೆದ 'ಇ' ಪಂದ್ಯದಲ್ಲಿ ಕೀಶರ್ ಫುಲೆರ್ ಅವರು 81ನೇ ನಿಮಿಷದಲ್ಲಿ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಕೋಸ್ಟರಿಕಾ 1–0 ರಲ್ಲಿ ಗೆದ್ದು, ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶದ ಸಾಧ್ಯತೆಯನ್ನು ಜೀವಂತವಾಗಿರಿಸಿಕೊಂಡಿತು.

ಜಪಾನ್ ತನ್ನ ಮೊದಲ ಪಂದ್ಯದಲ್ಲಿ ಜರ್ಮನಿ ವಿರುದ್ಧ ಐತಿಹಾಸಿಕ ಗೆಲುವು ಪಡೆದಿದ್ದರೆ, ಕೋಸ್ಟರಿಕಾ ತಂಡ ಸ್ಪೇನ್ ಕೈಯಲ್ಲಿ 0–7 ರಲ್ಲಿ ಸೋತಿತ್ತು. ಆದ್ದರಿಂದ ಈ ಪಂದ್ಯ ಗೆದ್ದು ಜಪಾನ್, 16ರ ಘಟ್ಟದಲ್ಲಿ ಸ್ಥಾನ ಖಚಿತಪಡಿಸಲಿದೆ ಎಂದೇ ನಿರೀಕ್ಷಿಸಲಾಗಿತ್ತು. ಕೆಚ್ಚೆದೆಯಿಂದ ಹೋರಾಡಿದ ಕೋಸ್ಟರಿಕಾ ಅದಕ್ಕೆ ಅವಕಾಶ ನೀಡಲಿಲ್ಲ.

ಇದೀಗ ಜಪಾನ್ ತಂಡದ ನಾಕೌಟ್ ಪ್ರವೇಶದ ಸಾಧ್ಯತೆಯು ಸ್ಪೇನ್ ವಿರುದ್ಧ ನಡೆಯುವ ಕೊನೆಯ ಲೀಗ್ ಪಂದ್ಯದ ಮೇಲೆ ಅವಲಂಬಿತವಾಗಿದೆ. ಜಪಾನ್ ತಂಡ ಸೋತದ್ದು, ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶದ ಆಸೆಗೆ ಜೀವ ನೀಡಿದೆ.

ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಹೆಚ್ಚಿನ ಅವಧಿಯಲ್ಲೂ ಜಪಾನ್ ಆಟಗಾರರು ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದ್ದರು. ಆದರೆ ಕೋಸ್ಟರಿಕಾ ತನಗೆ ದೊರೆತ ಅತ್ಯುತ್ತಮ ಅವಕಾಶವನ್ನು ಯಶಸ್ವಿಯಾಗಿ ಬಳಸಿಕೊಂಡು ಗೆಲುವಿನ ನಗು ಬೀರಿತು. ಆರಂಭದ ಕೆಲವು ನಿಮಿಷಗಳಲ್ಲಿ ಜಪಾನ್, ಗೋಲು ಗಳಿಸಲು ಮೇಲಿಂದ ಮೇಲೆ ಪ್ರಯತ್ನ ನಡೆಸಿದ್ದನ್ನು ಬಿಟ್ಟರೆ, ಪ್ರಥಮಾರ್ಧದಲ್ಲಿ ಉಭಯ ತಂಡಗಳು ನಿಧಾನಗತಿಯ ಆಟದ ಮೊರೆಹೋದವು.

ಕ್ರಿಕೆಟ್: ಮಯಂಕ್ ಬಳಗಕ್ಕೆ ಎಂಟರ ಘಟ್ಟದ ಸವಾಲು

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡ ಸೋಮವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟದ ಪಂದ್ಯದಲ್ಲಿ ಪಂಜಾಬ್ ಎದುರು ಆಡಲಿದೆ.

ಒಂದೇ ತಿಂಗಳಿನಲ್ಲಿ ದೇಶಿ ಕ್ರಿಕೆಟ್‌ನ ಎರಡು ಪ್ರಮುಖ ಟೂರ್ನಿಗಳ ಎಂಟರ ಘಟ್ಟದ ಪಂದ್ಯಗಳಲ್ಲಿ ಕರ್ನಾಟಕ ಆಡುತ್ತಿದೆ. 27 ದಿನಗಳ ಹಿಂದಷ್ಟೇ ಕೋಲ್ಕತ್ತದಲ್ಲಿ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಪಂಜಾಬ್ ಎದುರು ಕರ್ನಾಟಕ ಸೋತಿತ್ತು. ಆ ಹಣಾಹಣಿಯಲ್ಲಿ ಶತಕ ಬಾರಿಸಿದ್ದ ಶುಭಮನ್ ಗಿಲ್ ನ್ಯೂಜಿಲೆಂಡ್‌ನಲ್ಲಿ ನಡೆಯುತ್ತಿರುವ ಸರಣಿಯಲ್ಲಿ ಭಾರತ ತಂಡದಲ್ಲಿ ಆಡುತ್ತಿದ್ದಾರೆ. ಅದರಿಂದಾಗಿ ಪಂಜಾಬ್ ಎದುರು ಮುಯ್ಯಿ ತೀರಿಸಿಕೊಳ್ಳಲು ಕರ್ನಾಟಕಕ್ಕೆ ಇದು ಉತ್ತಮ ಅವಕಾಶ.

ನಾಯಕ ಮಯಂಕ್ ಬ್ಯಾಟಿಂಗ್ ಲಯ ಕಂಡುಕೊಳ್ಳಲು ತಡಕಾಡುತ್ತಿದ್ದಾರೆ. ಆದರೆ ನವಪ್ರತಿಭೆ ನಿಕಿನ್ ಜೋಸ್ ಉತ್ತಮವಾಗಿ ಆಡುತ್ತಿದ್ದಾರೆ. ಅವರು ಎಂಟು ಪಂದ್ಯಗಳಿಂದ 409 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಒಂದು ಶತಕ ಹಾಗೂ ಮೂರು ಅರ್ಧಶತಕಗಳು ಇವೆ.

ಪಂದ್ಯ ಆರಂಭ: ಬೆಳಿಗ್ಗೆ 9

ಬ್ರೆಜಿಲ್‌ಗೆ ಗಾಯದ ಸಮಸ್ಯೆ

ಅಲ್ ರಯ್ಯಾನ್, ಕತಾರ್ (ರಾಯಿಟರ್ಸ್): ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡ ವಿಶ್ವಕಪ್ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಸೋಮವಾರ ಸ್ವಿಟ್ಜರ್‌ಲೆಂಡ್ ವಿರುದ್ಧ ಪೈಪೋಟಿ ನಡೆಸಲಿದೆ.

ಪ್ರಮುಖ ಆಟಗಾರರು ಗಾಯಗೊಂಡಿರುವುದರಿಂದ ಹೊಸಬರಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬುದು ಕೋಚ್ ಟೀಟೆ ಅವರ ಚಿಂತೆಗೆ ಕಾರಣವಾಗಿದೆ. ಸರ್ಬಿಯಾ ವಿರುದ್ಧದ ಪಂದ್ಯದ ವೇಳೆ ಗಾಯಗೊಂಡಿದ್ದ ಸ್ಟ್ರೈಕರ್ ನೇಮರ್ ಮತ್ತು ಫುಲ್‌ಬ್ಯಾಕ್ ಆಟಗಾರ ಡ್ಯಾನಿಲೊ ಈ ಪಂದ್ಯದಲ್ಲಿ ಆಡುತ್ತಿಲ್ಲ.

ಮಿಡ್‌ಫೀಲ್ಡರ್ ಲುಕಾಸ್ ಪಕೇಟಾ ಅವರೂ ಫಿಟ್‌ನೆಸ್ ಸಮಸ್ಯೆ ಎದುರಿಸುತ್ತಿದ್ದು, ಸೋಮವಾರ ಕಣಕ್ಕಿಳಿಯುವ ಸಾಧ್ಯತೆ ತೀರಾ ಕಡಿಮೆ. ಟೀಟೆ ಅವರು ತಂಡದ ಆಯ್ಕೆಯ ಬಗ್ಗೆ ಭಾನುವಾರ ಸುದ್ದಿಗೋಷ್ಠಿಯಲ್ಲಿ ಯಾವುದೇ ಗುಟ್ಟು ಬಿಟ್ಟುಕೊಟ್ಟಿಲ್ಲ.

ಪಕೇಟಾ ಅವರು ಭಾನುವಾರ ತರಬೇತಿ ಅವಧಿಯನ್ನು ಅರ್ಧದಲ್ಲೇ ಮೊಟಕುಗೊಳಿಸಿದರು ಎಂದು ಮೂಲಗಳು ಹೇಳಿವೆ.

ನೇಮರ್ ಅನುಪಸ್ಥಿತಿಯಲ್ಲಿ ಪಕೇಟಾ ಅವರನ್ನು ಆರಂಭದಲ್ಲೇ ಕಣಕ್ಕಿಳಿಸಲು ಕೋಚ್ ಬಯಸಿದ್ದರು. ಇದೀಗ ಅವರೂ ಅಲಭ್ಯರಾದರೆ, ರಿಯಲ್ ಮ್ಯಾಡ್ರಿಡ್‌ಗೆ ಆಡುವ ಯುವ ಆಟಗಾರ ರಾಡ್ರಿಗೊ ಆರಂಭಿಕ ಇಲೆವೆನ್‌ನಲ್ಲಿ ಕಾಣಿಸಿಕೊಳ್ಳಬಹುದು.

ಮಿಡ್‌ಫೀಲ್ಡ್‌ಗೆ ಬಲ ತುಂಬಲ ಕ್ಯಾಸೆಮಿರೊ ಅವರನ್ನು ಆಡಿಸುವ ಸಾಧ್ಯತೆಯೂ ಇದೆ. ಡ್ಯಾನಿಲೊ ಸ್ಥಾನದಲ್ಲಿ ಸೆಂಟರ್ ಬ್ಯಾಕ್ ಆಟಗಾರ ಎಡೆರ್ ಮಿಲಿಟಾವೊ ಅವಕಾಶ ಪಡೆಯಬಹುದು ಎಂದು ಮೂಲಗಳು ಹೇಳಿವೆ.

ಇಂದಿನ ಪಂದ್ಯ

ಪಂದ್ಯ	ಸಮಯ
ಕ್ಯಾಮರೂನ್ Vs ಸರ್ಬಿಯಾ	ಮಧ್ಯಾಹ್ನ 3.30
ದ. ಕೊರಿಯಾ Vs ಘಾನಾ	ಸಂಜೆ 6.30
ಬ್ರೆಜಿಲ್ Vs ಸ್ವಿಟ್ಜರ್ಲೆಂಡ್	ರಾತ್ರಿ 9.30
ಪೋರ್ಚುಗಲ್ Vs ಉರುಗ್ವೆ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ದಾಖಲೆ ಪ್ರೇಕ್ಷಕರು

ಅರ್ಜೆಂಟೀನಾ ಮತ್ತು ಮೆಕ್ಸಿಕೊ ನಡುವಣ ಪಂದ್ಯಕ್ಕೆ 88,966 ಪ್ರೇಕ್ಷಕರು ಸಾಕ್ಷಿಯಾದರು. ವಿಶ್ವಕಪ್ ಪಂದ್ಯವೊಂದಕ್ಕೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದು, 28 ವರ್ಷಗಳಲ್ಲೇ ಗರಿಷ್ಠ ಎನಿಸಿದೆ. 1994ರಲ್ಲಿ ಅಮೆರಿಕದ ಕ್ಯಾಲಿಫೋರ್ನಿಯಾದ ರೋಸ್‌ಬೌಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ಅನ್ನು 91,194 ಜನರು ವೀಕ್ಷಿಸಿದ್ದರು. ಈ ಪಂದ್ಯದಲ್ಲಿ ಬ್ರೆಜಿಲ್ ತಂಡವು ಇಟಲಿಯನ್ನು ಸೋಲಿಸಿತ್ತು.

1950ರಲ್ಲಿ ರಿಯೊ ಡಿ ಜನೈರೊದ ಮರಕಾನಾ ಕ್ರೀಡಾಂಗಣದಲ್ಲಿ ನಡೆದಿದ್ದ ಉರುಗ್ವೆ–ಬ್ರೆಜಿಲ್ ಫೈನಲ್ ಪಂದ್ಯವನ್ನು 1,73,850 ಮಂದಿ ಕ್ರೀಡಾಂಗಣದಲ್ಲಿ ವೀಕ್ಷಿಸಿದ್ದು ಅತ್ಯಂತ ಗರಿಷ್ಠ ಎನಿಸಿದೆ.

ಕ್ರೊವೇಷ್ಯಾಗೆ ಜಯ; ಕೆನಡಾ 'ಔಟ್'

ದೋಹಾ: ಆಕ್ರಮಣಕಾರಿ ಆಟವಾಡಿದ ಕ್ರೊವೇಷ್ಯಾ ತಂಡ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ 4–1 ಗೋಲುಗಳಿಂದ ಕೆನಡಾ ತಂಡವನ್ನು ಮಣಿಸಿತು.

ಈ ಗೆಲುವಿನ ಮೂಲಕ ನಾಲ್ಕು ಪಾಯಿಂಟ್ಸ್‌ಗಳೊಂದಿಗೆ 'ಎಫ್' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿದ ಕ್ರೊವೇಷ್ಯಾ, ನಾಕೌಟ್ ಹಂತದ ಪ್ರವೇಶವನ್ನು ಬಹುತೇಕ ಖಚಿತಪಡಿಸಿಕೊಂಡಿತು. ಸತತ ಎರಡನೇ ಸೋಲು ಅನುಭವಿಸಿದ ಕೆನಡಾ, ಟೂರ್ನಿಯಿಂದ ಹೊರಬಿತ್ತು.

ಅಲ್ಫೋನ್ಸೊ ಡೇವಿಸ್ ಅವರು ಆರಂಭದಲ್ಲಿ ಗೋಲು ಗಳಿಸಿ ಕೆನಡಾಕ್ಕೆ ಮುನ್ನಡೆ ತಂದಿತ್ತರು. ಆ ಬಳಿಕ ಕ್ರೊವೇಷ್ಯಾ ತಂಡದವರು ಪಂದ್ಯದ ಮೇಲೆ ಪೂರ್ಣ ಹಿಡಿತ ಸಾಧಿಸಿದರು. ಆಂದ್ರೆ ಕ್ರಾಮರಿಚ್ (36 ಮತ್ತು 70ನೇ ನಿ.) ಎರಡು ಗೋಲುಗಳನ್ನು ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಾರ್ಕೊ ಲಿವಜಾ (44 ನೇ ನಿ.) ಹಾಗೂ ಲೊವ್ರೊ ಮಜೆರ್ (90+4) ಅವರು ತಲಾ ಒಂದು ಗೋಲು ತಂದಿತ್ತರು.

'ಎಫ್' ಗುಂಪಿನಲ್ಲಿ ಕ್ರೊವೇಷ್ಯಾ ಮತ್ತು ಮೊರೊಕ್ಕೊ ತಲಾ ನಾಲ್ಕು ಪಾಯಿಂಟ್ಸ್ ಹೊಂದಿವೆ. ಕ್ರೊವೇಷ್ಯಾ ತನ್ನ ಕೊನೆಯ ಪಂದ್ಯದಲ್ಲಿ ಬೆಲ್ಜಿಯಂ ಜತೆ ಡ್ರಾ ಮಾಡಿಕೊಂಡರೂ ನಾಕೌಟ್ ಹಂತ ಪ್ರವೇಶಿಸಲಿದೆ.

ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಸ್ಥಾನ; ಡಿ.10 ರಂದು ಚುನಾವಣೆ

ಉಷಾ ಅವಿರೋಧ ಆಯ್ಕೆ ಖಚಿತ

ನವದೆಹಲಿ (ಪಿಟಿಐ): ದಿಗ್ಗಜ ಅಥ್ಲೀಟ್ ಪಿ.ಟಿ. ಉಷಾ ಅವರು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಮೊದಲ ಮಹಿಳಾ ಅಧ್ಯಕ್ಷೆಯಾಗುವುದು ಖಚಿತವಾಗಿದೆ. ಡಿಸೆಂಬರ್ 10ರಂದು ನಿಗದಿಯಾಗಿರುವ ಚುನಾವಣೆಯ ಅಧ್ಯಕ್ಷ ಹುದ್ದೆಗೆ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದಾರೆ.

58 ವರ್ಷದ ಉಷಾ, ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನ 400 ಮೀ. ಹರ್ಡಲ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು. ಎರಡು ದಶಕಗಳ ಕಾಲ ಭಾರತ ಮತ್ತು ಏಷ್ಯಾ ಅಥ್ಲೆಟಿಕ್ಸ್‌ನಲ್ಲಿ ಮಿಂಚಿದ್ದ ಅವರು 2000ನೇ ಇಸ್ವಿಯಲ್ಲಿ ಹಲವು ಪದಕಗಳೊಂದಿಗೆ ನಿವೃತ್ತರಾಗಿದ್ದರು.

ಐಒಎಯ 95 ವರ್ಷಗಳ ಇತಿಹಾಸದಲ್ಲಿ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳಲಿರುವ ಮೊದಲ ಒಲಿಂಪಿಯನ್ ಮತ್ತು ಅಂತರರಾಷ್ಟ್ರೀಯ ಪದಕ ವಿಜೇತೆ ಎಂಬ ಗೌರವ ಉಷಾ ಅವರದಾಗಲಿದೆ.

ಮಹಾರಾಜ ಯಾದವೀಂದ್ರ ಸಿಂಗ್ ಬಳಿಕ ಐಒಎ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳಲಿರುವ ಮೊದಲ ಕ್ರೀಡಾಪಟು ಎಂಬ ಶ್ರೇಯವೂ ಉಷಾ ಅವರದು. 1938–1960ರ ಅವಧಿಯಲ್ಲಿ ಯಾದವೀಂದ್ರ ಸಿಂಗ್ ಅಧ್ಯಕ್ಷ ಸ್ಥಾನ ನಿಭಾಯಿಸಿದ್ದರು. ಕ್ರಿಕೆಟಿಗ ಆಗಿದ್ದ ಅವರು 1934ರಲ್ಲಿ ಟೆಸ್ಟ್ ಪಂದ್ಯವೊಂದನ್ನು ಆಡಿದ್ದರು.

ಮುಖ್ಯಾಂಶಗಳು

- ಐಒಎಯ ಅಧ್ಯಕ್ಷ ಹುದ್ದೆ ವಹಿಸಿಕೊಳ್ಳಲಿರುವ ಮೊದಲ ಒಲಿಂಪಿಯನ್
- ನಾಮಪತ್ರ ಸಲ್ಲಿಕೆಗೆ ಭಾನುವಾರ ಕೊನೆಯ ದಿನ

'ಪಯ್ಯೋಳಿ ಎಕ್ಸ್‌ಪ್ರೆಸ್' ಖ್ಯಾತಿಯ ಕೇರಳದ ಉಷಾ ಅವರನ್ನು ಭಾರತೀಯ ಜನತಾ ಪಕ್ಷವು ಜುಲೈನಲ್ಲಿ ರಾಜ್ಯಸಭಾ ಸದಸ್ಯರಾಗಿ ನಾಮನಿರ್ದೇಶನ ಮಾಡಿತ್ತು.

ಉಷಾ ಅವರು ಭಾನುವಾರ ವಿವಿಧ ಸ್ಥಾನಗಳಿಗೆ ಸ್ಪರ್ಧಿಸಿರುವ ತಮ್ಮ ತಂಡದ 14 ಜನರೊಂದಿಗೆ ಅಧ್ಯಕ್ಷ ಹುದ್ದೆಗೆ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆಗೆ ಭಾನುವಾರವೇ ಕೊನೆಯ ದಿನವಾಗಿತ್ತು.

ಚುನಾವಣಾಧಿಕಾರಿ ಉಮೇಶ್ ಸಿನ್ಹಾ ಅವರು ಶುಕ್ರವಾರ ಮತ್ತು ಶನಿವಾರ ಯಾವುದೇ ನಾಮಪತ್ರಗಳನ್ನು ಸ್ವೀಕರಿಸಿರಲಿಲ್ಲ. ಆದರೆ ಭಾನುವಾರ ವಿವಿಧ ಹುದ್ದೆಗಳಿಗೆ 24 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಒಬ್ಬರು ಉಪಾಧ್ಯಕ್ಷೆ, ಒಬ್ಬ ಜಂಟಿ ಕಾರ್ಯದರ್ಶಿ (ಮಹಿಳೆ) ಹುದ್ದೆಗೆ ಸ್ಪರ್ಧೆ ನಡೆಯಲಿದೆ. ಕಾರ್ಯಕಾರಿ ಕೌನ್ಸಿಲ್‌ನ ನಾಲ್ಕು ಸದಸ್ಯ ಸ್ಥಾನಗಳಿಗೆ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಅಧ್ಯಕ್ಷ, ಹಿರಿಯ ಉಪಾಧ್ಯಕ್ಷ, ಇಬ್ಬರು ಉಪಾಧ್ಯಕ್ಷರು (ತಲಾ ಒಬ್ಬ ಮಹಿಳೆ ಮತ್ತು ಪುರುಷ), ಒಬ್ಬ ಖಜಾಂಚಿ, ಇಬ್ಬರು ಜಂಟಿ ಕಾರ್ಯದರ್ಶಿಗಳು (ತಲಾ ಒಬ್ಬ ಮಹಿಳೆ ಮತ್ತು ಪುರುಷ), ಆರು ಮಂದಿ ಕಾರ್ಯಕಾರಿ ಮಂಡಳಿ ಸದಸ್ಯರ ಆಯ್ಕೆಗೆ ಚುನಾವಣೆ ನಡೆಯಬೇಕಿದೆ

'ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆಯಾಗಿ ಆಯ್ಕೆಯಾಗಿರುವ ಗೋಲ್ಡನ್ ಗರ್ಲ್ ಪಿ.ಟಿ. ಉಷಾ ಅವರಿಗೆ ಅಭಿನಂದನೆಗಳು. ಪ್ರತಿಷ್ಠಿತ ಐಒಎ ಸಂಸ್ಥೆಯ ಪದಾಧಿಕಾರಿಗಳಾಗಲಿರುವ ಎಲ್ಲ ಕ್ರೀಡಾಪಟುಗಳಿಗೆ ಅಭಿನಂದಿಸುವೆ. ಅವರ ಕುರಿತು ದೇಶ ಹೆಮ್ಮೆ ಪಡುತ್ತದೆ' ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಕಿರಣ್ ರಿಜಿಜು ಟ್ವೀಟ್ ಮಾಡಿದ್ದಾರೆ.

ಕೇರಳದ ಪ್ರತಿಭೆ

ಜನನ ಜೂನ್ **27, 1964**
ವಯಸ್ಸು **58**
ರಾಜ್ಯಸಭಾ ಸದಸ್ಯೆ
ಅಥ್ಲೆಟಿಕ್ಸ್‌ನಲ್ಲಿ ಸಕ್ರಿಯರಾಗಿದ್ದ ಅವಧಿ: **1976-2000**

ಪ್ರಮುಖ ಸಾಧನೆಗಳು

- ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಚಿನ್ನ ಸೇರಿ 11 ಪದಕ (ಅವಧಿ: 1982–1994)
- ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 14 ಚಿನ್ನ ಸೇರಿ 23 ಪದಕ (ಅವಧಿ: 1983–98)
- 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ನಾಲ್ಕನೇ ಸ್ಥಾನ

ಸ್ಪರ್ಧಿಸಿದ್ದ ಪ್ರಮುಖ ವಿಭಾಗಗಳು

100 ಮೀ., **200** ಮೀ., **400** ಮೀ., **400** ಮೀ. ಹರ್ಡಲ್ಸ್, **4X100** ಮೀ. ರಿಲೇ ಮತ್ತು **4X400** ಮೀ. ರಿಲೇ.

ಯೂತ್ ಬಾಕ್ಸಿಂಗ್: ಚಿನ್ನ ಗೆದ್ದ ರವೀನಾ

ನವದೆಹಲಿ (ಪಿಟಿಐ): ಹಾಲಿ ಏಷ್ಯಾ ಚಾಂಪಿಯನ್ ರವೀನಾ ಅವರು ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಇದರೊಂದಿಗೆ ಭಾರತ ಒಟ್ಟು 11 ಪದಕಗಳನ್ನು ತನ್ನದಾಗಿಸಿಕೊಂಡಿತು.

ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಭಾನುವಾರ ಮಹಿಳೆಯರ 63 ಕೆಜಿ ವಿಭಾಗದ ಫೈನಲ್‌ನಲ್ಲಿ ರವೀನಾ ನೆದರ್ಲೆಂಡ್ಸ್‌ನ ಮೇಗನ್ ಡಿಕ್ಲೆರ್ ಅವರನ್ನು ಪರಾಭವಗೊಳಿಸಿದರು.

ಜಿದ್ದಾಜಿದ್ದಿ ಬೌಟ್‌ನಲ್ಲಿ ಉತ್ತಮ ಆರಂಭ ಪಡೆಯದಿದ್ದರೂ, ತಾಂತ್ರಿಕ ಸಾಮರ್ಥ್ಯ ಮತ್ತು ಬಿರುಸಿನ ಪಂಚ್‌ಗಳ ಮೂಲಕ ರವೀನಾ 4–3ರಿಂದ ಗೆಲುವು ಒಲಿಸಿಕೊಂಡರು.

ಇನ್ನೊಂದು ಫೈನಲ್ ಬೌಟ್‌ನಲ್ಲಿ ಕೀರ್ತಿ (81+ ಕೆಜಿ) 0–5ರಿಂದ ಯೂರೋಪಿಯನ್ ಯೂತ್ ಚಾಂಪಿಯನ್, ಐರ್ಲೆಂಡ್‌ನ ಕ್ಲಿಯೊನಾ ಎಲಿಜಬೆತ್ ಡಿ ಆರ್ಕಿ ಎದುರು ಸೋತು ಬೆಳ್ಳಿ ಗಳಿಸಿದರು.

ಭಾರತದ ಒಟ್ಟು 17 ಬಾಕ್ಸರ್‌ಗಳು ಕ್ವಾರ್ಟರ್‌ಫೈನಲ್ ತಲುಪಿದ್ದರು.

ಈ ವರ್ಷದ ಚಾಂಪಿಯನ್‌ಷಿಪ್‌ನಲ್ಲಿ 73 ದೇಶಗಳ 600 ಬಾಕ್ಸರ್‌ಗಳು ಪಾಲ್ಗೊಂಡಿದ್ದರು.

ಪ್ರೊ ಕಬಡ್ಡಿ: ಬೆಂಗಳೂರು ಜಯಭೇರಿ

ಹೈದರಾಬಾದ್: ಭರತ್ ಗಳಿಸಿದ ಅಮೋಘ 23 ಪಾಯಿಂಟ್ಸ್ ಮತ್ತು ವಿಕಾಶ್ ಖಂಡೋಲ (10 ಪಾಯಿಂಟ್ಸ್) ಅವರ ಆಟದ ಬಲದಿಂದ ಬೆಂಗಳೂರು ಬುಲ್ಸ್ ತಂಡವು ರೋಚಕ ಜಯ ಸಾಧಿಸಿತು.

ಇಲ್ಲಿಯ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ನಡೆದ ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ 52–49ರಿಂದ ದಬಾಂಗ್ ಡೆಲ್ಲಿ ತಂಡವನ್ನು ಪರಾಭವಗೊಳಿಸಿತು.

ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ ಪಂದ್ಯದ ಮೊದಲಾರ್ಧದಲ್ಲಿ ಡೆಲ್ಲಿ 25–16 ಪಾಯಿಂಟ್ಸ್‌ನಿಂದ ಮುಂದಿತ್ತು. ಆದರೆ ದ್ವಿತೀಯಾರ್ಧದಲ್ಲಿ ಪುಟಿದೆದ್ದು ಗೆಲುವು ಒಲಿಸಿಕೊಂಡಿತು. ದ್ವಿತೀಯಾರ್ಧದಲ್ಲಿ ಬೆಂಗಳೂರು 36 ಪಾಯಿಂಟ್ಸ್ ಗಳಿಸಿದರೆ, ಡೆಲ್ಲಿ ಕೇವಲ 24 ಪಾಯಿಂಟ್ಸ್ ಕಲೆಹಾಕಿತು.

ಡೆಲ್ಲಿ ತಂಡಕ್ಕಾಗಿ ವಿಜಯ್ ಮಲಿಕ್ (14 ಪಾಯಿಂಟ್ಸ್) ಮತ್ತು ನವೀನ್ ಕುಮಾರ್ (11) ನಡೆಸಿದ ಪ್ರಯತ್ನ ವ್ಯರ್ಥವಾದವು.

ಇನ್ನೊಂದು ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡವು 42–39ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಪರಾಭವಗೊಳಿಸಿತು. ತಲೈವಾಸ್ ಪರ ನರೇಂದರ್ 13 ಮತ್ತು ನಾಯಕ ಅಜಿಂಕ್ಯ ಪವಾರ್ 12 ಪಾಯಿಂಟ್ಸ್ ಕಲೆಹಾಕಿದರು.

ಗುಜರಾತ್ ತಂಡದಲ್ಲಿ ಪ್ರತೀಕ್ ದಹಿಯಾ (10) ಮಿಂಚಿದರು. ಚಂದ್ರನ್ ರಂಜೀತ್ ಏಳು ಪಾಯಿಂಟ್ಸ್ ಗಳಿಸಿದರು.

ಇಂದಿನ ಪಂದ್ಯಗಳು

ಯುಪಿ ಯೋಧಾ– ಬೆಂಗಾಲ್ ವಾರಿಯರ್ಸ್

ತೆಲುಗು ಟೈಟನ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	18	12	4	2	69
ಬೆಂಗಳೂರು	18	11	6	1	63
ಜೈಪುರ	17	11	6	0	59
ಯುಪಿ	17	9	6	2	55
ತಲೈವಾಸ್	18	8	7	3	53
ಡೆಲ್ಲಿ	18	9	9	0	51

ಹಾಕಿ: ಭಾರತಕ್ಕೆ ಮತ್ತೆ ನಿರಾಸೆ

ಅಡಿಲೇಡ್ (ಪಿಟಿಐ): ಬ್ಲೇಕ್ ಗೋವರ್ಸ್ ಅವರ ಹ್ಯಾಟ್ರಿಕ್ ನೆರವಿನಿಂದ ಆಸ್ಟ್ರೇಲಿಯಾ ತಂಡ ಐದು ಟೆಸ್ಟ್ ಪಂದ್ಯಗಳ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ 7-4 ಗೋಲುಗಳಿಂದ ಭಾರತದ ವಿರುದ್ಧ ಗೆದ್ದಿತು.

ಈ ಜಯದ ಮೂಲಕ ಆತಿಥೇಯ ತಂಡ ಸರಣಿಯಲ್ಲಿ 2–0 ಮುನ್ನಡೆ ಗಳಿಸಿತು. ಶನಿವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಭಾರತ 4–5 ಗೋಲುಗಳಿಂದ ಸೋತಿತ್ತು. ಮೂರನೇ ಪಂದ್ಯ ಬುಧವಾರ ನಡೆಯಲಿದೆ.